ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಮತ್ತೆ ಚರ್ಚ್ ದಾಳಿಗೆ ಚೆಡ್ಡಿಗಳ ಸಂಚು

ಸೆಪ್ಟೆಂಬರ್ 14, 2011 ಪುಟ 20 ರೂ. 14/-



ಜೊತೆಜೊತೆಯಲಿ ಜೈಲಿಗೆ



ಜೇಕೆ ಪಡೆಯ ಬ್ರೂಸ್ಲಿ ಆತ್ಮಹತ್ಯೆ



ಕಂಡೋರ ಆಸ್ತಿ ನುಂಗುವ ನಂದೀಶ್ ರೆಡ್ಡಿ



ರಾಮುಲು ಬಂಟ ಬೀದಿ ಹೆಣವಾದ

ಕನಕನ ಕಿಂಡಿಯೂ ಪೇಜಾವರ ಕಂತ್ರಿ ಬುದ್ಧಿಯೂ

ಈಗಲೂ ಶಿವಮೊಗ್ಗ-ಬೆಂಗಳೂರು ರೋಡು ಅಷ್ಟಕ್ಕಷ್ಟೇ. ಇನ್ನು ಆ ಕಾಲದಲ್ಲಿ ಹೇಗಿತ್ತು ಎಂದು ಊಹಿಸಿ. ಇನ್ನು ನನ್ನವರ ಡ್ರೈವಿಂಗ್ ಬಹಳ ರ್‍ಯಾಶ್. ಆಗ ಮಳೆಗಾಲ. ಆಗತಾನೆ ಮಳೆ ನಿಂತಿತ್ತು. ಆದರೆ ರಸ್ತೆಯಲ್ಲಿದ್ದ ಗುಂಡಿಗಳಲ್ಲಿ ನೀರು ತುಂಬಿತ್ತು. ಭದ್ರಾವತಿ ದಾಟುತ್ತಿದ್ದಂತೆ ಇವರು ಸ್ಕೂಟರ್‌ಅನ್ನು ವೇಗವಾಗಿ ಓಡಿಸಿ ಅದು ಒಂದು ಗುಂಡಿಯನ್ನು ಹಾದು ಹೋಗುವಾಗ ನಾನು ಸ್ಕೂಟರ್‌ನಿಂದ ಜಾರಿ ರಸ್ತೆಗೆ ಬಿದ್ದೆ. ನನ್ನ ಕೈ ಕಾಲು ತರಚಿತ್ತು. ತೊಟ್ಟಿದ್ದ ಸೀರೆ ಕೆಸರುಮಯವಾಗಿತ್ತು, ಸ್ವೆಟರ್ ಕಿತ್ತು ಹೋಗಿತ್ತು. ಅಲ್ಲೆ ಹತ್ತಿರದಲ್ಲಿದ್ದ ಒಂದು ಮರದ ಹಿಂದೆ ಹೋಗಿ ಬಟ್ಟೆ ಬದಲಾಯಿಸಿದ ನಂತರ ನಮ್ಮ ಪ್ರಯಾಣ ಮುಂದುವರೆಯಿತು.


ಅರಕೆರೆಯ ತುಂಗಾ ನದಿತಟದಲ್ಲಿ...


ಸ್ಕೂಟರ್ ದಿನಗಳು

ಲಂಕೇಶರು ಪ್ರತಿ ದಿನ ಕಾಲೇಜಿಗೆ ಸೈಕಲ್‌ನಲ್ಲಿ ಹೋಗುತ್ತಿದ್ದರು. ಅವತ್ತಿನ ಶಿವಮೊಗ್ಗೆಯಲ್ಲಿ ಸೈಕಲ್ಲೇ ಒಂದು ಲಕ್ಸುರಿ ವಾಹನವಾಗಿತ್ತು, ಯೌವನದ ಹುಮ್ಮಸ್ಸು, ಹೊಸ ಬದುಕಿನ ಆಶಯಗಳಿಂದ ತುಂಬಿದ್ದ ನಮ್ಮಿಬ್ಬರಿಗೂ ಒಂದು ಸ್ಕೂಟರ್ ಕೊಂಡುಕೊಂಡು ಅದರಲ್ಲಿ ಜುಂ ಅಂತ ಓಡಾಡುವ ಆಸೆ. ಆದರೆ ಸ್ಕೂಟರ್ ಕೊಳ್ಳಲು ನಮ್ಮ ಹತ್ತಿರ ದುಡ್ಡಿರಲಿಲ್ಲ. ಆಗ ಮದುವೆ ಸಮಯದಲ್ಲಿ ನನಗೆ ಕೊಟ್ಟಿದ್ದ ಒಡವೆ ಇತ್ತಲ್ಲ, ಅದನ್ನು ಇಟ್ಟುಕೊಂಡು ಏನು ಮಾಡುವುದು? ಅದಕ್ಕೆ ಬದಲಾಗಿ ಚಿನ್ನವನ್ನೆಲ್ಲ ಮಾರಿ ಒಂದು ಸ್ಕೂಟರ್ ತೆಗೆದುಕೊಳ್ಳೋಣ ಎಂದು ನಾವಿಬ್ಬರೂ ನಿರ್ಧರಿಸಿದೆವು.

ಆಗ ಶಿವಮೊಗ್ಗೆಯಲ್ಲಿ ಸ್ಕೂಟರ್ ಶೋರೂಮ್‌ಗಳಿರಲಿಲ್ಲ, ಆದ್ದರಿಂದ ಬೆಂಗಳೂರಿನಲ್ಲಿದ್ದ ನನ್ನ ಭಾವನ ತಮ್ಮ ದಕ್ಷಿಣಾಮೂರ್ತಿಗೆ ಲಂಕೇಶರು ಕಾಗದ ಬರೆದರು. ದಕ್ಷಿಣಾಮೂರ್ತಿ ಅವರು ಆಗ ಸ್ಕೂಟರ್ ಗ್ಯಾರೇಜ್ ಒಂದನ್ನು ಹೊಂದಿದ್ದರು. ಸ್ವಲ್ಪ ದಿನಗಳಲ್ಲೇ ದಕ್ಷಿಣಾಮೂರ್ತಿ ಅವರು ಒಂದು ಸ್ಕೂಟರ್ ಖರೀದಿಸಿ ಅದನ್ನು ಶಿವಮೊಗ್ಗೆಗೆ ಓಡಿಸಿಕೊಂಡು ಬಂದರು. ಅದೊಂತರ ವಿಚಿತ್ರವಾಗಿ ಕಾಣಿಸುತ್ತಿದ್ದ ಸ್ಕೂಟರ್. ಏಕೆಂದರೆ ಅದರ ಪೆಟ್ರೋಲ್ ಟ್ಯಾಂಕ್ ಹೊರಗಡೆ ಕಾಣಿಸುತ್ತಿತ್ತು.

ನಮ್ಮಿಬ್ಬರಿಗೂ ಸಂಭ್ರಮ. ಅದನ್ನು ಏರಿ ನಾವು ಶಿವಮೊಗ್ಗೆಯ ತುಂಬ ಸುತ್ತಾಡಿದ್ದೇ ಸುತ್ತಾಡಿದ್ದು, ಆಗ ಪೆಟ್ರೋಲ್ ಗ್ಯಾಲನ್ ಲೆಕ್ಕದಲ್ಲಿ ಸಿಗುತ್ತಿತ್ತಲ್ಲದೆ 20 ರೂಪಾಯಿಗಳಿಗೆ ತಿಂಗಳೆಲ್ಲಾ ತಿರುಗಾಡಬಹುದಿತ್ತು, ಈ ಮಧ್ಯೆ ಒಂದು ಕ್ಯಾಮೆರಾ ತೆಗೆದುಕೊಂಡು ಬಂದೆವು. ಅರಕೆರೆ ಅಂತ ಶಿವಮೊಗ್ಗಕ್ಕೆ ನಾಲ್ಕು ಕಿಲೋಮೀಟರ್ ದೂರದಲ್ಲಿ ಒಂದು ಊರಿದೆ. ಅಲ್ಲಿ ನದಿ ಹರಿಯುತ್ತೆ, ಅಲ್ಲಿಗೆ ಊಟ ಕಟ್ಟಿಕೊಂಡು ಹೋಗುತ್ತಿದ್ದೆವು. ಗಾಜನೂರಿನ ಡ್ಯಾಂ ಹತ್ತಿರ ಒಂದು ಟಿಬಿ ಇದೆ. ಅಲ್ಲಿ ಹೋಗಿ ಒಮ್ಮೊಮ್ಮೆ ಉಳಿದುಕೊಳ್ಳುತ್ತಿದ್ದೆವು. ಅಲ್ಲೆಲ್ಲಾ ಫೋಟೋ ತೆಗೆದುಕೊಳ್ಳುತ್ತಿದ್ದೆವು.

ಶಿವಮೊಗ್ಗೆ ಸರ್ಕ್ಯೂಟ್ ಹೌಸ್ ರೋಡ್‌ನಲ್ಲಿ ಲಾಂಗ್ ಡ್ರೈವ್ ಹೋಗುತ್ತಿದ್ದೆವು. ಒಮ್ಮೆ ಲಂಕೇಶರು "ನೀನು ಡ್ರೈವ್ ಮಾಡು" ಅಂತ ನನಗೆ ಸ್ಕೂಟರ್ ಕೊಟ್ಟು ಓಡಿಸಲು ಹೇಳಿದರು. ನನಗೆ ಸೈಕಲ್ ಓಡಿಸಿ ಅಭ್ಯಾಸವಿತ್ತು,



• ಇಂದಿರಾ ಲಂಕೇಶ್

ಆದ್ದರಿಂದ ಸ್ವಲ್ಪ ದೂರ ಸ್ಕೂಟರ್ ಓಡಿಸಿದೆ. ರೋಡ್‌ನಲ್ಲಿ ನಡೆದುಹೋಗುತ್ತಿದ್ದ ಕೆಲ ಹೆಂಗಸರು ಸ್ಕೂಟರ್ ಡ್ರೈವ್ ಮಾಡುತ್ತಿದ್ದ ನನ್ನನ್ನು ಆಚ್ಚರಿಯಿಂದ ನೋಡಿದ್ದೇ ನೋಡಿದ್ದು.

ಒಮ್ಮೆ ಏನಾಯಿತೆಂದರೆ ನಾವಿಬ್ಬರು ಹೋಟೆಲ್ ಒಂದಕ್ಕೆ ಹೋದೆವು. ಅವತ್ತು ಅಲ್ಲಿ ನನ್ನನ್ನು ನೋಡಿದ ಅಪ್ಪಯ್ಯನ ಸ್ನೇಹಿತರೊಬ್ಬರು ಆಮೇಲೆ ಅಪ್ಪಯ್ಯನನ್ನು ಭೇಟಿಯಾಗಿ "ನಿಮ್ಮ ಮಗಳನ್ನು ತುಂಬಾ ಬಡವರಿಗೆ ಕೊಟ್ಟಿದ್ದೀರಾ? ಆ ಹುಡುಗಿ ಬರೀ ಕರಿಮಣಿ ಹಾಕಿಕೊಂಡಿತ್ತು?" ಎಂದು ಹೇಳಿದರಂತೆ. ಆಗ ನಮ್ಮ ಸ್ಕೂಟರ್ ಯಾವ ಹಣದಿಂದ ಬಂದಿತ್ತು ಎಂದು ಅಪ್ಪಯ್ಯನಿಗೆ ಅರ್ಥವಾಯಿತು. ಮನೆಗೆ ಬಂದ ಅಪ್ಪಯ್ಯ ನಮ್ಮಿಬ್ಬರ ಮೇಲೆ ತುಂಬಾ ಕೂಗಾಡಿದರು. ಆಗ ಹೆಂಗಸರು ಸ್ಕೂಟರ್ ಮೇಲೆ ಕೂರುತ್ತಿರಲಿಲ್ಲ, ಆದರೆ ನಾನು ಕೂರುತ್ತಿದ್ದದ್ದು ಅಪ್ಪಯ್ಯನಿಗೆ ಇಷ್ಟವಿರಲಿಲ್ಲ, ಚಿನ್ನ ಮಾರಿದ್ದು ಮತ್ತು ಸ್ಕೂಟರ್ ಮೇಲೆ ಕೂತು ತಿರುಗಾಡುತ್ತಿದ್ದದ್ದು, ಎರಡೂ ಸೇರಿ ಅಪ್ಪಯ್ಯನ ಕೋಪ ನೆತ್ತಿಗೇರಿ ನನ್ನನ್ನು ಚೆನ್ನಾಗಿ ಬೈದಿದ್ದರು.

ಆದರೆ ಅದ್ಯಾವುದಕ್ಕೂ ಕೇರ್ ಮಾಡದ ನಾವು ಹಲವೇ ತಿಂಗಳಲ್ಲಿ ಆ ಸ್ಕೂಟರ್ ಮಾರಿ ಆಗ ಅಪಾರ ಬೇಡಿಕೆಯಲ್ಲಿದ್ದ ಲ್ಯಾಂಬ್ರೆಟಾ ಸ್ಕೂಟರ್ ಖರೀದಿಸಿದೆವು. ನಮ್ಮಿಬ್ಬರಿಗೂ ಈ ಲ್ಯಾಂಬ್ರೆಟಾ ಸ್ಕೂಟರ್‌ನಲ್ಲಿ ಬೆಂಗಳೂರಿನಲ್ಲಿ ಸುತ್ತಾಡುವ ಆಸೆ. ಒಂದು ದಿನ ನಾವಿಬ್ಬರು ಸ್ಕೂಟರ್‌ನಲ್ಲೇ ಬೆಂಗಳೂರಿಗೆ ಹೊಗುವುದೆಂದು ಏಕಾಏಕಿ ನಿರ್ಧರಿಸಿದೆವು. ನನ್ನ ತಮ್ಮನಿಗೆ ಮಾತ್ರ ಈ ಬಗ್ಗೆ ಹೇಳಿ ಬೆಳಗ್ಗಿನ ಜಾವ 4.30ಕ್ಕೆ ಹೊರಟೆವು. ಸ್ಕೂಟರ್ ಶಬ್ದ ಅಪ್ಪಯ್ಯನಿಗೆ ಕೇಳಿಸಬಾರದೆಂದು ಮನೆಯಿಂದ ಸ್ವಲ್ಪ ದೂರ ಸ್ಕೂಟರ್‌ಅನ್ನು ತಳ್ಳಿಕೊಂಡು ಹೋಗಿ ಆಮೇಲೆ ಸ್ಟಾರ್ಟ್ ಮಾಡಿಕೊಂಡು ಬೆಂಗಳೂರಿಗೆ ಹೊರಟೆವು.

ಈಗಲೂ ಶಿವಮೊಗ್ಗ-ಬೆಂಗಳೂರು ರೋಡು ಅಷ್ಟಕ್ಕಷ್ಟೇ. ಇನ್ನು ಆ ಕಾಲದಲ್ಲಿ ಹೇಗಿತ್ತು ಎಂದು ಊಹಿಸಿ. ಇನ್ನು ನನ್ನವರ ಡ್ರೈವಿಂಗ್ ಬಹಳ ರ್‍ಯಾಶ್. ಆಗ ಮಳೆಗಾಲ. ಆಗ ತಾನೆ ಮಳೆ ನಿಂತಿತ್ತು, ಆದರೆ ರಸ್ತೆಯಲ್ಲಿದ್ದ ಗುಂಡಿಗಳಲ್ಲಿ ನೀರು ತುಂಬಿತ್ತು. ಭದ್ರಾವತಿ ದಾಟುತ್ತಿದ್ದಂತೆ ಇವರು ಸ್ಕೂಟರ್‌ಅನ್ನು ವೇಗವಾಗಿ ಓಡಿಸಿ ಅದು ಒಂದು ಗುಂಡಿಯನ್ನು ಹಾದು ಹೋಗುವಾಗ ನಾನು ಸ್ಕೂಟರ್‌ನಿಂದ ಜಾರಿ ರಸ್ತೆಗೆ ಬಿದ್ದೆ.



ಸ್ಕೂಟರ್ ಒಂದಷ್ಟು ದೂರ ಹೋದಮೇಲೆ ಅವರು ಆದನ್ನು ನಿಲ್ಲಿಸಿ ನನ್ನ ಹತ್ತಿರ ಬಂದರು. ನನ್ನ ಕೈ ಕಾಲು ತರಚಿತ್ತು, ತೊಟ್ಟಿದ್ದ ಸೀರೆ ಕೆಸರುಮಯವಾಗಿತ್ತು, ಸ್ವೆಟರ್ ಕಿತ್ತು ಹೋಗಿತ್ತು. ಅಲ್ಲೆ ಹತ್ತಿರದಲ್ಲಿದ್ದ ಒಂದು ಮರದ ಹಿಂದೆ ಹೋಗಿ ಬಟ್ಟೆ ಬದಲಾಯಿಸಿದ ನಂತರ ನಮ್ಮ ಪ್ರಯಾಣ ಮುಂದುವರೆಯಿತು.

ಅಪ್ಪಯ್ಯನಿಗೆ ನಾವು ಸ್ಕೂಟರ್‌ನಲ್ಲಿ ಬೆಂಗಳೂರಿಗೆ ಹೋದ ವಿಷಯ ತಿಳಿದು ಕೆಂಡಮಂಡಲವಾಗಿ "ಇವನನ್ನು ಮದುವೆ ಆದಮೇಲೆ ಇಂದೂ ಹಾಳಾಗಿ ಹೋದಳು" ಎಂದು ಕೂಗಾಡಿದರಂತೆ.

ಮಧ್ಯಾಹ್ನ ಎರಡು ಗಂಟೆಗೆ ಬೆಂಗಳೂರು ತಲುಪಿ ಮಲಗಿದ ನಾವು ಮಾರನೆ ದಿನ ಬೆಳಗ್ಗೆ ಎದ್ದೆವು. ಸ್ಕೂಟರ್‌ನಲ್ಲಿ ಬೆಂಗಳೂರನ್ನು ಸುತ್ತುವುದಕ್ಕೆ ಹೊರಟೆವು. ಸಾಯಂಕಾಲ ಮನೆಗೆ ಬಂದಾಗ ನನಗೆ ಬ್ಲೀಡಿಂಗ್ ಕಾಣಿಸಿಕೊಂಡಿತು. ನನ್ನ ಅಕ್ಕನೊಂದಿಗೆ ಡಾಕ್ಟರ್ ಹತ್ತಿರ ಹೋದೆ. ಆ ಡಾಕ್ಟರ್‌ಗೆ ನನಗೆ ಏನಾಗಿದೆ ಎಂದು ಗೊತ್ತಾಗಲಿಲ್ಲ, ಆಕೆ ಒಂದು ಇಂಜೆಕ್ಷನ್ ಕೊಟ್ಟು ರೆಸ್ಟ್ ತೆಗೆದುಕೊಳ್ಳುವಂತೆ ಹೇಳಿದರು. ನಾಲ್ಕೈದು ದಿನ ಬೆಂಗಳೂರಿನಲ್ಲಿ ಕಳೆದೆವು. ನನ್ನನ್ನು ಹೊಟ್ಟೆನೋವು ಕಾಡುತ್ತಿದ್ದರಿಂದ ಸ್ಕೂಟರ್‌ಅನ್ನು ಟ್ರೈನಿನಲ್ಲಿ ಹಾಕಿಕೊಂಡು ನಾವೂ ಟ್ರೈನಿನಲ್ಲಿ ಶಿವಮೊಗ್ಗೆಗೆ ವಾಪಸ್ ಬಂದೆವು.

ನನ್ನಪ್ಪಯ್ಯನಿಗೆ ನನ್ನ ಮೇಲೆ ಸಿಟ್ಟಿದ್ದಿದರಿಂದ ಅವರು ನನ್ನನ್ನು ಮಾತನಾಡಿಸಲೇ ಇಲ್ಲ, ಅವತ್ತು ರಾತ್ರಿ ಬ್ಲೀಡಿಂಗ್ ಇನ್ನೂ ಹೆಚ್ಚಾಯಿತು. ಇವರಿಗೆ "ರೀ, ಹೊಟ್ಟೆ ತುಂಬಾ ನೋಯುತ್ತಿದೆ" ಎಂದರೆ "ಸ್ವಲ್ಪ ಸಹಿಸಿಕೋ. ಬೆಳಗ್ಗೆ ಡಾಕ್ಟರ್ ಹತ್ತಿರ ಹೋಗೋಣ" ಎಂದರು. ಯಾರಿಗೆ ಹೇಳಲಿ ನನ್ನ ನೋವನ್ನು? ಬೆಡ್‌ಶೀಟ್ ರಕ್ತಮಯವಾಗಿತ್ತು, ಹಲ್ಲು ಕಚ್ಚಿಕೊಂಡು ರಾತ್ರಿಯನ್ನು ಅದು ಹೇಗೋ ಕಳೆದೆ.

ಬೆಳಗ್ಗೆ ಹೋಗಿ ಡಾಕ್ಟರ್ ಜಯಮ್ಮ ಎಂಬುವವರ[ನ್ನು] ಕರೆದುಕೊಂಡು ಬಂದರು. ನನ್ನನ್ನು ಪರೀಕ್ಷಿಸಿದ ಡಾಕ್[ಟರ್] ನನಗೆ ಗರ್ಭಪಾತ ಆಗಿರುವುದಾಗಿ ಹೇಳಿ ನನ್ನನ್ನು ಆಸ್ಪ[ತ್ರೆಗೆ] ಸೇರಿಸಿ ನನ್ನ ಗರ್ಭವನ್ನು ಕ್ಲೀನ್ ಮಾಡಿದರು. ನಾ[ನು] ಪ್ರೆಗ್ನೆಂಟ್ ಆಗಿದ್ದೆ ಎಂಬುದೇ ನಮ್ಮಿಬ್ಬರಿಗೆ ಗೊತ್ತಿರಲಿಲ್ಲವಾ[ದ್ದ]ರಿಂದ ಗರ್ಭಪಾತದ ಸುದ್ದಿ ಕೇಳಿ ನಾವಿಬ್ಬರು ತತ್ತರಿ[ಸಿ] ಹೋದೆವು. ಇದನ್ನೆಲ್ಲ ನೋಡಿ ನನ್ನ ಅಪ್ಪಯ್ಯ ಒಬ್ಬ[ರೇ] ಅಳುತ್ತಿದ್ದರು.

****

ಇನ್ನು ನಿಮ್ಮಿಬ್ಬರ ಸಹವಾಸ ಸಾಕೆಂದು ನನ್ನ ಅಪ್ಪ[ಯ್ಯ] ಬೇರೆ ಮನೆ ಮಾಡಲು ತೀರ್ಮಾನಿಸಿ ನಾಲ್ಕು ರಸ್ತೆ ಆಚೆ ಇದ್ದ ಬೀದಿಯಲ್ಲಿ ಮನೆ ಮಾಡಿ ಅಲ್ಲಿಗೆ ಶಿ[ಫ್ಟ್] ಆದರು. ಈಗ ಮನೆಯಲ್ಲಿ ನಾನು ಮತ್ತು ಲಂಕೇ[ಶ್] ಮಾತ್ರ ವಾಸವಿದ್ದೆವು. ಅಪ್ಪಯ್ಯನೊಂದಿಗೆ ಅಡು[ಗೆ] ಮಾಡುವವರೂ ಹೋಗಿದ್ದರಿಂದ ಈಗ ನಾನೇ ಅಡು[ಗೆ] ಮಾಡಬೇಕಿತ್ತು, ಆಗ ಈಗಿನಂತೆ ಗ್ಯಾಸ್ ಸ್ಟವ್ ಇರಲಿ[ಲ್ಲ] ಸೌದೆ ಒಲೆ ಮೇಲೆ ಅಡುಗೆ. ಅಡುಗೆ ಮಾಡುವವ[ರು] ಬಂದು ಸಾಂಬಾರ್‌ಪುಡಿ ಮಾಡಿಕೊಡುತ್ತಿದ್ದರಿಂದ ನಾ[ನು] ಅದು ಹೇಗೋ ಸಂಭಾಳಿ[ಸು]ತ್ತಿದ್ದೆ.

ಒಂದು ದಿನ ಲಂಕೇಶರು ರೊಟ್ಟಿ ಮಾಡು ಅಂದರು. ನನಗೆ ರೊಟ್ಟಿ ಮಾಡಲು ಬರಲ್ಲ ಎಂದಿದ್ದಕ್ಕೆ "ಅದು ತುಂಬ[ಾ] ಸುಲಭ. ಅಕ್ಕಿಹಿಟ್ಟಿಗೆ ನೀರ[ು] ಕಲಿಸಿ ಮಾಡಬಹುದು" ಎಂದರು. ಸರಿ ನೋಡೋಣ ಅಂತ ಅವರು ಹೇಳಿದ್ದಂತೆ ರೊಟ್[ಟಿ] ಮಾಡಲು ಪ್ರಯತ್ನಿಸಿದೆ. ಎಲ್ಲಾ ತುಂಡು ತುಂಡಾಗುತ್ತಿತ್ತು. ಲಂಕೇಶ್ ಕೂಡ ಆ ಅಕ್ಕಿಹಿಟ್ಟನಲ್ಲಿ ರೊಟ್ಟಿ ಮಾಡಲು ಟ್ರೈ ಮಾಡಿದರು. ಕೊನೆಗೆ ಇಬ್ಬರೂ ಆ ಯತ್ನವನ್ನು ಬಿಟ್[ಟು] ಹೋಟೆಲ್‌ನಲ್ಲಿ ಊಟ ಮಾಡಿಬಂದೆವು.

ಆದರ ಮುಂದಿನ ಮಂಗಳವಾರ ನನ್ನತ್ತೆ ನಮ್ಮ ಮನೆ[ಗೆ] ಬಂದಾಗ "ಇಂದಿರಾಗೆ ರೊಟ್ಟಿ ಮಾಡುವುದನ್ನು ಕಲಿಸು[ವೆ]" ಅಂತ ಹೇಳಿದರು. ಆಗ ಅತ್ತೆ ಬಿಸಿನೀರಿಗೆ ಹಿಟ್ಟು ಹಾ[ಕಿ] ಸರಿ ಮಾಡಿ ರೊಟ್ಟಿ ತಟ್ಟಿ "ನೀನೂ ತಟ್ಟು ಬಾ" ಎಂದ[ು] ನನ್ನನ್ನು ಕೂರಿಸಿದರು. ನನಗೆ ಅವರಂತೆ ತಟ್ಟಲು ಬರಲಿ[ಲ್ಲ] ನನ್ನತ್ತೆಗೆ ಸಿಟ್ಟು ಬಂದು ಪಕ್ಕದ ಮನೆಗೆ ಹೋಗಿ "ನ[ನ್ನ] ಮಗನಿಗೆ ಹೋಟೆಲ್‌ನಲ್ಲಿ ತಿನ್ನುವುದೇ ಗತಿ ಆಯಿತ[ು] ನನ್ನ ಮೊಮ್ಮಗಳನ್ನು ಮದುವೆ ಮಾಡಿಕೊಂಡಿದ್ದರೆ ಅವನ[ಿಗೆ] ಈ ಸ್ಥಿತಿ ಬರುತ್ತಿತ್ತಾ" ಎಂದು ಬೈದುಕೊಳ್ಳುತ್ತಾ ಕುಳಿತರ[ು].

ನನ್ನ ಆತ್ತೆಯ ಮನೆಯಲ್ಲಿ ರೊಟ್ಟಿಯನ್ನು ಲಟ್ಟಿಸುತ್ತಿ[ರ]ಲಿಲ್ಲ, ಬದಲಾಗಿ ಅಕ್ಕಿ ತರಿಯನ್ನು ಉಂಡೆ ಮಾಡಿ ನೀರ[ು] ಸವರಿ ತಟ್ಟುತ್ತಿದ್ದರು. ಅದಕ್ಕೆ ಕೈರೊಟ್ಟಿ ಎನ್ನುತ್ತಾರೆ. ನನ್ನವರ[ಿಗೆ] ಅಂತಹ ಅಕ್ಕಿ ರೊಟ್ಟಿ, ಜುಣಕ (ಎಳೆ ಬದಿರಿನಪ[...]) ಎಂದರೆ ಬಹಳ ಇಷ್ಟ.

ಅಂತೂಇಂತೂ ಒಂದು ವಾರದಲ್ಲಿ ರೊಟ್ಟಿ ಮಾಡು[ವು]ದನ್ನು ಕಲಿತೆ. ಆದರೂ ನನ್ನ ಅತ್ತೆ ಮಾಡುವಷ್ಟು ಚೆನ್ನಾ[ಗಿ] ನನ್ನ ರೊಟ್ಟಿ ಬರುತ್ತಿರಲಿಲ್ಲ, ಆದ್ದರಿಂದ ಲಂಕೇಶರು ಎ[ಲ್ಲಾ] ಗಂಡಂದಿರಂತೆ "ನಿನ್ನ ಅಡುಗೆ ನನ್ನ ಅಮ್ಮನ ಅಡುಗೆಯಷ್ಟು ರುಚಿಯಾಗಿಲ್ಲ" ಎನ್ನುತ್ತಿದ್ದರು.

(ಮುಂದಿನ ವಾರ[ಕ್ಕೆ])


ನೋ ಕಾಮೆಂಟ್ಸ್

ತಾನು ಲಿಬಿಯಾ ದೇಶದ ಮೇಲಿನ ಅಧಿಕಾರವನ್ನು ಕಳೆದುಕೊಂಡಿದ್ದೇನೆ ಎಂಬ ವಾಸ್ತವವನ್ನು ಗಡಾಫಿ ಒಪ್ಪಿಕೊಳ್ಳಬೇಕಿದೆ.

- ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ

ಪ್ರಣಬ್ ಮುಖರ್ಜಿ ಮತ್ತು ಎ.ಕೆ.ಆಂಟೋನಿ ತರಹದ ಜನರ ನಾಡಿ ಮಿಡಿತ ಗೊತ್ತಿರುವ ರಾಜಕಾರಣಿಗಳು ಅಣ್ಣಾ ಹಜಾರೆ ಅವರನ್ನು ಬಂಧಿಸುವುದು ಸೂಕ್ತ ಕ್ರಮವಲ್ಲ ಎಂದು ಹೇಳಿದರೂ, ಖ್ಯಾತ ವಕೀಲರೆಂದು ಹೆಸರು ಮಾಡಿರುವ ಆದರೆ ಚುನಾವಣೆ ರಾಜಕೀಯವನ್ನು ಅರ್ಥಮಾಡಿಕೊಳ್ಳದ ಪಿ.ಚಿದಂಬರಂ ಮತ್ತು ಕಪಿಲ್ ಸಿಬಲ್ ಅವರ ಅಭಿಪ್ರಾಯವನ್ನು ಮನಮೋಹನ್ ಸಿಂಗ್ ಒಪ್ಪಿಕೊಂಡು ಹಜಾರೆ ಅವರನ್ನು ಬಂಧಿಸಲು ಗ್ರೀನ್‌ಸಿಗ್ನಲ್ ಕೊಟ್ಟರು.

- ಇಂಡಿಯಾ ಟುಡೆ




ಮನಮೋಹನ್ ಸಿಂಗ್ ಅವರು ಪ್ರಧಾನ ಮಂತ್ರಿ ಆದಾಗ ಜನ ಅವರನ್ನು ಶುದ್ಧ ಮನುಷ್ಯ ಎಂದೇ ಭಾವಿಸಿದ್ದರು. ಆದರೀಗ ಅದೇ ಜನ ಅವರನ್ನು ಅತಿ ಭ್ರಷ್ಟ ಸರ್ಕಾರವನ್ನು ನಡೆಸುತ್ತಿರುವ ನಾಲಾಯಕ್ ಮನುಷ್ಯ ಎಂದೇ ಪರಿಗಣಿಸುತ್ತಿದ್ದಾರೆ.

- ಅರುಣ್ ಜೇಟ್ಲಿ

ವಾಸ್ತುಶಿಲ್ಪಿ ಲುಟ್ಯನ್ ರೂಪಿಸಿದ ರಾಜಧಾನಿ ದೆಹಲಿಯ ಹೃದಯಭಾಗ ಜಗತ್ತಿನಲ್ಲೇ ಅತಿಹೆಚ್ಚು ಬೆಲೆಬಾಳುವ ರಿಯಲ್ ಎಸ್ಟೇಟ್ ಎಂದು ಪರಿಗಣಿಸಲ್ಪಟ್ಟಿದೆ. ಭಾರತದ ಸಂಸತ್ತು ಮತ್ತು ರಾಷ್ಟ್ರಪತಿ ಭವನ ಈ ಪ್ರದೇಶದಲ್ಲಿದೆ. ಈಗ ಇದೇ ಪ್ರದೇಶದಲ್ಲಿರುವ 8 ಪಂಚತಾರಾ ಹೋಟೆಲ್‌ಗಳು ಸರ್ಕಾರಕ್ಕೆ ಕೊಡಬೇಕಿರುವ ಒಟ್ಟು 516.19 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ ಎಂದು ಗೊತ್ತಾಗಿದೆ. ಅಷ್ಟೇ ಅಲ್ಲ, ಈ ಪ್ರಭಾವಿಗಳಿಂದ ಅದನ್ನು ಪಡೆಯಲು ಯಾರೂ ಧೈರ್ಯ ತೋರುತ್ತಿಲ್ಲ.

- ತೆಹೆಲ್ಕಾ ವರದಿ

ಹಾಗೇ ಸುಮ್ಮನೆ



ಬೂಟಾ ಸಿಂಗ್ ಜನಪಥ್ ರಸ್ತೆಯಲ್ಲಿದ್ದ ಟೂರಿಸ್ಟ್ ಟ್ಯಾಕ್ಸಿ ಸರ್ವಿಸ್‌ನ ಮಾಲೀಕ ಜಗಜಿತ್ ಸಿಂಗ್‌ನೊಂದಿಗಿನ ತನ್ನ ಸ್ನೇಹದ ಲಾಭ ಪಡೆದು ಆತನ ಟ್ಯಾಕ್ಸಿಗಳ ಸೇವೆಯನ್ನು ಪಡೆಯುತ್ತಿದ್ದರು. ಹಲವಾರು ಬಾರಿ ಜಗಜಿತ್ ಸಿಂಗ್‌ನೊಂದಿಗಿನ ಬೂಟಾನ ಸ್ನೇಹದ ಆಧಾರದ ಮೇಲೆಯೇ ಇಂದಿರಾ ಗಾಂಧಿ ಮತ್ತು ಸಂಜಯ್ ಗಾಂಧಿ ಕೂಡ ವಾಹನಗಳ ಸೇವೆಯನ್ನು ಅನುಭವಿಸುತ್ತಿದ್ದರು. ಈ ಸೇವೆಗೆ ಬೂಟಾ ಹಣ ನೀಡಿದರೆ ಜಗಜಿತ್ ಸಿಂಗ್ ಅದನ್ನು ಸ್ವೀಕರಿಸಲು ನಿರಾಕರಿಸಿದ್ದ. ಇಂದಿರಾ ಗಾಂಧಿ ಅಧಿಕಾರಕ್ಕೆ ಹಿಂದಿರುಗಿದ ನಂತರ ಜಗಜಿತ್ ಸಿಂಗ್‌ನ ಈ ನಿಸ್ವಾರ್ಥ ಸೇವೆಯನ್ನು ನೆನಪಿಸಿಕೊಂಡು ಆತನಿಗೆ ಚಂಢೀಗಢದಿಂದ ವಿಧಾನಸಭೆಗೆ ಸ್ಪರ್ಧಿಸಲು ಕಾಂಗ್ರೆಸ್‌ನ ಟಿಕೆಟ್ ನೀಡಿದ್ದರು.

ಅರ್ಜುನ್ ಸಿಂಗ್ ಅವರ ಧಾರ್ಮಿಕ ಗುರು ಮೌನಿ ಬಾಬಾ ಮೌನವ್ರತವನ್ನು ಸ್ವೀಕರಿಸಿದ್ದರು. ಸಿಂಗ್ ಅವರು ಕೇಂದ್ರದಲ್ಲಿ ದೂರಸಂಪರ್ಕ ಸಚಿವರಾಗಿ ಅಧಿಕಾರ ಸ್ವೀಕರಿಸಿದಾಗ ತಮ್ಮ ಧಾರ್ಮಿಕ ಗುರುಗಳಿಗೆ ಎರಡೆರಡು ಟೆಲಿಫೋನ್ ಸಂಪರ್ಕಗಳನ್ನು ದಯಪಾಲಿಸಿದರು. ಇದರ ಬಗ್ಗೆ ಹಿಂದಿ ದಿನಪತ್ರಿಕೆಯೊಂದು "ಬಾಬಾ ಮೌನಿ ಆಗಿರುವಾಗ ಎರಡೆರಡು ಟೆಲಿಫೋನ್‌ಗಳು ಯಾಕೆ?" ಎಂದು ಪ್ರಶ್ನಿಸಿತ್ತು.

-ಲೇಖಕ ರಶೀದ್ ಕಿದ್ವಾಯ್,
ಕಾಂಗ್ರೆಸ್ ಪಕ್ಷ ಕುರಿತು ಬರೆದಿರುವ '24 ಅಕ್ಬರ್ ರೋಡ್' ಪುಸ್ತಕದಲ್ಲಿ

ಭ್ರಷ್ಟರ ವಿರುದ್ಧ ಹೋರಾಡಿ ಮಡಿದ ಸೆಹಲಾ



• ಗೌರಿ ಲಂಕೇಶ್
editorlankesh@gmail.com

ದೆಹಲಿಯ ರಾಮಲೀಲಾ ಮೈದಾನದಲ್ಲಿ ಅಣ್ಣಾ ...ರೆ ಅವರು ಭ್ರಷ್ಟಾಚಾರವನ್ನು ನಿಯಂತ್ರಿಸಲು ...ಲೋಕಪಾಲ್ ಕಾಯಿದೆಯನ್ನು ಜಾರಿಗೆ ತರಬೇಕೆಂದು ...ಸಿ ಉಪವಾಸ ಕೂತಿದ್ದಾಗಲೇ ಮಧ್ಯಪ್ರದೇಶ ರಾಜ್ಯದಲ್ಲಿ ...ರ ವಿರುದ್ಧ ಹೋರಾಡುತ್ತಿದ್ದ ಸೆಹಲಾ ಮಸೂದ್ ... ಮಹಿಳೆಯನ್ನು ದುಷ್ಕರ್ಮಿಗಳು ಕೊಂದು ಹಾಕಿದರು. ...ಅವತ್ತು (ಆಗಸ್ಟ್ 16) ಸೆಹಲಾ ಭೋಪಾಲ್‌ನಲ್ಲಿ ... ಹಜಾರೆಗೆ ಬೆಂಬಲ ಸೂಚಿಸಿ ನಡೆಯಲಿದ್ದ ಸಭೆಗೆ ...ರಟಿದ್ದಳು. ಮನೆಯಲ್ಲಿದ್ದ ತನ್ನ ವೃದ್ಧ ತಂದೆ ಮತ್ತು ...ಮ್ಮನಿಗೆ ಟಾಟಾ ಹೇಳಿ ಹೊರಟ ಸೆಹಲಾ ತನ್ನ ... ಹತ್ತಿ ಡ್ರೈವರ್ ಸೀಟಿನಲ್ಲಿ ಕೂತಳು. ಆದರೆ ಆದ್ಯಾಕೋ ... ಹೊತ್ತಾದರೂ ಆಕೆ ತನ್ನ ಕಾರ್ ಅನ್ನು ಚಾಲು ...ತಲಿಲ್ಲ. ಆಕೆಯ ಚಿಕ್ಕಮ್ಮ ಕಿಟಕಿಯಿಂದ ನೋಡಿದಾಗ ... ಮೂರ್ಛೆ ಹೋಗಿದ್ದಂತೆ ಕಾರಿನಲ್ಲಿ ಕೂತಿದ್ದು ...ಬಂತು. ಅಪ್ಪ ಮತ್ತು ಚಿಕ್ಕಮ್ಮ ಹೊರಗೆ ಓಡಿಹೋಗಿ ...ಳ ಮುಖಕ್ಕೆ ನೀರು ಚಿಮುಕಿಸಿದರು. ಆಗ ಆಕೆಯ ...ಳ ಸುತ್ತ ಇದ್ದ ದುಪ್ಪಟ್ಟಾ ಜಾರಿ ಬಿತ್ತು. ನೋಡಿದರೆ ...ಳ ಗಂಟಲನ್ನು ಬಂದೂಕಿನ ಗುಂಡು ಸೀಳಿತ್ತು. ರಕ್ತ ...ಯುತ್ತಿತ್ತು. ಸೆಹಲಾ ಶವವಾಗಿದ್ದಳು.

...ಆಕೆಯನ್ನು ಕೊಂದವನು ತನ್ನ ಬಂದೂಕಿಗೆ ...ನ್ಸರ್ ಅಳವಡಿಸಿಕೊಂಡಿದ್ದರಿಂದ ಗುಂಡು ...ದ ಶಬ್ದ ಯಾರಿಗೂ ಕೇಳಿಸಲಿಲ್ಲ. ಅಷ್ಟೇ ಅಲ್ಲ, ...ಯನ್ನು ಕೊಂದಷ್ಟೇ ನಿಶಬ್ದವಾಗಿ ಆತ ...ಯಾಗಿದ್ದ.

...ಸೆಹಲಾ ಸಾವಿನ ಸುದ್ದಿ ಮಿಂಚಿನಂತೆ ಹರಡಿ ...ಪಾಲ್ ನಗರವನ್ನು ಬೆಚ್ಚಿ ಬೀಳಿಸಿತು. ವಿವಿಧ ...ರಾಟಗಳಲ್ಲಿ ತೊಡಗಿರುವ ಜನ ರಾಜ್ಯ ...ರದಲ್ಲಿ ತಮಗೆ ವಿಶ್ವಾಸ ಇಲ್ಲವೆಂದೂ, ...ಳ ಕೊಲೆಯ ತನಿಖೆಯನ್ನು ಸಿಬಿಐಗೆ ...ಸಬೇಕೆಂದೂ ಆಗ್ರಹಿಸಿದರು.

ಅದಕ್ಕೆ ಕಾರಣಗಳೂ ಇದ್ದವು. ಅವೇನೆಂದರೆ ... ಮಧ್ಯಪ್ರದೇಶದ ಬಿಜೆಪಿ ಸರ್ಕಾರದ ...ವಾರು ಅಕ್ರಮಗಳನ್ನು ಸೆಹಲಾ ...ಬಲಿಗೆಳೆದಿದ್ದಳು, ಭ್ರಷ್ಟ ಪೊಲೀಸರ ...ದ್ಧ ಕೇಂದ್ರ ಗೃಹ ಸಚಿವರಿಗೂ ...ರು ನೀಡಿದ್ದಳು, ಮಾಹಿತಿ ಹಕ್ಕು ...ಯಡಿ ಹಲವಾರು ಅರ್ಜಿಗಳನ್ನು ...ರಾಯಿಸಿ ಭ್ರಷ್ಟ ರಾಜಕಾರಣಿಗಳಲ್ಲಿ ...ಲು ಮೂಡಿಸಿದ್ದಳು, ತನಗೆ ರಾಜ್ಯ ...ಲೀಸರಿಂದ ಪ್ರಾಣ ಬೆದರಿಕೆ ಇದ್ದು ... ರಕ್ಷಣೆ ಕೊಡಬೇಕೆಂದು ...ರಿದ್ದಳು. ಆದರೆ ಸೆಹಲಾಳಿಗೆ ರಕ್ಷಣೆ ...ಡುವ ಬದಲಾಗಿ ಯಾವ ವ್ಯವಸ್ಥೆಯ ...ದ್ಧ ಆಕೆ ಹೋರಾಡುತ್ತಿದ್ದಳೋ ... ವ್ಯವಸ್ಥೆ ಆಕೆಯ ಪ್ರಾಣವನ್ನೇ ...ಮುಕೊಂಡಿದೆ.

... ಸಿರಿವಂತ ಮುಸ್ಲಿಂ ಕುಟುಂಬದಲ್ಲಿ ...ಸಿದ ಸೆಹಲಾ ದೆಹಲಿಯ ಪ್ರತಿಷ್ಠಿತ ...ಮಿಯಾ ಮಿಲಿಯಾ ಇಸ್ಲಾಮಿಯಾ ...ಲ್ಲಿ ಓದಿದ್ದಳು. ಸ್ವಲ್ಪ ದಿನ ಅಮಿತಾಬ್ ...ನ್ ಅವರ ಎಬಿಸಿ ಕಂಪನಿಯಲ್ಲಿ ಕೆಲಸ ...ಡಿದ್ದಳು. ತವರೂರಾದ ಭೋಪಾಲ್‌ಗೆ ...ದಿರುಗಿ ಮಿರಕಲ್ಸ್ ಎಂಬ ಕಂಪನಿಯನ್ನು ...ಸಿ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿದ್ದಳು. ... ಆಕೆ ತೀವ್ರ ಭ್ರಷ್ಟಾಚಾರವನ್ನು ಎದುರಿಸಿದ್ದರಿಂದ ...ದಿದ್ದಳು. ಮಾಹಿತಿ ಹಕ್ಕು ಕಾಯ್ದೆಯನ್ನು ...ಯೋಗಿಸಿಕೊಂಡು ರಾಜಕಾರಣಿಗಳ ಮತ್ತು ...ಕಾರಿಗಳ ಅಕ್ರಮಗಳನ್ನು ಬಯಲು ...ಡಲಾರಂಭಿಸಿದಳು.

...ಉದಾಹರಣೆಗೆ ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ...ರಾಜ್ ಸಿಂಗ್ ಚೌಹಾಣ್ ತನ್ನ ಮನೆ ಖರ್ಚಿಗೆಂದು ... ಹಣ ಪಡೆಯುತ್ತಿದ್ದಾರೆಂದು ಮಾಹಿತಿ ಪಡೆದಳು. ...ಡಿದರೆ ಆತ ಸ್ವೀಟ್ಸ್‌ಗೆ, ಚಾಟ್‌ಗೆ, ಹೂಗಳಿಗೆ, ...ಬೈಲ್ ಬಿಲ್ಲು, ಟೆಲಿಫೋನ್ ಬಿಲ್ಲು ಎಂದೆಲ್ಲ ...ಂಗಳು ರಾಜ್ಯದ ಬೊಕ್ಕಸದಿಂದ ಲಕ್ಷಾಂತರ ರೂಪಾಯಿ ...ಯುತ್ತಿದ್ದದ್ದು ಗೊತ್ತಾಯಿತು. ಅದನ್ನು ಬಹಿರಂಗಪಡಿಸಿದ ...ಲಾ ಮುಖ್ಯಮಂತ್ರಿಗೆ ಮುಖಭಂಗ ಮಾಡಿದಳು. ...ಹಾಗೆಯೇ ಮಧ್ಯಪ್ರದೇಶದ ಹೈಕೋರ್ಟಿನ ಭ್ರಷ್ಟ ...ಯಮೂರ್ತಿಗಳಿಗೂ ಮುಖಭಂಗ ಮಾಡಿದ್ದಳು. ರಾಜ್ಯ ...ರ ಹಲವು ನ್ಯಾಯಮೂರ್ತಿಗಳ ವಿಮಾನ ವೆಚ್ಚ ...ಪಂಚತಾರಾ ಹೋಟೆಲ್ ಬಿಲ್ಲುಗಳನ್ನು ಭರಿಸಿದ್ದನ್ನು ...ಸಿದ್ದಳು. ಹಾಗೆಯೇ ಯಾರದ್ದೋ ಮದುವೆಗೆಂದು ... ನ್ಯಾಯಮೂರ್ತಿಗಳು ಹೋದಾಗ ಆ ವೆಚ್ಚವನ್ನೂ ... ಸರ್ಕಾರವೇ ಭರಿಸಿದ್ದನ್ನು ಪ್ರಶ್ನಿಸಿದ್ದಳು. ಆಗ ...ಮಂತ್ರಿ ಚೌಹಾಣ್ ಅವರ ನಿಯಮಾವಳಿ ಅಧಿಕಾರಿ ... ಫೋನ್ ಮಾಡಿ ಬೆದರಿಸಿದ್ದ.

...ಪವನ್ ಶ್ರೀವಾತ್ಸವ ಎಂಬ ಐಜಿ ಲೆವೆಲ್ಲಿನ ಪೊಲೀಸ್ ...ಕಾರಿಯ ಅವ್ಯವಹಾರಗಳನ್ನು ಬಯಲಿಗೆಳೆದಿದ್ದಳು. ಈ ಪವನ್ ಶ್ರೀವಾತ್ಸವ ಭ್ರಷ್ಟಾತಿ ಭ್ರಷ್ಟನಲ್ಲದೆ ಆತ ಹಲವು ಪ್ರಭಾವಿ ಬಿಜೆಪಿ ನಾಯಕರ ಭಂಟ. ಜೊತೆಗೆ ಆರೆಸ್ಸೆಸ್ಸಿನ ನಾಯಕರೊಂದಿಗೂ ಆತನಿಗೆ ಗಳಸ್ಯಕಂಟಸ್ಯ ಸಂಬಂಧವಿದೆ. ಆತನ ಅಕ್ರಮಗಳನ್ನು ಸೆಹಲಾ ಬಯಲು ಮಾಡಿದಾಗ ಆತ ಸೆಹಲಾಳಿಗೆ ಫೋನ್ ಮಾಡಿ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದ್ದನಲ್ಲದೆ ಆಕೆಗೆ ಪ್ರಾಣ ಬೆದರಿಕೆಯನ್ನೂ ಒಡ್ಡಿದ್ದ. ಈಗ ಸೆಹಲಾಳ ಸಾವಿನ ಹಿಂದೆ ಈ ದುಷ್ಟ ಪೊಲೀಸ್ ಅಧಿಕಾರಿಯ ಕೈವಾಡವಿರಬಹುದು ಎಂದು ಶಂಕಿಸಲಾಗುತ್ತಿದೆ.

ಸೆಹಲಾಳಿಗೆ ಪ್ರಾಣಿಗಳೆಂದರೆ ಪ್ರೀತಿ. ಅದರಲ್ಲೂ ಹುಲಿ ರಕ್ಷಣೆ ಬಗ್ಗೆ ಅಪಾರ ಕಾಳಜಿ. ಆದ್ದರಿಂದ ಹುಲಿ ಸಂರಕ್ಷಣೆ ಹೆಸರಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರ ಪಡೆದ ಹಣ ಸರಿಯಾಗಿ ಉಪಯೋಗವಾಗುತ್ತಿದೆಯೇ ಎಂದು ವಿಚಾರಿಸುತ್ತಿದ್ದಳು. ಹುಲಿಗಳೇ ಇಲ್ಲದ ಪ್ರದೇಶಗಳಲ್ಲಿ ಹುಲಿ



ರಕ್ಷಣೆ ಮಾಡಲು ದುಡ್ಡು ವೆಚ್ಚಮಾಡಿದ್ದನ್ನು ಟೀಕಿಸಿದ್ದಳು.

ಇಂತಹ ಪ್ರಾಣಿ ಪ್ರೀತಿ ಸಹಜವಾಗಿಯೇ ಅರಣ್ಯ ಪ್ರೀತಿಯಾಗಿ ಪರಿವರ್ತನೆಗೊಂಡಿತು. ಅರಣ್ಯಗಳ ಬಗ್ಗೆಯೂ ಆಕೆ ಮಾಹಿತಿ ಪಡೆಯಲಾರಂಭಿಸಿದಾಗ ಒಂದು ಅಚ್ಚರಿಯ ಸಂಗತಿ ಗೊತ್ತಾಯಿತು. ಅದೇನೆಂದರೆ ಛಾತರ್ಪುರ್ ಜಿಲ್ಲೆಯಲ್ಲಿನ ಕಾಡುಗಳಲ್ಲಿ ರಿಯೋ ಟಿಂಟೋ ಎಂಬ ಇಂಗ್ಲೆಂಡ್ ಮೂಲದ ಅಂತರರಾಷ್ಟ್ರೀಯ ಕಂಪನಿಗೆ ಗಣಿಗುತ್ತಿಗೆ ನೀಡಲಾಗಿದೆ ಎಂದು. ಮೊದಲನೆಯದಾಗಿ ಕಾನೂನಿನಪ್ರಕಾರ ಅರಣ್ಯ ಪ್ರದೇಶದಲ್ಲಿ ಅರಣ್ಯೇತರ ಚಟುವಟಿಕೆಗಳು ನಿಷೇಧ. ಎರಡನೆಯದಾಗಿ ಈ ಪ್ರದೇಶದಲ್ಲಿ ಟೀಕ್ ಮರಗಳು ಹೆಚ್ಚಾಗಿರುವ ಅರಣ್ಯವಿದೆ. ಮೂರನೆಯದಾಗಿ ಈ ಛಾತರ್ಪುರ್ ಪ್ರದೇಶದಲ್ಲಿ ಅಪಾರ ಬೆಲೆಬಾಳುವ ವಜ್ರಗಳ ನಿಕ್ಷೇಪ ಇದೆ. ಒಂದು ಅಂದಾಜಿನ ಪ್ರಕಾರ ಅಲ್ಲಿರುವ ವಜ್ರಗಳು 27.4 ಮಿಲಿಯನ್ ಕ್ಯಾರೆಟ್. ಇದೇ ಮಧ್ಯಪ್ರದೇಶದಲ್ಲಿ ಪನ್ನಾ ಎಂಬಲ್ಲಿ (ಇದು ಭಾರತದ ಏಕೈಕ ವಜ್ರದ ಗಣಿ) ಲಭ್ಯವಿರುವ ವಜ್ರಗಳಿಗಿಂತ ಏಳು ಪಟ್ಟು ಹೆಚ್ಚು ವಜ್ರಗಳು ಛಾತರ್ಪುರ್‌ನಲ್ಲಿವೆ. ಇನ್ನೂ ಒಂದು ಅಂದಾಜಿನ ಪ್ರಕಾರ ಜಗತ್ತಿನಲ್ಲಿರುವ ಯಾವುದೇ ನಿಕ್ಷೇಪಕ್ಕಿಂತ ಇಲ್ಲಿ ಹೆಚ್ಚು ವಜ್ರಗಳಿವೆಯಂತೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಈ ಪ್ರದೇಶದಲ್ಲಿ ರಿಯೋ ಟಿಂಟೋ ಎಂಬ ಕಂಪನಿಗೆ ಅಕ್ರಮವಾಗಿ ವಜ್ರಗಳ ಗಣಿಗಾರಿಕೆಗೆ ಅನುಮತಿ ನೀಡುವಲ್ಲಿ ರಾಜ್ಯದ ಬಿಜೆಪಿ ಸರ್ಕಾರ ಕಾನೂನುಗಳನ್ನು ಉಲ್ಲಂಘಿಸಿದೆಯಲ್ಲದೆ, ಈ ಕ್ರಿಮಿನಲ್ ಕೃತ್ಯದಲ್ಲಿ ಸಹಕಾರ ನೀಡದ ಅಧಿಕಾರಿಗಳನ್ನು ಛಾತರ್ಪುರ್ ನಿಂದಲೇ ವರ್ಗಾವಣೆ ಮಾಡಿದೆ.

ಇನ್ನು ಈ ರಿಯೋ ಟಿಂಟೋ ಕಂಪನಿಯ ಇತಿಹಾಸವಂತೂ ಘೋರವಾಗಿದೆ. ಇದು ಜಗತ್ತಿನ ಹಲವಾರು ಕಡೆ ಗಣಿಗಾರಿಕೆಯಲ್ಲಿ ತೊಡಗಿದ್ದು ಅಲ್ಲಿಯ ಅರಣ್ಯಗಳನ್ನೆಲ್ಲ ಸಂಪೂರ್ಣವಾಗಿ ನಾಶಮಾಡಿದೆ. ಮಾತ್ರವಲ್ಲ, ಈ ಕಂಪನಿಯು ತನ್ನ ವಿರೋಧಿಗಳನ್ನು ಬಗ್ಗುಬಡಿಯುವ, ಸರ್ಕಾರಗಳ ಮೇಲೆ ಒತ್ತಡ ಹೇರುವ, ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುವ, ಕಾರ್ಮಿಕ ಸಂಘಟನೆಗಳನ್ನು ಛಿದ್ರ ಮಾಡುವ ಕಲೆಗಳನ್ನು ಕರಗತ ಮಾಡಿಕೊಂಡಿದೆ. ಇದೆಲ್ಲದರಿಂದಾಗಿ ಈ ಕಂಪನಿ ಕಾಲಿಟ್ಟ ಕಡೆ ಅಕ್ರಮ, ಅನ್ಯಾಯ, ಕೊಲೆ ಇತ್ಯಾದಿ ಕ್ರಿಮಿನಲ್ ಕೃತ್ಯಗಳು ಗ್ಯಾರಂಟಿ ಎಂಬಂತಾಗಿದೆ.

ಆದ್ದರಿಂದ ಸೆಹಲಾ ರಿಯೋ ಟಿಂಟೋ ಕಂಪನಿಗೆ ಅಕ್ರಮವಾಗಿ ಗಣಿಗಾರಿಕೆ ನಡೆಸಲು ಅನುಮತಿ ಕೊಟ್ಟಿರುವುದನ್ನು ಪ್ರಶ್ನಿಸಿದ್ದಳು. ಕೇಂದ್ರ ಸರ್ಕಾರದ ಅರಣ್ಯ ಮಂತ್ರಿಗೆ ಪತ್ರಗಳನ್ನು ಬರೆದು ದೂರಿದ್ದಳು. ರಿಯೋ ಟಿಂಟೋ ಕಂಪನಿಯ ವಿರುದ್ಧ ನ್ಯಾಯಾಲಯದ ಮೆಟ್ಟಿಲನ್ನು ಹತ್ತಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದಳು. ಕುತೂಹಲಕಾರಿ ಅಂಶ ಯಾವುದೆಂದರೆ ಆಕೆ ಸತ್ತ ಹಲವು ಸಮಯದ ನಂತರ ಯುಗಾಂಡಾ ದೇಶದಿಂದ ಯಾರೋ ಹಲವಾರು ಗಂಟೆಗಳ ಕಾಲ ಆಕೆಯ ಮೊಬೈಲ್‌ಗೆ ಫೋನ್ ಮಾಡಿರುವುದು. ಈ ಎಲ್ಲ ಕಾರಣಗಳಿಂದ ಸೆಹಲಾ ಸಾವಿನ ಹಿಂದೆ ಈ ರಿಯೋ ಟಿಂಟೋ ಕಂಪನಿಯ ಕೈವಾಡವೂ ಇರಬಹುದೆಂದು ಶಂಕಿಸಲಾಗುತ್ತಿದೆ.

ಆದರೆ ಮಧ್ಯ ಪ್ರದೇಶದ ಬಿಜೆಪಿ ಸರ್ಕಾರ ಸೆಹಲಾಳದ್ದು ಕೊಲೆಯಲ್ಲ ಬದಲಾಗಿ ಆತ್ಮಹತ್ಯೆ ಎಂದು ಪಿತೂರಿ ನಡೆಸುತ್ತಿದೆ. ಅದಕ್ಕೆ ಸೆಹಲಾಳ ತಂದೆ "ಆಕೆ ಸತ್ತಾಗ ಒಂದು ಕೈಯಲ್ಲಿ ಮೊಬೈಲ್ ಇತ್ತು, ಇನ್ನೊಂದು ಕೈಯಲ್ಲಿ ಕಾರಿನ ಕೀಗಳಿದ್ದವು. ಆದ್ದರಿಂದ ಅದು ಆತ್ಮಹತ್ಯೆ ಹೇಗಾಗುತ್ತದೆ. ಇದೆಲ್ಲದಕ್ಕಿಂತ ಮುಖ್ಯವಾಗಿ ಆಕೆ ಓರ್ವ ದಿಟ್ಟ ಹೋರಾಟ ಗಾರ್ತಿಯಾಗಿದ್ದಳು. ಆತ್ಮಹತ್ಯೆ ಮಾಡಿಕೊಳ್ಳು ವಂತಹ ವ್ಯಕ್ತಿತ್ವ ಆಕೆಯದ್ದಲ್ಲ" ಎಂದಿದ್ದಾರೆ. ಅದನ್ನೇ ಆಕೆಯನ್ನು ಬಲ್ಲವರೂ ಹೇಳುತ್ತಿದ್ದಾರೆ.

ಅದೆಲ್ಲಕ್ಕಿಂತ ಮುಖ್ಯವಾಗಿ ಸೆಹಲಾ ಆತ್ಮಹತ್ಯೆ ಮಾಡಿಕೊಂಡಿದ್ದರೆ ಆ ಬಂದೂಕು ಅವಳ ಶವದ ಹತ್ತಿರ ಇರಬೇಕಿತ್ತಲ್ಲವೇ. ಆದರೆ ಆಕೆ ಸತ್ತಾಗ ಅವಳ ಹತ್ತಿರ ಯಾವ ಬಂದೂಕೂ ಇರಲಿಲ್ಲ. ಆದರೂ ಇದನ್ನು ಆತ್ಮಹತ್ಯೆ ಎಂದು ತೋರಿಸಲು ಭೋಪಾಲದ ಪೊಲೀಸರು ಯತ್ನಿಸುತ್ತಾರೆಂದರೆ ಏನೆನ್ನಬೇಕು?

ದಕ್ಷ ಆಡಳಿತ, ಪಾರದರ್ಶಕತೆ, ಭ್ರಷ್ಟಾಚಾರ ನಿರ್ಮೂಲನೆಗೆ ಹೋರಾಡಿದ್ದಕ್ಕಾಗಿ ತನ್ನ ಪ್ರಾಣ ಕಳೆದುಕೊಂಡವರಲ್ಲಿ ಸೆಹಲಾ ಮೊದಲನೆಯವಳೇನಲ್ಲ. ಆಕೆಯಂತೆ ಈ ಹಿಂದೆ ಅನೇಕ ಆರ್‌ಟಿಐ ಕಾರ್ಯಕರ್ತರು ಬಲಿಯಾಗಿದ್ದಾರೆ. ಒಂದು ಅಂದಾಜಿನ ಪ್ರಕಾರ 2010ರಲ್ಲೇ ಸುಮಾರು ಹತ್ತು ಜನ ದೇಶದ ವಿವಿಧ ಭಾಗಗಳಲ್ಲಿ ಹೀಗೆ ಕೊಲೆಯಾಗಿದ್ದಾರೆ.


ಉದಾಹರಣೆಗೆ, ಮಹಾರಾಷ್ಟ್ರದಲ್ಲಿ ಹಲವು ರಾಜಕಾರಣಿಗಳ ಭೂಕಬಳಿಕೆಯನ್ನು ಹೊರಗೆಳೆದಿದ್ದ ಸತೀಶ್ ಶೆಟ್ಟಿ ಎಂಬ ಆರ್‌ಟಿಐ ಕಾರ್ಯಕರ್ತನನ್ನು ಹಾಡುಹಗಲೇ ಪುಣೆಯಲ್ಲಿ ಕೊಂದು ಹಾಕಿದರು. ಶೆಟ್ಟಿ ಪ್ರಾರಂಭಿಸಿದ್ದ ಕೆಲಸವನ್ನು ಅವರ ಮಿತ್ರ ಅರುಣ್ ಮಾಣೆ ಎಂಬುವವರು ಮುಂದುವರೆಸಿ ಪುಣೆ-ಮುಂಬೈ ಎಕ್ಸ್‌ಪ್ರೆಸ್ ಹೈವೇ ಸುತ್ತ ನಡೆದಿದ್ದ ಭೂಹಗರಣಗಳನ್ನು ತೆರೆದಿಟ್ಟರು. ಆಗ ಮಾಣೆ ಅವರನ್ನೂ ಕೆಲವು ಗೂಂಡಾಗಳು ಕೊಂದು ಹಾಕಿದರು.

ಸ್ಥಳೀಯ ಪಂಚಾಯ್ತಿಯಲ್ಲಿ ನಡೆಯುತ್ತಿದ್ದ ಅವ್ಯವಹಾರಗಳನ್ನು ಶೋಧಿಸಿದ್ದ ವಿಠಲ್ ಗಿತೆ, ಪಡಿತರಚೀಟಿಯಲ್ಲಿ ನಡೆದ ಅಕ್ರಮವನ್ನು ಬಹಿರಂಗಪಡಿಸಿದ ರಾಮದಾಸ್ ಘಡೆಗಾಂವ್ಕರ್, ಜೈತಾಪುರ ಅಣುಸ್ಥಾವರವನ್ನು ವಿರೋಧಿಸಿದ ಇರ್ಫಾನ್ ಕಾಜಿ, ಚುನಾವಣಾ ಆಯೋಗಕ್ಕೆ ತನ್ನ ಸಂಪೂರ್ಣ ಆಸ್ತಿಯನ್ನು ಘೋಷಿಸದಿದ್ದ ಕಾರ್ಪೊರೇಟರ್ ಒಬ್ಬನ ಸುಳ್ಳನ್ನು ಎತ್ತಿತೋರಿಸಿದ್ದ ಯಶವಂತ್ ಗಾಯ್ಕವಾಡ್, ಗಿರ್ ಅರಣ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ವಿರೋಧಿಸಿದ್ದ ಅಮಿತ್ ಜೆತ್ವ... ಹೀಗೆ ಬಹಳಷ್ಟು ಜನ ಭ್ರಷ್ಟಾಚಾರವನ್ನು ವಿರೋಧಿಸಿ ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ.

ಸೆಹಲಾ ಕೊಲೆಯಾದಾಗ ಆಕೆ 40 ಕ್ಕೂ ಹೆಚ್ಚು ಆರ್‌ಟಿಐ ಅರ್ಜಿಗಳನ್ನು ಸಲ್ಲಿಸಿದ್ದಳು. ಆದ್ದರಿಂದ ಆಕೆಯ ಸಾವಿಗೆ ಅಂತಹ ಯಾವುದೋ ಒಂದು ಅರ್ಜಿಯೂ ಕಾರಣವಿರಬಹುದು. ತನ್ನ ಈ ಚಟುವಟಿಕೆಗಳಿಂದಾಗಿ ತನ್ನ ಪ್ರಾಣವನ್ನು ಯಾರು ಬೇಕಾದರೂ ತೆಗೆಯಬಹುದೆಂಬ ಅನುಮಾನ ಸೆಹಲಾಳಿಗೆ ಇತ್ತು. ಆಕೆ ಸಾಯುವ ಕೆಲವುದಿನಗಳ ಮುನ್ನ ಕೊಟ್ಟ ಒಂದು ಸಂದರ್ಶನದಲ್ಲಿ **"I fear for my life, but I will go on"** ಎಂದು ಹೇಳಿದ್ದಳು.

ದಿಟ್ಟೆದೆಯ ಸೆಹಲಾ ಇವತ್ತು ಆರ್‌ಟಿಐ ಹುತಾತ್ಮರಲ್ಲಿ ಒಬ್ಬಳಾಗಿದ್ದಾಳೆ. ಆಕೆಯ ಸಾವು ನಮ್ಮ ದೇಶದಿಂದ ಭ್ರಷ್ಟಾಚಾರವನ್ನು ತೊಲಗಿಸುವುದು ಅಷ್ಟು ಸುಲಭವಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ ಕಂಡೋರ ಆಸ್ತಿಗೆ ಖತರ್‌ನಾಕ್ ಕೆಲಸ



ಯಾರದೋ ಆಸ್ತಿಯ ಚಕ್ಕುಬಂದಿ ಹಾಕಿ, ಕೃಷಿ ಭೂಮಿ ಖರೀದಿಸಲು ಯಾವುದೇ ಅರ್ಹತೆಯಿಲ್ಲದಿದ್ದರೂ, ಸುಳ್ಳು ಮಾಹಿತಿ ನೀಡಿ, ನಕಲಿ ದಾಖಲೆಗಳ ಆಧಾರದ ಮೇಲೆ, ಸಬ್‌ರಿಜಿಸ್ಟ್ರಾರ್ ಮತ್ತು ತಹಶೀಲ್ದಾರ್‌ರನ್ನು ತನ್ನ ಅಕ್ರಮಕ್ಕೆ ಬಳಸಿಕೊಂಡು, ಕಚೇರಿಯ ವೇಳೆಯ ನಂತರವೂ ಕದ್ದು ನೋಂದಣಿ ಮಾಡಿಸಿಕೊಂಡು ಕಂಡೋರ ಸೊತ್ತು ಲಪಟಾಯಿಸ ಹೊರಟ ಎಮ್ಮೆಲ್ಲೇ ನಂದೀಶ್ ರೆಡ್ಡಿಗೆ ಶಿಕ್ಷೆಯೇ ಇಲ್ಲವೇ?

ಕೃಷ್ಣರಾಜಪುರದ ಶಾಸಕ ನಂದೀಶ್ ರೆಡ್ಡಿಗೆ ಖಾಲಿ ಸೈಟು, ಸರ್ಕಾರಿ ಭೂಮಿ, ಕಂಡೋರ ಆಸ್ತಿ ಕಂಡರೆ ಸಾಕು ತಾನೊಬ್ಬ ಎಮ್ಮೆಲ್ಲೇ; ದೇಶಕ್ಕೊಂದು ಕಾನೂನಿದೆ ಎಂಬುದೇ ಮರೆತುಹೋಗುತ್ತದೆ.


ಮೊದಲೇ ಸರ್ಕಾರಿ ಭೂಮಿ ದೋಚಿ ಅದೇ ದುಡ್ಡಲ್ಲಿ ಬಿಜೆಪಿ ಟಿಕೆಟ್ಟು ಖರೀದಿಸಿ, ಅದೇ ರೊಕ್ಕ ಸುರಿದು ಶಾಸಕನಾಗಿರುವಾಗ ಇನ್ನು ಗೆದ್ದ ಮೇಲೆ ಕಂಡೋರ ಆಸ್ತಿ ದೋಚದೇ ಹೋದರೆ ಹೆಂಗೆ? ಕೆ.ಆರ್. ಪುರಕ್ಕೆ ತಹಶೀಲ್ದಾರ್ ಆಗಿದ್ದ ಆಶಾ ಪರ್ವಿನ್ ಎಂಬ ದಿಟ್ಟ ಹೆಣ್ಣುಮಗಳಿಗೆ ಇಲ್ಲದ ಕಾಟ ಕೊಟ್ಟು ಸಸ್ಪೆಂಡ್ ಮಾಡಿಸಿ ಆ ಜಾಗಕ್ಕೆ ಶಿವಕುಮಾರ್ ಎಂಬ ರೊಕ್ಕಬಾಕನನ್ನು ತಂದದ್ದು, ಖತರ್‌ನಾಕ್ ರೆವಿನ್ಯೂ ಇನ್ಸ್‌ಪೆಕ್ಟರ್ ಸತ್ಯನಾರಾಯಣ, ಮತ್ತೊಬ್ಬ ಖದೀಮ ಆರ್.ಐ. ಮಂಜುನಾಥ್, ವಿಲೇಜ್ ಅಕೌಂಟೆಂಟ್ ಚೆಗಲ್, ಮಹದೇವಪುರದ ಸಬ್ ರಿಜಿಸ್ಟ್ರಾರ್ ಶಾಂತಮೂರ್ತಿ; ಕೆ.ಆರ್. ಪುರದ ಸಬ್ ರಿಜಿಸ್ಟ್ರಾರ್ ಪಾಂಡು; ಇತ್ಯಾದಿ ಕಂದಾಯ ಇಲಾಖೆಯ ಕಡುಭ್ರಷ್ಟರನ್ನೆಲ್ಲ ಹುಡುಹುಡುಕಿ ತಂದು ತನ್ನ ಕ್ಷೇತ್ರದುದ್ದಕ್ಕೂ ಪ್ರತಿಷ್ಠಾಪಿಸಿಕೊಂಡಿದ್ದೇ ಭೂ ದರೋಡೆಗಾಗಿ!

ಇದಕ್ಕೊಂದು ಲೇಟೆಸ್ಟ್ ಉದಾಹರಣೆಯಂತಿದೆ ಕೆ.ಆರ್. ಪುರಂ ಹೋಬಳಿಯ ದೊಡ್ಡನೆಕ್ಕುಂದಿಯ 40 ಕೋಟಿಯ ಆಸ್ತಿಯ ಕತೆ.

ನಂದೀಶ್ ರೆಡ್ಡಿ ಶಾಸಕರಾಗಿರುವ ಕೆ.ಆರ್.ಪುರ ರಿಂಗ್ ರಸ್ತೆಯಲ್ಲಿ ಮಾಲ್ಗುಡಿ ಡಾಬಾಕ್ಕೆ ಹೊಂದಿಕೊಂಡಂತೆ ದೊಡ್ಡನೆಕ್ಕುಂದಿ ಇಂಡಸ್ಟ್ರಿಯಲ್ ಏರಿಯಾ ಇದೆ. ಇದರ ಪಕ್ಕದ್ದೇ ಸರ್ವೆ ನಂಬರ್ 81 ರ ಸೊತ್ತು, ಈ ಪೈಕಿ ಸಂ.ನಂ. 81/4 ರಲ್ಲಿರುವ ಒಂದೆಕರೆ 33 ಗುಂಟೆ ಖಾಲಿ ನಿವೇಶನವನ್ನು ಇಂದಿರಾನಗರದ ಲಕ್ಷ್ಮೀಪತಿ ಎಂಬುವವರು ಇದೇ ದೊಡ್ಡನೆಕ್ಕುಂದಿಯ ಚಂದ್ರಶೇಖರ ರೆಡ್ಡಿ ಎಂಬಾತನಿಂದ ಖರೀದಿಸಿ ಯಾವುದೋ ಕಾಲವಾಗಿದೆ. ಇದಕ್ಕೆ ಹೊಂದಿಕೊಂಡಂತೆ ಸಂ.ನಂ. 81/5 ರಲ್ಲಿ ಒಂದೂವರೆ ಎಕರೆಯಿದೆ. ಇದನ್ನು ಎಂ. ಮೂರ್ತಿ ಎಂಬುವವರು ದೊಡ್ಡನೆಕ್ಕುಂದಿಯ ಸೋಮಶೇಖರ್ ರೆಡ್ಡಿ ಎಂಬಾತನಿಂದ ಖರೀದಿಸಿದ್ದಾರೆ. ಇದರ ಪಕ್ಕದ್ದೇ ಸ.ನಂ. 85. ಇದರ ಭೂಮಿಯ ಪೈಕಿ ಸ.ನಂ.85/6 ರಲ್ಲಿ 1.36 ಎಕರೆ ಮತ್ತು ಸ.ನಂ. 85/5 ರಲ್ಲಿ 1.35 ಎಕರೆ ಒಟ್ಟು ಮೂರೂವರೆ ಎಕರೆಯಷ್ಟು ಭೂಮಿಯನ್ನು ಎಮ್ಮೆಲ್ಲೇ ನಂದೀಶ್ ರೆಡ್ಡಿ ಖರೀದಿಸಿದ್ದು ಕಳೆದ 2011 ರ ಮಾರ್ಚ್ 21 ಕ್ಕೆ. ಹಕೀಕತ್ತೇನೆಂದರೆ ಹೀಗೆ ತಾನು ಖರೀದಿಸಿದ ಸೊತ್ತಿಗೆ ಶಾಸಕ ನಂದೀಶ್ ರೆಡ್ಡಿ ನಮೂದಿಸಿರುವುದು ಪಕ್ಕದ ಲಕ್ಷ್ಮಿಪತಿ ಮತ್ತು ಮೂರ್ತಿಯವರ ಸ.ನಂ. 81 ರ ಚಕ್ಕುಬಂದಿಯನ್ನು!

ಇದೇ ದೊಡ್ಡನೆಕ್ಕುಂದಿಯ ಗುರುಮೂರ್ತಿ ರೆಡ್ಡಿಯ ಮಗ ಚಂದ್ರಾರೆಡ್ಡಿಯಿಂದ ಸ.ನಂ.85/6 ರ 1.36 ಎಕರೆಗೆ 54 ಲಕ್ಷದ 35 ಸಾವಿರದ 775 ರೂಪಾಯಿ ಮತ್ತು ಪಕ್ಕದ ಸ.ನಂ.85/5 ರ 1.35 ಎಕರೆಗೆ 53 ಲಕ್ಷದ 64 ಸಾವಿರದ 225 ರೂಪಾಯಿ ತೆತ್ತು ಮಹದೇವಪುರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ತನ್ನದೇ ಹೆಸರಿಗೆ ಶಾಸಕ ನಂದೀಶ್ ರೆಡ್ಡಿ ಈ ಎರಡೂ ಆಸ್ತಿಯನ್ನು ನೋಂದಾಯಿಸಿಕೊಂಡಿದ್ದಾರೆ. ಹೀಗೆ ನೋಂದಾಯಿಸಲ್ಪಟ್ಟ ವಾರಕ್ಕೇ ಈ ಎರಡೂ ಸೊತ್ತಿನ ಖಾತೆ, ಮ್ಯುಟೇಶನ್‌ಗಳು ಶಾಸಕ ಕೋಟೆ ಎನ್.ಎಸ್. ನಂದೀಶ್ ರೆಡ್ಡಿಯ ಹೆಸರಿಗೆ ವರ್ಗಾವಣೆಗೊಳ್ಳುತ್ತವೆ.

ಎಮ್ಮೆಲ್ಲೇ ತಾನು ಖರೀದಿಸಿದ ಈ ಎರಡೂ ಸೊತ್ತಿಗೆ ಪಕ್ಕದ ಸರ್ವೆ ನಂಬರುಗಳಾದ 81/4 ಮತ್ತು 81/5 ರ ಸೊತ್ತಿನ ಚಕ್ಕುಬಂದಿಯನ್ನು ನಮೂದಿಸಿದ್ದರ ವಿರುದ್ಧ ಈಗಾಗಲೇ ಲಕ್ಷ್ಮಿಪತಿ ಮತ್ತು ಮೂರ್ತಿ ಕೆ.ಆರ್. ಪುರದ ತಹಶೀಲ್ದಾರ್‌ಗೆ ದೂರು ಸಲ್ಲಿಸಿದ್ದಾರೆ. ತಮ್ಮ ಸೊತ್ತಿನ ಚಕ್ಕುಬಂದಿಯನ್ನು ನಮೂದಿಸಿ ಶಾಸಕರು ಪಕ್ಕದ ಸೊತ್ತನ್ನು ಖರೀದಿಸುತ್ತಿರುವುದು ಅಕ್ರಮ ಮತ್ತು ಅನ್ಯಾಯವೆಂದೂ ಇದನ್ನು ನೋಂದಾಯಿಸಕೂಡದೆಂದೂ ಮಹದೇವಪುರ ಸಬ್ ರಿಜಿಸ್ಟ್ರಾರ್ ಕಚೇರಿಗೆ ಪ್ರತ್ಯೇಕ ದೂರು ದಾಖಲಿಸುತ್ತಾರೆ. ಇನ್ನೂ ಹೇಳಬೇಕೆಂದರೆ ಸ.ನಂ. 83/5 ಮತ್ತು 83/6 ರ ಪೈಕಿ ಯಾವ ಸೊತ್ತನ್ನೂ ಮಾರುವುದಾಗಲಿ, ಖರೀದಿಯಾಗಲಿ, ಕಟ್ಟಡ ನಿರ್ಮಾಣ, ಖಾತೆ ಬದಲಾವಣೆ, ಯಾವುದನ್ನೂ ಮಾಡಕೂಡದೆಂದು ಇಲ್ಲಿಗೆ ಮೂರು ವರ್ಷದ ಹಿಂದೆಯೇ ರಾಜ್ಯ ಹೈಕೋರ್ಟ್ ತಡೆ ನೀಡಿದೆ.




ತಹಶೀಲ್ದಾರ್ ಶಿವಕುಮಾರ್

ಹೀಗಿದ್ದೂ ನಂದೀಶ್ ರೆಡ್ಡಿ ತನ್ನ ಅಧಿಕಾರ, ದುಡ್ಡಿನ ಬಲದಿಂದ ಜಬರ್‌ದಸ್ತ್ ಮಾಡಿ ಸರಿಸುಮಾರು 40 ಕೋಟಿ ರೂಪಾಯಿ ಮಾರ್ಕೆಟ್ ರೇಟಿನ ಈ ಸೊತ್ತನ್ನು ಕಳೆದ ಮಾರ್ಚ್ 23 ರಂದು ತನ್ನ ಹೆಸರಿಗೇ ನೋಂದಾಯಿಸಿಕೊಳ್ಳುತ್ತಾರೆ.


ಪ್ರಶ್ನೆ ಕೇವಲ ಖರೀದಿಸಿದ್ದಕ್ಕಷ್ಟೇ ಅಲ್ಲ; ಯಾವ ರೀತಿ ಕಾನೂನು, ಕೋರ್ಟ್ ಆದೇಶ, ಪಕ್ಕದ ಆಸ್ತಿವಂತರ ಹೋರಾಟ; ಎಲ್ಲವನ್ನೂ ಧಿಕ್ಕರಿಸಿ ಕೇವಲ ತೋಳ್ಬಲದ ಆಧಾರದ ಮೇಲೆ ಎಮ್ಮೆಲ್ಲೇ ನಂದೀಶ್ ರೆಡ್ಡಿ ಸೊತ್ತನ್ನು ಆಕ್ರಮಿಸಿದ್ದಾರೆಂಬುದು. ದೊಡ್ಡನೆಕ್ಕುಂದಿ ಇಂಡಸ್ಟ್ರಿಯಲ್ ಏರಿಯಾದ ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಈ ಎರಡೂ ಸೊತ್ತಿನ ಸದ್ಯದ ಮಾರುಕಟ್ಟೆ ಬೆಲೆ ಕಮ್ಮಿಯೆಂದರೂ ಚದುರ ಅಡಿಗೆ ಮೂರು ಸಾವಿರ ರೂಪಾಯಿಗಳಷ್ಟಿದೆ. ಅಂದರೆ ಮೂರೂವರೆ ಎಕರೆಯ ಸದ್ಯದ ಬಜಾರ್ ರೇಟೆ ನಲವತ್ತು ಕೋಟಿಯಷ್ಟಾಗುತ್ತದೆ.

ಹೀಗೆ ಸ.ನಂ. 83/85 ಮತ್ತು 83/6 ರ ಆಸ್ತಿಯನ್ನು ನಂದೀಶ್ ರೆಡ್ಡಿ ಖರೀದಿಸುವುದೇ ಆದ ಪಕ್ಷದಲ್ಲಿ ಸಂಬಂಧಪಟ್ಟ ಸೊತ್ತಿನ ಚಕ್ಕುಬಂದಿಯನ್ನೇ ನಮೂದಿಸಬೇಕು. ಈ ಬಗ್ಗೆ ಖರೀದಿಗೂ ಮೂರು ತಿಂಗಳ ಮೊದಲೇ ನಂದೀಶ್ ರೆಡ್ಡಿ ಪರ ವಕೀಲರು ಪತ್ರಿಕೆಗೆ ಜಾಹೀರಾತೊಂದನ್ನು ನೀಡಿ ತನ್ನ ಕಕ್ಷಿದಾರರು ಖರೀದಿಸಲಿರುವ ಈ ಸೊತ್ತಿಗೆ ಏನಾದರೂ ತಕರಾರುಗಳಿದ್ದರೆ ತಿಳಿಸುವಂತೆ ಮನವಿ ಮಾಡುತ್ತಾರೆ. ಇದನ್ನು ನೋಡಿದ ಲಕ್ಷ್ಮಿಪತಿ ಮತ್ತು ಮೂರ್ತಿ ನೀವು ನಮೂದಿಸಿರುವ ಚಕ್ಕುಬಂದಿಯಲ್ಲಿರುವುದು ನಮ್ಮ ಸೊತ್ತೇ ಹೊರತು ನಿಮ್ಮದಲ್ಲ ಎಂದು ಅಧಿಕೃತವಾಗಿ ನೋಟಿಸು ಕೊಡುತ್ತಾರೆ. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಲಿಖಿತ ದೂರನ್ನೂ ಸಲ್ಲಿಸುತ್ತಾರೆ.

ಆದರೆ ನಂದೀಶ್ ರೆಡ್ಡಿಗಿದು ಯಾವ ಲೆಕ್ಕ? ಹೈಕೋರ್ಟ್ ಯಥಾಸ್ಥಿತಿ ಕಾಪಾಡುವಂತೆ ನೀಡಿದ ಆದೇಶ ಕೊನೆಗೆ ತನ್ನ ತಲೆಗೆಲ್ಲಿ ಬರುತ್ತೋ ಎಂದು ರೆವಿನ್ಯೂ ಇನ್ಸ್‌ಪೆಕ್ಟರ್ ಮಂಜುನಾಥ್ ರಿಜಿಸ್ಟ್ರೇಷನ್ ಆಗುವ ಸಮಯವನ್ನೇ ಕಾದು 15 ದಿನಗಳ ರಜಾ ಹಾಕಿ ಪರಾರಿಯಾದರೆ, ನಂದೀಶ್ ರೆಡ್ಡಿ ಆ ಜಾಗಕ್ಕೆ ಪಕ್ಕದ ವರ್ತೂರಿನ ಆರ್.ಐ. ಖತರ್‌ನಾಕ್ ಸತ್ಯನಾರಾಯಣನನ್ನು ನೇಮಿಸಿಕೊಳ್ಳುತ್ತಾರೆ. ಬೆಂಗಳೂರು ಉತ್ತರ ವಲಯದ ಅಸಿಸ್ಟೆಂಟ್ ಕಮೀಷನರ್ ಗಂಗಾಧರಸ್ವಾಮಿಯ ಆದೇಶವನ್ನೂ ಧಿಕ್ಕರಿಸುತ್ತಾರೆ. ವಾಸ್ತವವಾಗಿ ಸಬ್ ರಿಜಿಸ್ಟ್ರಾರ್ ಕಚೇರಿಯ ಕಂಪ್ಯೂಟರೈಸ್ಡ್ ನೋಂದಣಿ ಪದ್ಧತಿಯಲ್ಲಿ ಸಂಜೆ ಐದೂವರೆಯಾಗುತ್ತಿದ್ದಂತೆ ಸರ್ವರ್‌ಗಳು ಆಟೋಮ್ಯಾಟಿಕ್ ಆಗಿ ಸ್ಥಗಿತಗೊಳ್ಳುತ್ತವೆ. ಆದರೆ 2011 ರ ಮಾರ್ಚ್ 21 ರಂದು ಮಹದೇವಪುರ ಸಬ್ ರಿಜಿಸ್ಟ್ರಾರ್ ಕಛೇರಿಯ ಸರ್ವರ್ ಅನ್ನು ಸಂಜೆ 6.30 ರ ಹೊತ್ತಿಗೆ ಅಕ್ರಮವಾಗಿ ಆನ್ ಮಾಡಲಾಗುತ್ತದೆ. ಸಬ್ ರಿಜಿಸ್ಟ್ರಾರ್ ಚಲುವರಾಜು ಕಚೇರಿ ವೇಳೆಯ ನಂತರ ಕದ್ದುಮುಚ್ಚಿ ಸರ್ವರ್ ಆನ್ ಮಾಡಿ ಶಾಸಕರ ಅಕ್ರಮ ಆಸ್ತಿಯನ್ನು ನೋಂದಾವಣೆ ಮಾಡುತ್ತಾರೆ.



ನಂದೀಶ್ ರೆಡ್ಡಿ ಹೆಸರಿಗೆ ಪಹಣಿ



ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡದ್ದು

ಹಾಗೇ ನೋಡಿದರೆ ದೊಡ್ಡನೆಕ್ಕುಂದಿಯ ಸ.ನಂ. 83/5 ಮತ್ತು 83/6 ರ ಮೂರೂವರೆ ಎಕರೆ ಕೃಷಿ ಭೂಮಿ. ಇನ್ನೂ ಭೂಪರಿವರ್ತನೆಯಾಗಿಲ್ಲ. ಶಾಸಕರ ವಾರ್ಷಿಕ ಆದಾಯ ಮತ್ತು ಈಗಾಗಲೇ ಹೊಂದಿರುವ ಕೋಟ್ಯಂತರ ರೂಪಾಯಿಗಳ ಆಸ್ತಿಗೆ ಲೆಕ್ಕ ಹಾಕಿದರೆ ಯಾವುದೇ ಕಾರಣಕ್ಕೂ ನಂದೀಶ್ ರೆಡ್ಡಿ ಈ ಸೊತ್ತನ್ನು ಖರೀದಿಸುವಂತಿಲ್ಲ. ಇದು ಗೊತ್ತಿದ್ದೂ ಮಹದೇವಪುರದ ಸಬ್‌ರಿಜಿಸ್ಟ್ರಾರ್ ಚಲುವರಾಜು ಯಾವ ಕಾಯ್ದೆ ಮತ್ತು ಕಾರಣಕ್ಕಾಗಿ ಶಾಸಕರ ಹೆಸರಿಗೆ ಆಸ್ತಿ ನೋಂದಾಯಿಸುತ್ತಾರೆ? ಕೆ.ಆರ್. ಪುರದ ತಹಶೀಲ್ದಾರ್ ಶಿವಕುಮಾರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಗಂಗಾಧರಸ್ವಾಮಿ ಗೊತ್ತಿದ್ದೂ ಏಕೆ ಸುಮ್ಮನಿದ್ದಾರೆ? ಬೆಂಗಳೂರು ನಗರ ಜಿಲ್ಲಾಧಿಕಾರಿ ಅಯ್ಯಪ್ಪಗೆ ಭೂಸುಧಾರಣಾ ಕಾಯ್ದೆಯ ಸ್ಪಷ್ಟ ಉಲ್ಲಂಘನೆ ಗೊತ್ತಿದ್ದೂ ಏಕೆ ಕಣ್ಣುಮುಚ್ಚಿ ಕೂತಿದ್ದಾರೆ?

ಇದು ಕೋರ್ಟ್ ಆದೇಶ, ಕಂದಾಯ ಕಾಯ್ದೆ, ನೋಂದಣಿ ನಿಯಮಾವಳಿಯ ಸ್ಪಷ್ಟ ಉಲ್ಲಂಘನೆ. ಯಾರದೋ ಆಸ್ತಿಯ ಚಕ್ಕುಬಂದಿ ನಮೂದಿಸಿ, ಇನ್ನಾವುದೋ ಸರ್ವೆ ನಂಬರ್‌ನ ಹೆಸರಲ್ಲಿ ತನ್ನ ಹೆಸರಿಗೇ ಕೃಷಿ ಭೂಮಿ ಖರೀದಿಸಿದ ಎಮ್ಮೆಲ್ಲೇ ನಾಳೆ ತನ್ನ ಗೂಂಡಾ ಪಡೆಯನ್ನು ಬಳಸಿ ಪಕ್ಕದ ಆಸ್ತಿಗೆ ಕಾಂಪೌಂಡ್ ಹಾಕುತ್ತಾನೆ. ಪಕ್ಕದವರು ನ್ಯಾಯ ಕೇಳಲು ನಿಂತರೆ ಇದು ನನ್ನದೇ ಆಸ್ತಿಯೆಂದೂ ತನ್ನ ಹೆಸರಿಗೆ ನೋಂದಾವಣೆಗೊಂಡಿದ್ದರಿಂದ ಇದಕ್ಕೂ ನಿಮಗೂ ಸಂಬಂಧವಿಲ್ಲವೆಂದೂ ಪೊಲೀಸರನ್ನು ಛೂ ಬಿಡುತ್ತಾನೆ. ಏಕೆಂದರೆ ಸದ್ಯಕ್ಕೆ ಕೆ.ಆರ್. ಪುರಕ್ಕೆ ಬಂದಿರುವ ಎಲ್ಲಾ ಪೊಲೀಸ್ ಅಧಿಕಾರಿಗಳೂ ನಂದೀಶ್ ರೆಡ್ಡಿಯ ಬಂಟರೆ.

ಅಧಿಕಾರದ ಅನಾಚಾರ ಹೇಗಿದೆಯೆಂದರೆ ಹೈಕೋರ್ಟ್ ತಡೆ, ಅಸಿಸ್ಟೆಂಟ್ ಕಮೀಷನರ್ ಆದೇಶ ಭೂಸುಧಾರಣಾ ಕಾಯ್ದೆಯ ಕಟ್ಟುಪಾಡು, ಮೂಲ ಆಸ್ತಿವಂತರ ದೂರು ಎಲ್ಲವನ್ನೂ ಧಿಕ್ಕರಿಸಿ ಒಂದೇ ವಾರಕ್ಕೆ ನಂದೀಶ್ ರೆಡ್ಡಿ ಹೆಸರಿಗೆ ಖಾತೆ ಬದಲಾವಣೆಯಾಗುತ್ತದೆ. ಮ್ಯುಟೇಶನ್‌ನಲ್ಲಿ ಕಾನೂನುಬಾಹಿರವಾಗಿ ನಂದೀಶ್ ರೆಡ್ಡಿಯ ಹೆಸರನ್ನು ಸೇರಿಸಲಾಗಿದೆ. ಇಡೀ ಪರಭಾರೆಯ ಪ್ರತಿ ಹಂತದಲ್ಲೂ ಕೋರ್ಟ್ ಕಟ್ಟಳೆಯನ್ನು ಉಲ್ಲಂಘಿಸಲಾಗಿದೆ. ಸುಳ್ಳು ದಾಖಲೆಗಳನ್ನು ಶಾಸಕನೇ ನಿಂತು ಸೃಷ್ಟಿಸಿ ಅದರ ಆಧಾರದ ಮೇಲೆ ಬೇರೆ ಯಾರದೋ ಸೊತ್ತನ್ನು ದೋಚಲು ಹೊರಟ ನಂದೀಶ್ ರೆಡ್ಡಿಗೆ ಮುಖ್ಯಮಂತ್ರಿ ಸದಾನಂದ ಗೌಡರ ಗಾಡ್‌ಫಾದರ್ ಯಡ್ಡಿಯೇ ಹಾಲೀ ಗುರು.

ಯಾರದೋ ಆಸ್ತಿಯ ಚಕ್ಕುಬಂದಿ ಹಾಕಿ, ಕೃಷಿ ಭೂಮಿ ಖರೀದಿಸಲು ಯಾವುದೇ ಅರ್ಹತೆಯಿಲ್ಲದಿದ್ದರೂ, ಸುಳ್ಳು ಮಾಹಿತಿ ನೀಡಿ, ನಕಲಿ ದಾಖಲೆಗಳ ಆಧಾರದ ಮೇಲೆ ಸಬ್‌ರಿಜಿಸ್ಟ್ರಾರ್ ಮತ್ತು ತಹಶೀಲ್ದಾರ್‌ರನ್ನು ತನ್ನ ಅಕ್ರಮಕ್ಕೆ ಬಳಸಿಕೊಂಡು, ಕಚೇರಿಯ ವೇಳೆಯ ನಂತರವೂ ಕದ್ದು ನೋಂದಣಿ ಮಾಡಿಸಿಕೊಂಡು ಕಂಡೋರ ಸೊತ್ತು ಲಪಟಾಯಿಸ ಹೊರಟ ಎಮ್ಮೆಲ್ಲೇ ನಂದೀಶ್ ರೆಡ್ಡಿಗೆ ಶಿಕ್ಷೆಯೇ ಇಲ್ಲವೇ?

ಯಡ್ಡಿ, ಕಟ್ಟಾ ಥರದವರೇ ಜೈಲಿನ ಹಾದಿ ಹಿಡಿದಿರುವಾಗ ಫೋರ್ಜರಿ ಗೋಲ್‌ಮಾಲ್ ಮಾಡಿ ಯಾರದೋ ಆಸ್ತಿಗೆ ಬಾಯಿಹಾಕಿರುವ ನಂದೀಶ್ ರೆಡ್ಡಿಯನ್ನು ಜೈಲಿಗೆ ಹಾಕುವವರ್ಯಾರು?

• ರಾ. ಸೋಮನಾಥ್

ಕಾರ್ಟೂನ್ ಕಾರ್ನರ್





ಮಂಗಳೂರು

ಮತ್ತೆ ಚರ್ಚ್ ದಾಳಿಗೆ ಸಂಘ ಪರಿವಾರ ಸಂಚು ಮಾಡುತ್ತಿದೆಯಾ?

ಮಂಗಳೂರು ಪೊಲೀಸರಿಗೆ ಬೇಕಾಗಿರುವುದು ಅಸಹಾಯಕ ಕ್ರೈಸ್ತರ ರಕ್ಷಣೆ-ಭದ್ರತೆ ಅಲ್ಲವೇ ಅಲ್ಲ. ಈ ಪೊಲೀಸ್ ವೇಷದ ಚೆಡ್ಡಿಗಳಿಗೆ ದಾಳಿಕೋರ ಭಜರಂಗಿಗಳಿಗೆ ಕೊಡಲು ಪಾಸ್ಟರ್‌ಗಳ, ಚರ್ಚ್‌ಗಳ, ಪ್ರಾರ್ಥನಾ ಕೂಟದ ಕೇಂದ್ರಗಳ ನಿಖರವಾದ ಅಡ್ರೆಸ್ ಮತ್ತು ಸ್ಕೆಚ್ ಅಷ್ಟೇ! ಇದು ಸಂಘಪರಿವಾರದ ಆದೇಶ ಮತ್ತು ಧರ್ಮೋನ್ಮಾದ ಇಚ್ಛೆ. ಪೊಲೀಸ್ ನಡೆ-ನುಡಿಯೇ ಹಾಸ್ಯಾಸ್ಪದ.

ಕರಾವಳಿಯಲ್ಲಿ ಸಂಘಪರಿವಾರದ ಪಾಪಿಗಳು ಮತ್ತೆ ಅಲ್ಪಸಂಖ್ಯಾತರ ಬೇಟೆಗೆ ಹೊಂಚುಹಾಕಿ ಕೂತಿವೆಯಾ? ಇಂಥದೊಂದು ಆತಂಕಕಾರಿ ಶಂಕೆ ಕಟ್ಟರ್ ಸಂಘಪರಿವಾರಿ ಸದಾನಂದ ಗೌಡ ಸಿಎಂ ಪಟ್ಟವೇರುತ್ತಲೇ ಕರಾವಳಿಗರನ್ನು ಬಿಟ್ಟೂಬಿಡದೆ ಕಾಡಲಾರಂಭಿಸಿದೆ!!


ಒಂಚೂರು ತಣ್ಣಗಿದ್ದ ಮಂಗಳೂರು ಮತ್ತದರ ಸುತ್ತಲಿನ ಪ್ರದೇಶದಲ್ಲಿ ಈಗ ಒಂದರಹಿಂದೊಂದರಂತೆ ಭಜರಂಗಿ ಭೂತಗಳ ನರ್ತನ ನಡೆಯುತ್ತಿದೆ. ಅನೈತಿಕ ಪೊಲೀಸ್‌ಗಿರಿ, ಜಾನುವಾರು ಸಾಗಿಸುವ ಸಾಬಿಗಳಿಗೆ ಹಲ್ಲೆ, ಬುರ್ಖಾ ಖಾನ್ಗಡಿ, ಹೆಡ್‌ಸ್ಕಾರ್ಫ್ ಹಗರಣ, 'ಮತಾಂತರ ನಖರಾಗಳು ಮುಂತಾದ ಅಲ್ಪಸಂಖ್ಯಾತರ ಹಣಿವ ಹರಾಮಿ ಹರಾಕಿರಿಗಳು ದಿನಕ್ಕೊಂದರಂತೆ ಜರುಗುತ್ತಿದೆ. ಅಲ್ಪಸಂಖ್ಯಾತರ ಮೇಲೆರಗಿ ಮತಾಂಧ ತೀಟೆ ತೀರಿಸಿಕೊಳ್ಳಲು ಸಂಘಪರಿವಾರದ ಪುಂಡರು ಮಾಡುತ್ತಿರುವ ಪಾತಕ ಘೋರವಾಗಿದೆ....

"ಹಿಂದೂಸ್ಥಾನ ಹಿಂದೂಗಳಿಗೆ; ಪಾಕಿಸ್ತಾನ ಮುಸ್ಲಿಮರಿಗೆ; ಖಬರಸ್ಥಾನ (ಮಸಣ) ಕ್ರಿಶ್ಚಿಯನ್ನರಿಗೆ" ಎಂಬ ಬರ್ಬರ-ಹೇಯ-ಅಮಾನುಷ ಹಿಡನ್ ಅಜೆಂಡಾ ಕೈಗೆತ್ತಿಕೊಂಡು ಕ್ರೌರ್ಯದ ಕಾರ್ಯಾಚರಣೆಗೆ ಇಳಿದಿರುವ ಚೆಡ್ಡಿ ಚಾಂಡಾಲರ ಸದ್ಯದ ಟಾರ್ಗೆಟ್ ಕರಾವಳಿಯ ನಿಷ್ಪಾಪಿ ಕ್ರೈಸ್ತ ಧರ್ಮೀಯರು! ದಕ್ಷಿಣ ಕನ್ನಡವನ್ನು ಹಿಂದೂತ್ವದ ಪ್ರಯೋಗಶಾಲೆ ಮಾಡಿಕೊಂಡಿರುವ ಆರೆಸ್ಸೆಸ್ ಡಾನ್ ಡಾ. ಕಲ್ಲಡ್ಕ ಪ್ರಭಾಕರ ಭಟ್ ಬಳಗ ಇಲ್ಲಿ ಕ್ರಿಶ್ಚಿಯನ್ನರ ದಮನ ಅರ್ಥಾತ್ ಹಿಂದೂತ್ವದ ಉದ್ದೀಪನ ಎಕ್ಸ್‌ಪೆರಿಮೆಂಟ್ ಸಕ್ಸಸ್ ಆದರೆ ಅದನ್ನು ಇನ್ನುಳಿದ ಜಿಲ್ಲೆಗಳಲ್ಲಿ ಪ್ರಯೋಗಿಸುವ ಸ್ಕೆಚ್ ಹಾಕಿಕೊಂಡಿರುವುದು ಬಹಿರಂಗ ರಹಸ್ಯ!

ತಥಾಕಥಿತ ಚರ್ಚ್ ದಾಳಿಯ ಬಳಿಕ ಅಂದು ಸುಟ್ಟ ಬೆಕ್ಕಂತಾಗಿರುವ ಕರಾವಳಿಯ ಆರೆಸ್ಸೆಸ್, ಭಜರಂಗದಳ, ಹಿಂದೂ ಜಾಗರಣ ವೇದಿಕೆ, ವಿಶ್ವ ಹಿಂದೂ ಪರಿಷತ್.... ಎಂಬ ಚಿತ್ರವಿಚಿತ್ರ ಹೆಸರಿನ ಹಿಂದೂತ್ವ ಪಡೆಯ ಕ್ರಿಶ್ಚಿಯನ್ ವಿರೋಧಿ ದ್ವೇಷಾಸೂಯೆ ಕಿತಾಪತಿ ಇನ್ನಷ್ಟು ವ್ಯವಸ್ಥಿತವಾಗಿದೆ. ಹೇಗಾದರೂ ಮಾಡಿ ಕ್ರಿಶ್ಚಿಯನ್ನರ ಕಾಡಿ ಕೇಕೆ ಹಾಕುವ ಹಠಕ್ಕೆ ಬಿದ್ದಿರುವ ಭಜರಂಗಿ-ಚೆಡ್ಡಿ ಪಡೆ ಮಸಲತ್ತಿನ ಮೇಲೆ ಮಸಲತ್ತು ಹೆಣೆಯುತ್ತಲೇ ಇದೆ. ಯಾವಾಗ ಆರೆಸ್ಸೆಸ್ ಖೆಡ್ಡಾದಲ್ಲಿ ಪಳಗಿ ಅನಾಹುತಕಾರಿ ಚೆಡ್ಡಿಯಾಗಿ ರೂಪುಗೊಂಡಿರುವ ಡೀವಿ ಸದಾನಂದ ಗೌಡ ಮುಖ್ಯಮಂತ್ರಿಯಾದರೋ, ಆಗ ಕ್ರಿಶ್ಚಿಯನ್ನರ ಮೇಲೆ ಕಣ್ಣಿಟ್ಟು ಅಟ್ಟಾಡಿಸುತ್ತಿದ್ದ ಹಿಂದೂ ಹರಾಮಿಗಳ ಹಿಕಮತ್ತಿಗೆಲ್ಲ ಖತರ್‌ನಾಕ್ ಖದರು ಬಂದುಬಿಟ್ಟಿತು.

ಪೊಲೀಸ್ ಫರ್ಮಾನು


ಈ ಬಾರಿ ಸಂಘಪರಿವಾರ ಅಧಿಕಾರ ಬಲ ಬಳಸಿಕೊಂಡು ಪೊಲೀಸ್ ಪಡೆಯನ್ನು ಕ್ರಿಶ್ಚಿಯನ್ನರ ಮೇಲೆ ಛೂಬಿಟ್ಟಿದೆ. ಮೊದಲ ಹಂತದ ದಾಳಿಗೆ ಕ್ರಿಶ್ಚಿಯನ್ ಸಮುದಾಯದ ಪ್ರಾಟಸ್ಟೆಂಟ್ ಪಂಥವನ್ನು ಆಯ್ದುಕೊಂಡಿರುವ ಹಿಂದೂತ್ವವಾದಿಗಳು ಪೊಲೀಸರ ಮೂಲಕ ಎಲ್ಲೆಲ್ಲಿ ಅವರ ಪ್ರಾರ್ಥನಾ ಮಂದಿರ, ಚರ್ಚ್‌ಗಳಿವೆ. ಯಾವ್ಯಾವ ಸ್ಥಳದಲ್ಲಿ ಪ್ರಾರ್ಥನಾ ಕೂಟಗಳು ನಡೆಯುತ್ತವೆ ಎಂಬ ವಿವರ-ಅಂಕಿ-ಅಂಶ ಸಂಗ್ರಹಿಸುವ ಷಡ್ಯಂತ್ರ ನಡೆಸಿದ್ದಾರೆ. ಪ್ರಾರ್ಥನಾ ಕೂಟದ ಪಾಸ್ಟರ್ (ಸಭಾಪಾಲಕ)ಗಳ ಜಾತಕ ಜಾಲಾಡುತ್ತಿದ್ದಾರೆ. ಈ ಸ್ಕೆಚ್ ಇಟ್ಟುಕೊಂಡು ಪ್ಲಾನ್ಡ್ ಆಗಿ ಪ್ರಾಟಸ್ಟೆಂಟ್‌ರ ಆರಾಧನಾ ಅಥವಾ ಪ್ರಾರ್ಥನಾ ಕೇಂದ್ರಗಳ ಮೇಲೆ ದಾಳಿ ಮಾಡಲು ಭಯೋತ್ಪಾದಕ ಭಜರಂಗಿಗಳು ಸರ್ವಸನ್ನದ್ಧರಾಗುತ್ತಿದ್ದಾರೆ!



ಕಲ್ಲಡ್ಕ ಪ್ರಭಾಕರ ಭಟ್

ಪಾಸ್ಟರ್‌ಗಳಿಗೆ ಅಥವಾ ಚರ್ಚ್ ಮುಖ್ಯಸ್ಥರಿಗೆ ಮೊದಲು ಪೊಲೀಸರಿಂದ ಕಿರುಕುಳ ಕೊಡಿಸಿ ಮಾನಸಿಕವಾಗಿ ಹೈರಾಣಾಗಿಸುವ ಕುತಂತ್ರಗಾರಿಕೆ ಕರಾವಳಿ ಆರೆಸ್ಸೆಸ್ ಹೆಡ್‌ಕ್ವಾಟ್ರರ್ಸ್ ಕಲ್ಲಡ್ಕದಲ್ಲೇ ಹೆಣೆಯಲಾಗಿದೆ. ಇದೇ ಆಗಸ್ಟ್ ತಿಂಗಳ ಮೂರನೇ ವಾರದಲ್ಲಿ ಸತತ ಮೂರ್‍ನಾಲ್ಕು ದಿನ ಮಂಗಳೂರು ನಗರ ಹಾಗೂ ಸುತ್ತಮುತ್ತಲಿನ ಹಲವೆಡೆಯ ಬೇರೆ-ಬೇರೆ ಪಂಗಡಕ್ಕೆ ಸೇರಿದ ಪ್ರಾಟಸ್ಟೆಂಟ್ ಕ್ರೈಸ್ತ ಸಭಾಪಾಲಕರನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳು ಕರೆಸಿಕೊಂಡಿದ್ದರು. ಕೆಲವರನ್ನು ಮಂಗಳೂರು ಪೊಲೀಸ್ ಕಮಿಷನರ್ ಕಚೇರಿಗೂ ಕರೆಸಲಾಗಿತ್ತು, ಕೆಲವೇ ತಾಸುಗಳಲ್ಲಿ ಹಠಾತ್ ಆಗಿ ಪೊಲೀಸ್ ಅಧಿಕಾರಿಗಳು ಮಂಗಳೂರು ಸುತ್ತಲಿನ ಐವತ್ತರವತ್ತು ಪಾಸ್ಟರ್‌ಗಳನ್ನು ದೂರವಾಣಿ ಮುಖಾಂತರ ಬೆದರಿಸಿ ಬರುವಂತೆ ಮಾಡಿದ್ದರು.

ಪ್ರತಿ ಠಾಣೆಯಲ್ಲೂ ಪೊಲೀಸ್ ಅಧಿಕಾರಿಗಳು ಪಾಸ್ಟರ್‌ಗಳಿಗೆ ಹೊರಡಿಸಿದ್ದ ಫರ್ಮಾನು ಒಂದೇ! ಇನ್ನು ಮುಂದೆ ಕ್ರೈಸ್ತರು ಆರಾಧನೆ/ಪ್ರಾರ್ಥನೆಗಾಗಿ ಯಾವುದೇ ಪ್ರಾರ್ಥನಾ ಕಟ್ಟಡ, ಮನೆ, ವಸತಿಗಳು, ಸಮುದಾಯಭವನ, ಹೋಟೆಲ್‌ನ ಆಡಿಟೋರಿಯಂಗಳಲ್ಲಿ ಸೇರುವುದಿದ್ದರೆ ಜಿಲ್ಲಾ ಮ್ಯಾಜಿಸ್ಟ್ರೇಟ್ (ಜಿಲ್ಲಾಧಿಕಾರಿ)ರಿಂದ ಲಿಖಿತ ಪರವಾನಿಗಿಯನ್ನು ತಕ್ಷಣ ಪಡೆದುಕೊಳ್ಳಬೇಕು. ಡಿಸಿಯಿಂದ ಪಡೆದ ಒಪ್ಪಿಗೆ ಪತ್ರದ ಜತೆ ಪ್ರಾರ್ಥನಾ ಸಭೆಯ ದಾಖಲೆಗಳನ್ನು ಸಂಬಂಧಿಸಿದ ಪೊಲೀಸ್ ಸ್ಟೇಷನ್‌ಗೆ ಒಪ್ಪಿಸಬೇಕು. ಇಲ್ಲದಿದ್ದರೆ ಕ್ರೈಸ್ತರ ಆರಾಧನಾ ಕೇಂದ್ರಗಳನ್ನು ಎಲ್ಲೇ ಇದ್ದರೂ ಕಾನೂನುಬಾಹಿರವೆಂದು ಪರಿಗಣಿಸಲಾಗುತ್ತದೆ. ಅಷ್ಟೇ ಅಲ್ಲ, ದಾಳಿ, ದೌರ್ಜನ್ಯಗಳಾದರೆ ರಕ್ಷಣೆ-ಭದ್ರತೆ ಒದಗಿಸುವುದೂ ಇಲ್ಲ. ಹಾಗಂತ ಪಾಸ್ಟರ್‌ಗಳನ್ನು ಹೆದರಿಸಿ-ಬೆದರಿಸಿ ಪೊಲೀಸರು ಕಳಿಸಿದ್ದಾರೆ.



ಸದಾನಂದ


ಅಲ್ಪಸಂಖ್ಯಾತ ಕ್ರಿಶ್ಚಿಯನ್ನರ ಅಸ್ತಿತ್ವಕ್ಕೆ ಸಂಚಕಾರ ತರುವ ಸಂಚಿನ ಈ ಪೊಲೀಸರ ಮೌಖಿಕ ಸುಗ್ರೀವಾಜ್ಞೆ ಸಂವಿಧಾನಬಾಹಿರ ವಷ್ಟೇ ಅಲ್ಲ, ಅಮಾನುಷ ಕೂಡ. ಕ್ರಿಶ್ಚಿಯನ್ನರ ಬದುಕುವ ಹಕ್ಕು, ಧಾರ್ಮಿಕ ಹಕ್ಕು ಮತ್ತು ಪ್ರಾರ್ಥನಾ ಸ್ವಾತಂತ್ರ್ಯ ಖಾಕಿಗಳಿಂದ ಹರಣ ಮಾಡಿಸಿ ಹಿಂದೂತ್ವ ವಿಜೃಂಭಿಸುವ ದಾದಾಗಿರಿಯ ಮೂಲ ಇರುವುದೇ ತೆರೆಮರೆಯಲ್ಲಿ ಕುಳಿತು ಡೀವಿಎಸ್ ಗೌಡರ ಸರ್ಕಾರ ಕುಣಿಸುವ ಕಲ್ಲಡ್ಕದ ಆರೆಸ್ಸೆಸ್ ಅಡ್ಡೆಗಳೆಂಬುದನ್ನು ಪೊಲೀಸರೇ ರಹಸ್ಯವಾಗಿ ಪಿಸುಗುಡುತ್ತಾರೆ. ಖಾಕಿ ಕಿರಾತಕರ ಈ ಆ್ಯಂಟಿ ಕ್ರಿಶ್ಚಿಯನ್ ಆರ್ಡರ್ ಅದೆಷ್ಟು ಕ್ರೂರ-ಏಕಪಕ್ಷೀಯವಾಗಿದೆ ಎಂದರೆ ಅನೇಕ ವರ್ಷಗಳಿಂದ ನಡೆಸಿಕೊಂಡು ಬಂದಿರುವ ಪ್ರಾರ್ಥನಾ ಕೂಟಗಳನ್ನು ತಕ್ಷಣದಿಂದಲೇ ನಿಲ್ಲಿಸಬೇಕಂತೆ. ಅಲ್ಲದೆ ವಾರಕ್ಕೊಂದು ದಿನ ರವಿವಾರವೂ ಇಂಥ ಆರಾಧನೆ ಕ್ರಿಶ್ಚಿಯನ್ನರು ಮಂಗಳೂರು ನಗರ ಮತ್ತದರ ಆಜುಬಾಜಿನಲ್ಲಿ ನಡೆಸುವಂತಿಲ್ಲ!!

ಹಿಟ್ಲರ್ ಶಾಹಿ ಹಿಕಮತ್ತು!

ಭಜರಂಗಿಗಳ ಅಡಿಯಾಳಂತಾಗಿರುವ ಮಂಗಳೂರಿನ ಪೊಲೀಸರು ಕ್ರಿಶ್ಚಿಯನ್ನರಿಗೆ ಪ್ರಾರ್ಥನೆ ಮಾಡಲು ಹಾಕಿರುವ ಷರತ್ತುಗಳು ಒಂದೆರಡಲ್ಲ. ಯಾವುದೇ ಕ್ರಿಶ್ಚಿಯನ್ನರ ಮನೆಯಲ್ಲಿ ಪ್ರಾರ್ಥನೆಗಳು ನಡೆಯುವುದಿದ್ದರೆ ಆ ಮನೆ ಮೆಂಬರ್‌ಗಳಷ್ಟೇ ಇರಬೇಕು. ಹೊರಗಿನವರು ಇರುವುದಾದರೆ ಡಿಸಿ ಪರ್ಮಿಷನ್ ಬೇಕು. ದಿನನಿತ್ಯದ ಆರಾಧನೆಗೂ ಜಿಲ್ಲಾಧಿಕಾರಿ ಪರವಾನಗಿ ಎಂದರೆ ಅರ್ಥವೇನು? ಬಹುಶಃ ಇಂಥ ಜಂಗಲ್ ಕಾನೂನು ನರಹಂತಕ ಹಿಂದೂವಾದಿ ನರೇಂದ್ರಮೋದಿಯ ಗುಜರಾತ್‌ನಲ್ಲೂ ಇರಲಿಕ್ಕಿಲ್ಲ!

ಬಲಾತ್ಕಾರವಾಗಿ ಹೊರಡಿಸಿರುವ ಈ ಕ್ರಿಶ್ಚಿಯನ್ ದಮನದ ಆದೇಶದ ಬಗ್ಗೆ ಪಾಸ್ಟರ್‌ಗಳು-ಫಾದರ್‌ಗಳು ಸ್ಪಷ್ಟೀಕರಣ ಕೇಳಿದಾಗ ಪೊಲೀಸರು ಅವರನ್ನೆಲ್ಲ ದಬಾಯಿಸಿ ಬಾಯಿ ಮುಚ್ಚಿಸಿದ್ದಾರೆ. ಈ ಆದೇಶ ಎಲ್ಲ ಧರ್ಮೀಯರಿಗೂ ಅನ್ವಯವಾಗುತ್ತದೋ ಎಂದು ಕೇಳಿದರೆ ಪೊಲೀಸರು ಪಕ್ಕಾ ಭಜರಂಗಿಗಳಂತೆ-ಹಿಂದೂತ್ವದ ಫಂಟರ್‌ಗಳಂತೆ ಫಾಸ್ಟರ್‌ಗಳ ಮೇಲೆ ಎಗರಾಡಿದ್ದಾರೆ. 'ನೀವು ಹಿಂದೂತ್ವದ ದಾಳಿಯಿಂದ ಬಚಾವಾಗಬೇಕೆಂದಿದ್ದರೆ, ನಿಮ್ಮ ಚರ್ಚ್‌ಗಳಿಗೆ ಭದ್ರತೆ ಬೇಕೆಂದಿದ್ದರೆ ನಾವು ಹೇಳಿದಂತೆ ಕೇಳಬೇಕು...." ಎಂದು ಪ್ರತಿ ಠಾಣೆಯಲ್ಲೂ ಪೊಲೀಸ್ ಅಧಿಕಾರಿಗಳು ಪಾಸ್ಟರ್‌ಗಳಿಗೆ ಹೇಳಿ ಭೀತಿ ಬಿತ್ತಿ ಕಳಿಸಿದ್ದಾರೆ. ಈ ಹಿಟ್ಲರ್ ಶಾಹಿ ಆರ್ಡರ್‌ನಿಂದ ಕಂಗೆಟ್ಟಿರುವ ದುರ್ಬಲ-ಅಸಹಾಯಕ ಪಾಸ್ಟರ್‌ಗಳು ಮತ್ತು ಪ್ರಾಟಸ್ಟೆಂಟ್ ಕ್ರಿಶ್ಚಿಯನ್ನರ ಗೋಳು ಹೇಳತೀರದು!

ಪೊಲೀಸರೀಗ ಪ್ರಾಟಸ್ಟೆಂಟ್ ಕ್ರೈಸ್ತರ ಪಾಸ್ಟರ್-ಫಾದರ್‌ಗಳ ಹಿಂದೆ ಬಿದ್ದಿದ್ದಾರೆ. ಅವರು ನಡೆಸುವ ಆರಾಧನಾ ಅಥವಾ ಪ್ರಾರ್ಥನಾ ಸಭೆಗಳ ಮೇಲೆ ಕಣ್ಣಿಟ್ಟು ಹಿಂದೂತ್ವದ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಭಜರಂಗಿ-ಚೆಡ್ಡಿ ಲೀಡರ್‌ಗಳು ಹಾಕಿಕೊಟ್ಟ ನಕ್ಷೆಯಂತೆ ಪ್ರಾರ್ಥನಾ ಸಭೆಗಳ ಮೇಲೆ ದಾಳಿ ಮಾಡಿ ಅಡ್ಡಿಪಡಿಸುತ್ತಿದ್ದಾರೆ. ಪಾಸ್ಟರ್‌ಗಳ ಮೇಲೆ ಮತಾಂತರ, ಲೈಂಗಿಕ ಕಿರುಕುಳದಂಥ ಹಸಿಹಸೀ ಸುಳ್ಳು ಆರೋಪ ಹೊರಿಸಿ ಸತಾಯಿಸುತ್ತಿದ್ದಾರೆ. ಕ್ರೈಸ್ತರಿಗೆ ಪ್ರಾರ್ಥನೆ ಅಥವಾ ಆರಾಧನೆಗೆಂದು ಮನೆ, ಕಟ್ಟಡ, ಹೋಟೆಲ್, ಸಭಾಭವನ, ಸಮುದಾಯ ಭವನ ಕೊಟ್ಟವರಿಗೆ ರಹಸ್ಯವಾಗಿ ಕರೆದು ಬಾಡಿಗೆ ಕಟ್ಟಡಗಳನ್ನು ಕೊಡದಂತೆ, ಕೊಟ್ಟಿರುವುದನ್ನು ವಾಪಸ್ ಪಡೆಯುವಂತೆ 'ದಂಡ' ಬಳಸಿ ಬೆದರಿಸುತ್ತಿದ್ದಾರೆ. ಹೀಗಾಗಿ ಬಾಡಿಗೆ ಕರಾರು ಊರ್ಜಿತದಲ್ಲಿದ್ದರೂ ಕಟ್ಟಡದ ಒಡೆಯರು ಪಾಸ್ಟರ್‌ಗಳಿಗೆ ಪ್ರಾರ್ಥನೆ ನಡೆಸದಂತೆ ಹೇಳಬೇಕಾಗಿ ಬಂದಿದೆ. ಅನೇಕ ಕಡೆ ಕಟ್ಟಡಗಳನ್ನು ಪಾಸ್ಟರ್‌ಗಳಿಂದ ಓನರ್‌ಗಳು ವಾಪಸ್ ಪಡೆದುಕೊಂಡಿದ್ದಾರೆ.



ಸೀಮಂತಕುಮಾರ್ ಸಿಂಗ್

ಪೊಲೀಸರ ಈ ಅನಾಚಾರ-ಹಿಂದೂತ್ವದ ತೆವಲಿಗೆ ಒಂದು ಸ್ಯಾಂಪಲ್ ಇಲ್ಲಿದೆ. 2011 ಆಗಸ್ಟ್ 21ರಂದು ಸುರತ್ಕಲಿನಲ್ಲಿ ನಡೆದ ಘಟನೆಯಿದು. ಸುರತ್ಕಲ್‌ನ ಪ್ರಾಟಸ್ಟೆಂಟ್ ಚರ್ಚ್ (ಅಸೆಂಬ್ಲಿ)ನವರು ಹಲವು ವರ್ಷದಿಂದ ತಿಮತಿ ಎಂಬುವರ ಹೋಟೆಲ್‌ನಲ್ಲಿ ಪ್ರಾರ್ಥನೆ ನಡೆಸುತ್ತ ಬಂದಿದ್ದರು. ಈ ಹೋಟೆಲ್ ಮಾಲೀಕರಿಗೆ ಪೊಲೀಸರು ಆರಾಧನೆಗೆ ಅವಕಾಶ ಕೊಡದಂತೆ ಹೆದರಿಸಿದ್ದಾರೆ. ಪೊಲೀಸರ 'ಅಧಿಕೃತ' ಪುಂಡಾಟಕ್ಕೆ ಕಂಗೆಟ್ಟ ಹೋಟೆಲ್ ಮಾಲೀಕರು ಮರುದಿನವೇ ಪಾಸ್ಟರ್‌ನ ಸಂಧಿಸಿ ಇನ್ನೂ ಮುಂದೆ ನಮ್ಮ ಹೋಟೆಲ್‌ನಲ್ಲಿ ಯಾವುದೇ ಸಭೆ-ಪ್ರಾರ್ಥನೆ-ಕೂಟ ನಡೆಸದಂತೆ ಹೇಳಿದ್ದಾರೆ. ಅಗ್ರಿಮೆಂಟ್ ಇನ್ನೂ ಮುಗಿದಿಲ್ಲವೆಂದು ಪಾಸ್ಟರ್ ಕಡೆಯವರು ಹೇಳಿದಾಗ "ನಾವು ಬದುಕಬೇಕೆಂದಿದ್ದರೆ, ಪೊಲೀಸರ ಕಿರುಕುಳದಿಂದ ಬಚಾವಾಗಬೇಕೆಂದಿದ್ದರೆ ನೀವು ಕಟ್ಟಡ ಖಾಲಿ ಮಾಡಬೇಕು ......" ಎಂದು ಅಸಹಾಯಕತೆ ತೋಡಿಕೊಂಡರು.

ಸರಿ, ಆ ಭಾನುವಾರ 21 ಆಗಸ್ಟ್ 2011ರಂದು ಸುರತ್ಕಲ್ ಚರ್ಚ್‌ನವರು ಅನಿವಾರ್ಯವಾಗಿ ತಮ್ಮ ಪ್ರಾರ್ಥನೆ ಹತ್ತಿರದ ಸಮುದಾಯಭವನವೊಂದರಲ್ಲಿ ನಡೆಸಲುಹೋದರು. ಅಲ್ಲಿಗೂ ಪೊಲೀಸರು ಬೆನ್ನಟ್ಟಿ ಬಂದರು. ಜಿಲ್ಲಾಧಿಕಾರಿಗಳು ಪ್ರಾರ್ಥನಾ ಕೂಟಕ್ಕೆ ಕೊಟ್ಟ ಅನುಮತಿ ಇದೆಯಾ? ಎಂದು ಬೆದರಿಸಿದರು. ಅಂತೂ ದೊಡ್ಡ ವಾಗ್ವಾದವೇ ನಡೆದುಹೋಯ್ತು. ಕೊನೆಗೆ ಈ ಭಾನುವಾರದ ಮಟ್ಟಿಗಷ್ಟೇ ಪ್ರಾರ್ಥನೆಗೆ ಅವಕಾಶ ಪೊಲೀಸರು ಕೊಟ್ಟರು. ಪೊಲೀಸರ ಹಿಂದೆ ಅವಿತುಕೊಂಡಿದ್ದ ಭಜರಂಗಿಗಳು ಕ್ರಿಶ್ಚಿಯನ್ನರ ಅಸಹಾಯಕತೆ-ಚಡಪಡಿಕೆ ಕಂಡು ವಿಕೃತಾನಂದ ಅನುಭವಿಸಿದರು. ಒಟ್ಟಿನಲ್ಲಿ ಆ ಸುರತ್ಕಲ್ ಚರ್ಚ್‌ನವರು ಈಗ ಭಜರಂಗಿ ಅಂಕೆಯಲ್ಲಿರುವ ಪೊಲೀಸರ ಕಾನೂನು ಬಾಹಿರ 'ನಿಷೇಧಾಜ್ಞೆ' ಯಿಂದ ಎಲ್ಲೂ ಪ್ರಾರ್ಥನಾ ಸಭೆ ನಡೆಸದಂತಾಗಿದೆ. ಇದೇ ಭಜರಂಗಿ-ಚೆಡ್ಡಿ-ಕಾವಿ ಪಡೆಯ ಅಂತಿಮ ಗುರಿ. ಎಲ್ಲ ಪ್ರಾಟಸ್ಟೆಂಟ್ ಚರ್ಚ್‌ನವರಿಗೂ ಇದೇ ಗತಿ ಕಾಣಿಸುವ ಕ್ರಿಮಿನಲ್ ಕಿತಾಪತಿ ಸಂಘಪರಿವಾರ ತುಂಬಾ ನಾಜೂಕಾಗಿ ನಡೆಸುತ್ತಿದ್ದಾರೆ. ಇದಕ್ಕೆ ಸಿಎಂ ಡೀವಿಯ ಪೊಲೀಸ್ ಪಡೆ 'ಶಕ್ತಿಮೀರಿ' ಸಹಕರಿಸುತ್ತಿದೆ. ಇದರರ್ಥ ಇಷ್ಟೆ. ದಕ್ಷಿಣ ಕನ್ನಡದಲ್ಲಿ ಕಾನೂನು-ಪೊಲೀಸರು ಸಂಘಪರಿವಾರದ ಕತ್ತೆಯಾಗಿದೆ. ಭಜರಂಗಿಗಳು ಹೇಳಿದ್ದೇ ಕಾನೂನು; ಆಡಿದ್ದೇ ಆಟವಾಗಿದೆ!!

ಭಜರಂಗಿ ಸ್ಕೆಚ್ಚು; ಪೊಲೀಸರಿಗೆ ಹುಚ್ಚು

ಕ್ರಿಶ್ಚಿಯನ್ನರ ಆರಾಧನಾ ಕೂಟಗಳಿಗೆ, ಚರ್ಚ್‌ಗಳಿಗೆ ಭದ್ರತೆ ಒದಗಿಸುವ ನೆಪದಲ್ಲಿ ಆ ಅಲ್ಪಸಂಖ್ಯಾತ-ಅಮಾಯಕ ಸಮುದಾಯವನ್ನು ಮಾನಸಿಕ ಕ್ಷೋಭೆಗೆ ತಳ್ಳಿ-ಅತಂತ್ರರಾಗಿಸಿ ಹಿಂದೂತ್ವದ ದರ್ಬಾರು ನಡೆಸುವ ಭಜರಂಗಿ-ಚೆಡ್ಡಿ ಪಡೆಯ 'ಧರ್ಮಕಾರಣ'ವನ್ನು ಮಂಗಳೂರು ಪೊಲೀಸರ 'ಆರಾಧನಾ ಪರ್ಮಿಷನ್' ರಾದ್ಧಾಂತ ಅನಾವರಣಗೊಳಿಸಿಬಿಟ್ಟಿದೆ. ಭವಿಷ್ಯದಲ್ಲಿ ಕ್ರೈಸ್ತರ ಆರಾಧನಾ-ಪ್ರಾರ್ಥನಾ ಸ್ಥಳಗಳ ಮೇಲೆ ನಡೆಯಬಹುದಾದ ದಾಳಿಯ ಗುಮ್ಮ ತೋರಿಸಿ ಜಿಲ್ಲಾಧಿಕಾರಿಗಳಿಂದ ಹೊಸ ಪರವಾನಗಿ-ಒಪ್ಪಿಗೆ ಪತ್ರ ತರುವಂತೆ ಹೇಳುವ ಅಧಿಕಾರ ಪೊಲೀಸರಿಗೆ ಕೊಟ್ಟವರ್‍ಯಾರು? ಮಂಗಳೂರು ಪೊಲೀಸ್ ಕಮಿಷನರ್ ಸೀಮಂತಕುಮಾರ್ ಸಿಂಗ್ ಎಂಬ ಬಳ್ಳಾರಿ ರೆಡ್ಡಿ ಹಿತರಕ್ಷಕನ ಕೇಳಿದರೆ ತಾನಂತೂ ಅಂಥ ಆದೇಶ ಅಧೀನಾಧಿಕಾರಿಗಳಿಗೆ ಹೊರಡಿಸಿಲ್ಲ ಅಂತಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೇಳಿದರೆ ಎಚ್‌ಕ್ಯೂಎ ನಗುತ್ತಾರೆ. ಅಂಥ ಪರ್ಮಿಷನ್ ಅವಶ್ಯವಿಲ್ಲ ಅಂತಾರೆ.

ಹಾಗಿದ್ದರೆ ಸಿಎಂ ಡೀವಿಯೇ ತನ್ನೂರಿನ ಭಜರಂಗಿ-ಚೆಡ್ಡಿ-ಕಾವಿ ಪಡೆ ಸಂಪ್ರೀತಗೊಳಿಸಲು ಪಿಎಸ್‌ಐ, ಸಿಪಿಐ ಗ್ರೇಡಿನ ಟೂಸ್ಟಾರ್-ತ್ರಿಸ್ಟಾರ್‌ಗಳಿಗೆ ಕ್ರಿಶ್ಚಿಯನ್ನರ ಹಣಿಯಲು ರಹಸ್ಯ ಸಂದೇಶ ನೀಡಿದ್ದಾರಾ? ಗೃಹಮಂತ್ರಿ ಅಶೋಕ್ ಸಾಹೇಬರಿಗೆ ಮಂಗಳೂರು-ಕರಾವಳಿಯಲ್ಲಿ ಪೊಲೀಸ್ ಇಲಾಖೆ ಕೇಸರೀಕರಣ ಆಗಿರುವ ಅರಿವು ಇದೆಯಾ? ತಮಾಷೆ ನೋಡಿ; ಪ್ರಾಟಸ್ಟೆಂಟ್ ಕ್ರೈಸ್ತರು ಅಲ್ಲಲ್ಲಿ ನಡೆಸುವ ಪ್ರಾರ್ಥನೆ-ಆರಾಧನೆಗಳ ಸ್ಥಳ, ಚರ್ಚ್ ವಿವರ, ಪಾಸ್ಟರ್‌ಗಳ ಇರುವಿಕೆ ಮಾಹಿತಿ ತಮ್ಮಲ್ಲಿಲ್ಲದಿರುವುದರಿಂದ ಡೀಸಿಯಿಂದ ಹೊಸ ಪ್ರಾರ್ಥನಾ ಪರ್ಮಿಷನ್, ಲೈಸೆನ್ಸ್ ತರಬೇಕು, ಚರ್ಚ್‌ಗಳ ಮಾಹಿತಿ ಒದಗಿಸಬೇಕೆಂದು ಪೊಲೀಸರು ಹೇಳುತ್ತಿದ್ದಾರೆ. ಹಾಗಾದರೆ ಸುಮಾರು 60-70 ಪಾಸ್ಟರ್‌ಗಳನ್ನು ಕೇವಲ ಫೋನ್ ಕಾಲ್‌ಗಳ ಮೂಲಕ ಕೆಲವೇ ಕೆಲವು ಗಂಟೆಗಳಲ್ಲಿ ಠಾಣೆಗಳಿಗೆ ಕರೆಸಿಕೊಳ್ಳಲು ಅದ್ಹೇಗೆ ಸಾಧ್ಯವಾಯ್ತು?


ಮಂಗಳೂರು ಪೊಲೀಸರಿಗೆ ಬೇಕಾಗಿರುವುದು ಅಸಹಾಯಕ ಕ್ರೈಸ್ತರ ರಕ್ಷಣೆ-ಭದ್ರತೆ ಅಲ್ಲವೇ ಅಲ್ಲ. ಈ ಪೊಲೀಸ್ ವೇಷದ ಚೆಡ್ಡಿಗಳಿಗೆ ದಾಳಿಕೋರ ಭಜರಂಗಿಗಳಿಗೆ ಕೊಡಲು ಪಾಸ್ಟರ್‌ಗಳ, ಚರ್ಚ್‌ಗಳ, ಪ್ರಾರ್ಥನಾ ಕೂಟದ ಕೇಂದ್ರಗಳ ನಿಖರವಾದ ಅಡ್ರೆಸ್ ಮತ್ತು ಸ್ಕೆಚ್ ಅಷ್ಟೇ! ಇದು ಸಂಘಪರಿವಾರದ ಆದೇಶ ಮತ್ತು ಧರ್ಮೋನ್ಮಾದ ಇಚ್ಛೆ. ಪೊಲೀಸ್ ನಡೆ-ನುಡಿಯೇ ಹಾಸ್ಯಾಸ್ಪದ. ಕಳ್ಳರು ಜನರನ್ನು ದೋಚಲು ಬರುತ್ತಾರೆಂದು ಯಾರೂ ನಿದ್ರೆಮಾಡಬೇಡಿ ಎಂದಂತಿದೆ ಪೊಲೀಸರು, ಪಾಸ್ಟರ್‌ಗಳಿಂದ ಕೋಮು ದಾಳಿಯಿಂದ ರಕ್ಷಿಸಿಕೊಳ್ಳಲು ಚರ್ಚ್-ಪ್ರಾರ್ಥನಾ ಕೂಟದ ವಿವರ ಕೇಳಿರುವುದು!

ಈಗ ಮಂಗಳೂರು ಪರಿಸರದ ಕ್ರೈಸ್ತರು ಅನುಮಾನ, ಆತಂಕದಿಂದ ಚಡಪಡಿಸುತ್ತಿದ್ದಾರೆ. ಪೊಲೀಸರು ಯಾವಾಗ ತಮ್ಮ ವಿವರ, ಭಜರಂಗಿಗಳ ಕೈಗೆ ಕೊಟ್ಟು ದಾರಿ ರೂಪಿಸಿದ್ದಾರೋ ಎಂಬ ಭಯದಲ್ಲಿದ್ದಾರೆ. ಅಂತೂ ಅರಾಜಕತೆ ತಾಂಡವಾಡುತ್ತಿರುವ ಕರಾವಳಿಯಲ್ಲಿ ಇನ್ನು ಮುಂದೆ ನಿದ್ದೆ-ಊಟ-ಫಸ್ಟ್‌ಕಾಲ್-ಸೆಕೆಂಡ್‌ಕಾಲ್‌ಗೂ ಸಂಘಪರಿವಾರದ ಪರ್ಮಿಷನ್ ಪಡೆಯಬೇಕಾಗಿ ಬಂದರೂ ಅಚ್ಚರಿಯೇನಿಲ್ಲ. ಕರಾವಳಿ ಕುವರ ಡೀವಿಯ ಸಿಎಂ ಪರ್ವದಲ್ಲಿ ಕಾನೂನು-ಸುವ್ಯವಸ್ಥೆ ಹಿಂದಿಗಿಂತಲೂ ಹೆಚ್ಚು ಹಾಳಾಗುವ ಸಕಲ ಸಂಕೇತಗಳು ಒಂದೇ ತಿಂಗಳಲ್ಲಿ ಕಾಣಿಸಲಾರಂಭಿಸಿದೆ.

ಹೇ...ರಾಮ್! ಕರಾವಳಿಯನ್ನು ಕಾಪಾಡಪ್ಪ..!!


• ನವುಷ

ಜೇಕೆ ಪಡೆಯ ಕಮಾಂಡರ್ ಹಳೇ ಪಂಟರ್ ಬ್ರೂಸ್ಲಿಯ ಆತ್ಮಹತ್ಯೆ


ಜೇಕೆ ಬಂಟ ಬ್ರೂಸ್ಲಿ


ಹಳೇ ಪಂಟರ್ ಬ್ರೂಸ್ಲಿ ನೇಣು ಹಾಕ್ಕೊಂಡು ಸತ್ತನಂತೆ ಎಂಬ ಸುದ್ದಿ ಕೇಳಿದ್ದೇ ಇಡೀ ಬೆಂಗಳೂರು ಅಂಡರ್‌ವರ್ಲ್ಡ್‌ನ ಕಣ್ಣು ಬಿದ್ದದ್ದು ಆತನ ಗಾಡ್‌ಫಾದರ್ ಜೇಕೆ ಅಲಿಯಾಸ್ ಜೇಡರಹಳ್ಳಿ ಕೃಷ್ಣಪ್ಪನ ಮೇಲೆ.

ಜೇಕೆಯ ಕೋಟಿಗಟ್ಟಲೆ ದುಡ್ಡನ್ನು ದುಬಾಯಿಸಿದ್ದಕ್ಕೇ ಬ್ರೂಸ್ಲಿ ನೇಣು ಹಾಕ್ಕೊಂಡನಂತೆ ಎಂಬುದು ಒಂದು ಸುದ್ದಿ. ಹೆಂಡ್ತಿಗೆ ಗೊತ್ತಿಲ್ಲದೇ ಮತ್ತೊಂದು ಮದುವೆ ಮಾಡಿಕೊಂಡಿದ್ದಕ್ಕೇ ಸೂಸೈಡ್ ಮಾಡಕೊಂಡವ್ನೆ ಎಂಬುದು ಇನ್ನೊಂದು ಸುದ್ದಿ. ಸಿಕ್ಕಾಪಟ್ಟೆ ಸಾಲ ಮಾಡಿಕೊಂಡು ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡನಂತೆ ಎಂಬುದು ಮಗದೊಂದು ಸುದ್ದಿ. ಜೈಲಲ್ಲಿದ್ದ ಆಟೋರಾಮ ಲಿಕ್ಕರ್ ರಂಗಸ್ವಾಮಿಯಿಂದ ಕೋಟಿಗಟ್ಟಲೆ ಸಾಲ ಕೊಡಿಸಿದ್ದನ್ನು ತೀರಿಸು ಎಂದು ರೋಪು ಹಾಕಿದ್ದಕ್ಕೇ ಬ್ರೂಸ್ಲಿ ಭಯಬಿದ್ದು ನೇಣು ಹಾಕ್ಕೊಂಡ ಎಂಬುದು ಮತ್ತೊಂದು ವದಂತಿ.


ಗುರು ಜೇಕೆ

ನಿನ್ನೆಮೊನ್ನೆ ಫೀಲ್ಡಿಗೆ ಎಂಟ್ರಿ ಕೊಟ್ಟ ಚಿಲ್ಟು ಹುಡುಗರೇ ಐಷಾರಾಮಿ ಕಾರುಗಳಲ್ಲಿ ಓಡಾಡಿಕೊಂಡಿರುವಾಗ ಆ ಕಾಲದ ಪಂಟರ್ ಬ್ರೂಸ್ಲಿ ಸಾಲ ತೀರಿಸೋಕ್ಕಾಗದೆ ಸೂಸೈಡ್ ಮಾಡಿಕೊಳ್ತಾನೆ ಅಂದ್ರೆ ನಂಬಕ್ಕಾಗುತ್ತಾ? ಬೇರೆ ಏನೋ ಕಾರಣ ಇರಲೇಬೇಕು. ಯಾರೋ ಮರ್ಡರ್ ಮಾಡಿ ಪೊಲೀಸರ ಮೂಲಕ ಸೂಸೈಡ್ ಕತೆ ಕಟ್ತಾ ಇದ್ದಾರೆ.....! ಎಂಬ ಕುಹಕ ಕೂಡ ಕೇಳಿ ಬರುತ್ತಿದೆ.

ಜೇಕೆ, ಕಾಲಾಪತ್ಥರ್, ಬೆಕ್ಕಿನಕಣ್ ರಾಜೇಂದ್ರ, ಶ್ರೀರಾಂಪುರ ಕಿಟ್ಟಿ ಇತ್ಯಾದಿ ಹಳೇ ತಲೆಮಾರಿನ ರೌಡಿಗಳ ಜಮಾನಾದ ಅಂತರಾಳ ಬಲ್ಲ ಯಾರಿಗಾದರೂ ಜೇಕೆ ಗ್ಯಾಂಗಿನ ಬ್ರೂಸ್ಲಿಯ ಕುಖ್ಯಾತಿ ಗೊತ್ತಿರಲೇಬೇಕು. ಲೇಟಿಟ್


ಬ್ರೂಸ್ಲಿಯ ಪತ್ನಿ ಮಗು

ಮಂಜನ ಹತ್ಯೆ, ತಿಮ್ಮೇನಹಳ್ಳಿ ತಮ್ಮಯ್ಯನ ಕೊಲೆ, ಇದಕ್ಕೂ ಮುನ್ನ ಜೇಕೆ ಹೆಸರಲ್ಲಿ ನಡೆದ ಅನೇಕ ಕ್ರೈಮುಗಳಲ್ಲಿ ತೆರೆಮರೆಯಲ್ಲಿರುತ್ತಿದ್ದ ಬ್ರೂಸ್ಲಿ ಜೇಕೆ ಗ್ಯಾಂಗಿನ ಕಮಾಂಡರ್. ಜೇಡರಹಳ್ಳಿ ಕೃಷ್ಣಪ್ಪನ ಪಡೆಯಲ್ಲಿ ಅಂಕಲ್ ನಾಯ್ಡು ಬಿಟ್ಟರೆ ಕೇಳಿಬರುತ್ತಿದ್ದ ಮೂರನೇ ಹೆಸರೇ ಬ್ರೂಸ್ಲಿ. ಆತನ ಟೆರ್ರರ್, ಫೀಲ್ಡಿನಲ್ಲಿದ್ದ ಹಿಡಿತ, ಎಂಥಾ ಡೀಲಿದ್ದರೂ ಚಿಟಿಕೆ ಹೊಡೆಯುವಷ್ಟರಲ್ಲಿ ಮಾಡಿ ಮುಗಿಸುತ್ತಿದ್ದ ಚಾಲಾಕು ಬಲ್ಲವರಿಗೆ ಆತನ ಆತ್ಮಹತ್ಯೆಯನ್ನು ಜೀರ್ಣಿಸಿಕೊಳ್ಳಲು ಸಾಧ್ಯವೇ ಇಲ್ಲ.

ಆಗಸ್ಟ್ 28 ರ ಅಪರಾಹ್ನ ಶ್ರೀನಗರದ ತನ್ನ ಮನೆಯಲ್ಲೇ ಬ್ರೂಸ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಗುವನ್ನು ಶಾಲೆಗೆ ಬಿಡಲೆಂದು ಪತ್ನಿ ಮಂಜುಳಾ ಹೊರಹೋಗಿದ್ದನ್ನೇ ಕಾಯ್ದು ತನ್ನ ಬೆಡ್‌ರೂಮಿನ ಫ್ಯಾನಿಗೆ ನೇಣು ಹಾಕಿಕೊಂಡ. ಬ್ರೂಸ್ಲಿ ಅಲಿಯಾಸ್ ಶ್ರೀನಿವಾಸ್ ಹನುಮಂತನಗರದ ರೌಡಿಶೀಟರ್. ಶ್ರೀನಗರದ ಬಸ್ ನಿಲ್ದಾಣದ ಎದುರೇ ಇದ್ದ 9 ನೇ ಮೇನಿನ 191 ನೇ ನಂಬರಿನ ಮನೆಯ ಎರಡನೇ ಮಹಡಿಯಲ್ಲಿ ಬ್ರೂಸ್ಲಿ ಬಾಡಿಗೆಗಿದ್ದ. ಮಗ ತಿಲಕ್‌ಗಿನ್ನೂ ಹದಿನಾಲ್ಕು ವರ್ಷ. ಎಸ್ಸೆಲ್ಸಿ ಓದುತ್ತಿದ್ದಾನೆ. ಪತ್ನಿಗಿನ್ನೂ ಚಿಕ್ಕ ವಯಸ್ಸು. ನನ್ನ ಸಾವಿಗೆ ನಾನೇ ಕಾರಣ. ತುಂಬಾ ಸಾಲ ಮಾಡಿಕೊಂಡಿದ್ದೆ. ದಯವಿಟ್ಟು ಯಾರೂ ನನ್ನ ಹೆಂಡತಿಗೆ ತೊಂದರೆ ಕೊಡಬೇಡಿ....! ಇತ್ಯಾದಿಯಾಗಿ ಕನ್ನಡದಲ್ಲಿ ತನ್ನ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ಬ್ರೂಸ್ಲಿಯ ಸಾವೇ ಆತನ ಇಡೀ ದುರಂತಕ್ಕೆ ಪುರಾವೆಯಂತಿತ್ತು.

ಬ್ರೂಸ್ಲಿ ವಿಪರೀತ ಸಾಲ ಮಾಡಿಕೊಂಡಿದ್ದ. ಆತನ ಆಪ್ತರೇ ಹೇಳುವಂತೆ ಅದು ಎರಡೂವರೆ ಕೋಟಿಯಷ್ಟು!

ಆ ಮಟ್ಟದ ಸಾಲ ಮಾಡಿ ಆತ ಬಂಗಲೆ ಕಟ್ಟಿಸಲಿಲ್ಲ, ರಿಯಲ್ ಎಸ್ಟೇಟ್ ದಂಧೆಗೂ ಹಾಕಲಿಲ್ಲ, ಇನ್ನಾವುದಾದರೂ ವ್ಯಾಪಾರಕ್ಕೋ, ಡೀಲಿಗೋ ಅಥವಾ ಸುಪಾರಿಗೋ ಅಂದರೆ ಅದೂ ಇಲ್ಲ. ಇದ್ದದ್ದು ಇಸ್ಪೀಟ್ ಹುಚ್ಚು. ಸದ್ಯ ಬೆಂಗಳೂರಿನಲ್ಲಿ ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲೂ ಯಾವ ಮಟ್ಟದ ಜುಗಾರಿ ಅಡ್ಡೆಗಳು ಇಟ್ಕಾಡುತ್ತಿವೆಯೆಂದರೆ ರಾಜಾಜಿನಗರ ಪೊಲೀಸ್ ಠಾಣೆಯ ವ್ಯಾಪ್ತಿಯೊಂದರಲ್ಲೇ 42 ಇಸ್ಪೀಟ್ ಅಡ್ಡೆಗಳಿವೆ. ಇವಲ್ಲದೆ ಐಷಾರಾಮಿ ಹೋಟೆಲುಗಳಲ್ಲಿ, ಪ್ರತಿಷ್ಠಿತ ಬಡಾವಣೆಗಳ ಬಂಗಲೆಗಳಲ್ಲಿ ಆಯ್ದ ರೊಕ್ಕಸ್ಥರಿಗೆಂದೇ ಪ್ರತ್ಯೇಕ ಇಸ್ಪೀಟು ಪಾರ್ಟಿಗಳನ್ನು ಏರ್ಪಡಿಸುವ ಹಳೇ ಪಂಟರುಗಳು ಎಲ್ಲೆಂದರಲ್ಲಿ ತಲೆ ಎತ್ತಿದ್ದಾರೆ.

ಇಂಥ ಬಹುತೇಕ ಜುಗಾರಿ ಅಡ್ಡೆಗಳಿಗೆ ಫೈನಾನ್ಸ್ ಮಾಡಲೆಂದೇ ಹಳೇ ರೌಡಿಗಳು, ಮೀಟರ್ ಬಡ್ಡಿ ಖದೀಮರು ಹುಟ್ಟಿಕೊಂಡಿದ್ದಾರೆ. ಈ ಥರದ ವಿಷವರ್ತುಲಕ್ಕೆ ಸಿಕ್ಕಿಬಿದ್ದವನು ಬ್ರೂಸ್ಲಿ. ಆತನ ವಿರುದ್ಧ ಹನುಮಂತನಗರ ಪೊಲೀಸ್ ಠಾಣೆಯೊಂದರಲ್ಲೇ ಹನ್ನೆರಡು ಕ್ರಿಮಿನಲ್ ಕೇಸುಗಳಿದ್ದವು. ಒಂದಾನೊಂದು ಕಾಲಕ್ಕೆ ಜೇಕೆ ಗ್ಯಾಂಗಿನ ಹಾರ್ಡ್‌ಕೋರ್ ಪಂಟರುಗಳಂತಿದ್ದದ್ದು ಜೇಡರಹಳ್ಳಿ ಕೃಷ್ಣಪ್ಪ, ಶ್ರೀರಾಂಪುರದ ಕರಿಯ ಭುಜ, ಪೊಲೀಸಪ್ಪ, ಬಿನ್ನಿಮಿಲ್ ರಾಮ ಮತ್ತು ಮಹಾಲಕ್ಷ್ಮಿ ಲೇಔಟಿನ ಚಂದ್ರ. ಇದು ಸಿದ್ಧನ ಕೊಲೆ ಹೊತ್ತಿಗಿದ್ದ ಟೀಮು.

ಆಗಿನ್ನೂ ಜೇಕೆ ಮದುವೆಯಾಗಿರಲಿಲ್ಲ, 1995 ರ ಹೊತ್ತಿಗೆ ಜೇಕೆ ಗ್ಯಾಂಗಿನ ಸ್ವರೂಪವೇ ಬದಲಾಯಿತು. ಜೇಕೆಗೆ ರೈಟ್‌ಹ್ಯಾಂಡ್ ಆಗಿ ರಂಗನಾಥ್ ನಾಯ್ಡು ಉರ್ಫ್ ಅಂಕಲ್ ತಲೆ ಎತ್ತುವ ಹೊತ್ತಿಗೆ ಹಳೇ ತಲೆಗಳೆಲ್ಲ ಕಳಚಿಕೊಂಡರು. ಲೇಔಟ್ ಮಂಜ, ಬ್ರೂಸ್ಲಿ, ತಿಮ್ಮೇನಹಳ್ಳಿ ಗೋವಿಂದ, ಕಾಟ್‌ರವಿ, ತಿಮ್ಮೇನಹಳ್ಳಿ ಸೂರಿ ಮತ್ತು ಚಂದ್ರ ಸೇರಿಕೊಂಡು ಜೇಕೆಯ ಹೊಸ ಆಪ್ತವಲಯ ಸೃಷ್ಟಿಕೊಂಡಿತ್ತು. ಜೇಕೆ ತನ್ನ ರೈಟ್‌ಹ್ಯಾಂಡ್ ಆಗಿ ಅಂಕಲ್ ನಾಯ್ಡುವನ್ನು ನೇಮಿಸಿಕೊಂಡಿದ್ದು ಜೊತೆಗಿದ್ದ ಉಳಿಕೆ ಆಪ್ತರ ವೈಷಮ್ಯಕ್ಕೆ ಕಾರಣವಾಯ್ತು.

ಅಂಕಲ್ ನಾಯ್ಡುಗೆ ವಿಪರೀತ ಮಣೆ ಹಾಕುತ್ತಿದ್ದ ಜೇಕೆ ವಿರುದ್ಧ ಮೊದಲು ತಿರುಗಿಬಿದ್ದವನು ಲೇಔಟ್ ಮಂಜ. ಆತನ ಜೊತೆ ಚಂದ್ರ, ಪೊಲೀಸಪ್ಪ ಉರ್ಫ್ ರಂಗನಾಥ್, ಭುಜ ಮತ್ತು ಕಾಟ್ ರವಿ ಕೈಜೋಡಿಸಿದರು. ಲೇಔಟ್ ಮಂಜನ ಉದ್ಧಟತನ ಯಾವ ಮಟ್ಟಕ್ಕಿತ್ತೆಂದರೆ; ಎಲ್ಲೆಂದರಲ್ಲಿ ಜೇಕೆಯನ್ನು ಎತ್ತೇ ಬಿಡ್ತೀನಿ ಎಂದು ಹೇಳಿಕೊಂಡು ಓಡಾಡಿದ. ಜೇಕೆಯ ಅಧಿಪತ್ಯವಿದ್ದ ಕುರುಬರಹಳ್ಳಿ, ಬಸವೇಶ್ವರ ನಗರ, ರಾಜಾಜಿನಗರ ಇತ್ಯಾದಿ ಏರಿಯಾಗಳಲ್ಲಿ ಮಂಜನ ಆರ್ಭಟವೇ ಹೆಚ್ಚಾಯಿತು.

ಇದರಿಂದ ಕಂಗಾಲಾದ ಜೇಕೆ ಮಂಜನಿಗೊಂದು ಬಿಸಿ ಮುಟ್ಟಿಸುವ ಹೊಣೆ ವಹಿಸಿದ್ದು ಬ್ರೂಸ್ಲಿಗೆ. ತನ್ನ ಜೊತೆ ಪಕ್ಕಾ ಪಂಟರ್‌ಗಳ ಹಿಂಡನ್ನೇ ಸೇರಿಸಿಕೊಂಡು ಬ್ರೂಸ್ಲಿ ಬಸವೇಶ್ವರನಗರದಲ್ಲಿ ಲೇಔಟ್ ಮಂಜನನ್ನು ಎತ್ತಾಕಿಕೊಂಡಿದ್ದೇ ನೆಲಮಂಗಲದ ಹೊರವಲಯಕ್ಕೊಯ್ದು ಮಂಜನನ್ನು ಎಲ್ಲೆಂದರಲ್ಲಿ ಕುಯ್ದು ಅರೆಜೀವ ಮಾಡಿ ಆಸ್ಪತ್ರೆಯೊಂದರ ಎದುರು ಬಿಸಾಡಿ ಬಂದ. ಬ್ರೂಸ್ಲಿಯ ಜೊತೆ ಜೇಕೆ, ನಾಯ್ಡು ವಿರುದ್ಧವೂ ನೆಲಮಂಗಲ ಠಾಣೆಯಲ್ಲಿ ಕೇಸು ದಾಖಲಾಯಿತು. ಅಂಥಾ ಮಂಜನನ್ನೇ ಎತ್ತಾಕಿಕೊಂಡು ಹೋಗಿ ಸ್ಕಾಚ್ ಮಾಡಿ ಹಾಕಿದ ಬ್ರೂಸ್ಲಿಯ ಬಗ್ಗೆ ಬೆಂಗಳೂರು ಅಂಡರ್‌ವರ್ಲ್ಡ್ ಬೆರಗಾಗಿದ್ದೇ ಆಗ.

ಮೈತುಂಬಾ ಕುಯ್ಸಿಕೊಂಡು ಅರೆಜೀವವಾಗಿದ್ದ ಲೇಔಟ್ ಮಂಜ ಆರೇ ತಿಂಗಳಲ್ಲಿ ರೆಡಿಯಾಗಿ ನಿಂತ. ಮತ್ತೆ ಜೇಕೆ ವಿರುದ್ಧ ಹಾವಳಿಯಿಡತೊಡಗಿದ. ಹಿಂದಿಗಿಂತಲೂ ಇನ್ನಷ್ಟು ಶಕ್ತಿವಂತನಾದ ಮಂಜ ಜೇಕೆಯ ಅಡ್ಡೆಗಳ ಮೇಲೆ ಮತ್ತೆಮತ್ತೆ ದಾಳಿ ಆರಂಭಿಸಿದ್ದ. ಇನ್ನು ಯಾಮಾರಿದರೆ ಪ್ರಯೋಜನವಿಲ್ಲ ಎಂದ ಜೇಕೆ ಈ ಬಾರಿ ಮಂಜನನ್ನೇ ನಿಕಾಲಿ ಮಾಡಲು ನಿರ್ಧರಿಸಿದ. ಈ ಕೆಲಸವನ್ನು ಬ್ರೂಸ್ಲಿಗೇ ವಹಿಸಿಕೊಟ್ಟ.

ಬ್ರೂಸ್ಲಿ ಕಸುಬಿಗೆ ಕೈಇಟ್ಟನೆಂದರೆ ಪಕ್ಕಾ ಕ್ರಿಮಿನಲ್. ಈ ಬಾರಿ ಮಂಜನ ಡೀಲನ್ನು ತಿಮ್ಮೇನಹಳ್ಳಿ ಗೋವಿಂದನಿಗೆ ವಹಿಸಿಕೊಟ್ಟು ತಾನು ಅದರ ಉಸ್ತುವಾರಿಯನ್ನಷ್ಟೇ ವಹಿಸಿಕೊಂಡ. 1997ರ ಅಕ್ಟೋಬರ್‌ನಲ್ಲಿ ಬಸವೇಶ್ವರನಗರದಿಂದ ವೆಸ್ಟ್ ಆಫ್ ಕಾರ್ಡ್ ರಸ್ತೆಯತ್ತ ನಟಿ ಮದ್ದೂರು ಮಂಜುಳಾ ಜೊತೆ ಕಾರಿನಲ್ಲಿ ಬರುತ್ತಿದ್ದ ಮಂಜನನ್ನು ಗಂಗಮ್ಮ ತಿಮ್ಮಯ್ಯ ಚೌಲ್ಟ್ರಿ ಪಕ್ಕದಲ್ಲೇ ನಡುರಸ್ತೆಯಲ್ಲಿ ಕೊಚ್ಚಿ ಹಾಕಿತ್ತು ಗೋವಿಂದನ ಪಡೆ. ಗೋವಿಂದ, ತಿಮ್ಮನಹಳ್ಳಿಯ ಸೂರಿ ಜೊತೆ ಬ್ರೂಸ್ಲಿ ಕೂಡ ಜೈಲು ಪಾಲಾದ.

ಇಷ್ಟಾಗಿದ್ದೇ ಜೇಕೆ ಮತ್ತು ನಾಯ್ಡು ಜೊತೆ ಬ್ರೂಸ್ಲಿಯ


ಹೆಣವಾಗಿದ್ದು ಹೀಗೆ

ಹೆಸರೂ ಕುಖ್ಯಾತಿಗೇರಿತ್ತು. ಹನುಮಂತನಗರ, ಶ್ರೀನಗರ ಸುತ್ತಮುತ್ತ ಅನೇಕ ಲ್ಯಾಂಡ್ ಡೀಲುಗಳಿಗೂ ಕೈಯಿಟ್ಟ ಬ್ರೂಸ್ಲಿ ಜೇಕೆಯ ಹೆಸರಲ್ಲೇ ಸಾಕಷ್ಟು ಬೆಳೆದುನಿಂತಿದ್ದ. ಒಂದೇ ವರ್ಷಕ್ಕೆ ಜೇಕೆ, ನಾಯ್ಡು ಜೊತೆ ಬ್ರೂಸ್ಲಿಯೂ ಹೊರಬಿದ್ದ. ಆದರೆ 2003 ರ ಹೊತ್ತಿಗೆ ಜೇಕೆಗೆ ಹೊಸ ತಲೆನೋವು ಶುರುವಾಗಿತ್ತು. ಆತ ತಿಮ್ಮೇನಹಳ್ಳಿ ತಮ್ಮಯ್ಯ ತನ್ನ ಕಡುವೈರಿ ಗೋವಿಂದನನ್ನು ಬೆಳೆಸುತ್ತಿರುವುದು ಮಾತ್ರವಲ್ಲ, ತನಗೆ ದೋಸ್ತಿಯಾಗಿದ್ದ ಲೇಔಟ್ ಮಂಜನನ್ನು ಮುಗಿಸಿದ್ದಕ್ಕೂ ತಮ್ಮಯ್ಯನಿಗೆ ಜೇಕೆ ವಿರುದ್ಧ ದುಷ್ಮನಿಯಿತ್ತು. ಇದೇ ಜಿದ್ದಿಗೆ ಬಿದ್ದು ಗೋವಿಂದನ ಬಂಟ ಅರುಣನನ್ನು ತಮ್ಮಯ್ಯ ಮುಗಿಸಿಬಿಟ್ಟ.

ವಿಜಯನಗರದಿಂದ ಹಿಡಿದು ಲಗ್ಗೆರೆ, ಪೀಣ್ಯದವರೆಗಿನ ತನ್ನ ಪಾಳೆಯದಲ್ಲಿ ತಿಮ್ಮೇನಹಳ್ಳಿ ತಮ್ಮಯ್ಯ ತಲೆ ಎತ್ತಿ ನಿಂತದ್ದು ಜೇಕೆಗಿಂತಲೂ ಗೋವಿಂದನಿಗೆ ದೊಡ್ಡ ತಲೆನೋವಾಗಿತ್ತು. 2004 ರ ಏಪ್ರಿಲ್‌ನಲ್ಲಿ ಗೋವಿಂದನ ಗ್ಯಾಂಗ್ ತಮ್ಮಯ್ಯನನ್ನು ಅತ್ತಿಗುಪ್ಪೆ ಟೆಂಟ್ ಎದುರು ಕೊಚ್ಚಿ ಹಾಕಿತು. ಇದರಲ್ಲಿ ಜೇಕೆಯ ನೇರ ಪಾತ್ರ ಇರಲಿಲ್ಲವಾದರೂ ಗೋವಿಂದನಿಗೆ ಬ್ರೂಸ್ಲಿಯೇ ಸಾತ್ ಕೊಟ್ಟಿದ್ದ!

ವಿಪರ್ಯಾಸವೆಂದರೆ ತಮ್ಮಯ್ಯನ ಕೊಲೆ ಕೇಸಿಗೆ ಜೇಕೆ ಮತ್ತು ನಾಯ್ಡು ಗೋವಿಂದನ ಜೊತೆ ಜೈಲು ಪಾಲಾದರಾದರೂ ಬ್ರೂಸ್ಲಿ ಮಾತ್ರ ಸದ್ದಿಲ್ಲದೇ ಬಚಾವಾದ. ಬಹುಶಃ ತಮ್ಮಯ್ಯನ ಹತ್ಯೆಯೇ ಜೇಕೆಯ ಬದುಕಿನ ಕೊನೆಯ ಕ್ರೈಮಾಗಿರಬೇಕು. 2005 ರ ಹೊತ್ತಿಗೆ ಜೈಲಿಂದ ಹೊರಬಿದ್ದ ಜೇಕೆ ಮತ್ತು ನಾಯ್ಡು ಇನ್ನು ಫೀಲ್ಡು ಸಾಕು ಎಂದು ನಿರ್ಧರಿಸಿ ರಾಜಕೀಯಕ್ಕೆ ಕೈಇಟ್ಟರು. ಮಾಗಡಿಯಿಂದ ಗೆದ್ದು ಎಮ್ಮೆಲ್ಲೇಯಾಗುವುದು ಜೇಕೆಯ ಉದ್ದೇಶವಾಗಿತ್ತು. ಮಾಗಡಿ ಶಾಸಕ ಬಾಲಕೃಷ್ಣರ ವಿರುದ್ಧ ಕೆಲವೇ ಮತಗಳ ಅಂತರದಿಂದ ಜೇಕೆಯ ಪತ್ನಿ ಸೋತಾಗಲೂ ಬ್ರೂಸ್ಲಿ ಜೊತೆಗೇ ಇದ್ದ.

ಮುಂದೆ ಒಂದಲ್ಲ ಎರಡು ಚುನಾವಣೆ ಬಂತಾದರೂ ಜೇಕೆಗೆ ಕಾಂಗ್ರೆಸ್ ಟಿಕೆಟ್ಟು ಸಿಗಲಿಲ್ಲ. ಹಾಗಂತ ಜೇಕೆ ಮಾಗಡಿಯ ರಾಜಕೀಯ ಬಿಡಲಿಲ್ಲ. ಈ ಮಧ್ಯೆ ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಸಾಕಷ್ಟು ಬದಲಾವಣೆಗಳಾದವು. ಜೇಕೆಯ ಹಿಂದಿದ್ದ ಪ್ರಾಬಲ್ಯ ನಶಿಸಿಹೋಗಿತ್ತು. ಹೊಸ ಹೊಸ ತಂಡಗಳು ಹುಟ್ಟಿಕೊಂಡವು. ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಮತ್ತು ಕಡಬಗೆರೆ ರಾಮನ ವಿರುದ್ಧ ತೊಡೆತಟ್ಟಿದ ಮುಲಾಮನೂ ನಿಕಾಲಿಯಾದ. ಮಾರೇನಹಳ್ಳಿ ಜಗ್ಗನ ಗ್ಯಾಂಗ್ ತಿಮ್ಮೇನಹಳ್ಳಿ ಗೋವಿಂದನನ್ನು ಮುಗಿಸಿತ್ತು. ಅದಕ್ಕೂ ಮುನ್ನ ಪೆದ್ದಗುಂಡನ ಗ್ಯಾಂಗ್ ತಿಮ್ಮೇನಹಳ್ಳಿ ಸೂರಿಯನ್ನು ನಿಕಾಲಿ ಮಾಡಿತ್ತು. ಸುಂಕದಕಟ್ಟೆ ಸುತ್ತಮುತ್ತ ರಾಮ-ಲಕ್ಷ್ಮಣ, ಅಲ್ಲಿಂದಾಚೆ ಪಾಯ್ಸನ್ ರಾಮ, ನೆಲಮಂಗಲದಲ್ಲಿ ಚೆತ್ತನಗೆರೆ ಸೀನ ಮತ್ತು ಆತನ ವಿರುದ್ಧ ಶಂಕ್ರ, ಮಹಾಲಕ್ಷ್ಮಿ ಲೇಔಟ್ ವ್ಯಾಪ್ತಿಯಲ್ಲಿ ಕಾಟ್‌ರವಿ, ಅಲ್ಲಿಂದಾಚೆಗೆ ಕೋತಿರಾಮ; ಹೀಗೆ ಹಿಂದೆ ಜೇಕೆಯ ಅಧಿಪತ್ಯದಲ್ಲಿದ್ದ ಬಹುತೇಕ ಏರಿಯಾಗಳಲ್ಲಿ ಹೊಸ ಪೀಳಿಗೆಯ ರೌಡಿಗಳು ಹುಟ್ಟಿಕೊಂಡರು.

2010 ರ ವೇಳೆಗೆ ಜೇಕೆಯ ಅಷ್ಟೂ ಅಂಡರ್‌ವರ್ಲ್ಡ್ ಚಟುವಟಿಕೆಗಳೆಲ್ಲ ಸ್ಥಗಿತಗೊಂಡು ಆತ ಈಗ ಆಡಳಿತಾರೂಢ ಬಿಜೆಪಿಯ ಸಭ್ಯ ಕಾರ್ಯಕರ್ತನಾಗಿಬಿಟ್ಟ. ಇದರಿಂದಾಗಿ ನಿಜಕ್ಕೂ ಅತಂತ್ರನಾಗಿದ್ದು ಬ್ರೂಸ್ಲಿಯೇ. ಮತ್ತೆ ರೌಡಿಜಮ್ಮಿಗೆ ಕೈಯಿಡುವಂತಿಲ್ಲ. ಇಟ್ಟರೆ ಜೇಕೆ ಬಿಡುವುದಿಲ್ಲ. ಹಿಂದಿನಂತೆ ರಿಯಲ್ ಎಸ್ಟೇಟ್ ಅಬ್ಬರವೂ ಇಲ್ಲ. ಬೇರೆ ಕಸುಬು ಗೊತ್ತಿಲ್ಲ. ಇಂಥಾ ಅತಂತ್ರ ಸ್ಥಿತಿಯಲ್ಲಿ ಹೊಟ್ಟೆಪಾಡಿಗೆಂದು ಬ್ರೂಸ್ಲಿ ಕೈಯಿಟ್ಟಿದ್ದು ಇಸ್ಪೀಟ್ ಕ್ಲಬ್ಬಿಗೆ.

ಸಿನಿಮಾ ಹೆಸರೇ ಜೇಡರಹಳ್ಳಿ!

ಸದ್ಯ ಮಂಡ್ಯ ಮತ್ತು ರಾಮನಗರ ಜಿಲ್ಲೆಗಳ ಬಿಜೆಪಿ ಸಂಘಟನೆಯ ಉಸ್ತುವಾರಿ ಹೊತ್ತ ಜೇಕೆ ಅಲಿಯಾಸ್ ಜೇಡರಹಳ್ಳಿ ಕೃಷ್ಣಪ್ಪ ಈಗ ಸಿನಿಮಾ ಹೀರೋ ಬೇರೆ. ಅವರ ಹೆಸರಲ್ಲೇ ಚಿತ್ರವೊಂದು ರೆಡಿಯಾಗುತ್ತಿದೆ. ಡೆಡ್ಲಿ ಸೋಮ, ರೈ ಪೂಜಾರಿ, ಮಚ್ಚಾ, ಕರಿಯ ಇತ್ಯಾದಿ ಭೂಗತರ ಹೆಸರಲ್ಲಿ ತರಹೇವಾರಿ ಸಿನಿಮಾಗಳು ಈಗಾಗಲೇ ತೆರೆಕಂಡೋ, ಕಾಣದೆಯೋ ಡಬ್ಬಾ ಹೊಕ್ಕಿ ಕೂತಿವೆ. ಆದರೆ ಜೇಡರಹಳ್ಳಿ ಚಿತ್ರದ ವಿಶೇಷವೇಂದರೆ ಸ್ವತಃ ಜೇಡರಹಳ್ಳಿ ಕೃಷ್ಣಪ್ಪನವರೇ ಈ ಚಿತ್ರದ ಹೀರೋ ಮತ್ತು ನಿರ್ಮಾಪಕ!


ಜೇಡರಹಳ್ಳಿ ಚಿತ್ರದ ಶೂಟಿಂಗ್‌ನಲ್ಲಿ ಜೇಕೆ

ಈ ಹಿಂದೆ 'ಪಾಗಲ್' ಎಂಬ ಚಿತ್ರಕ್ಕೆ ಸ್ವತಃ ನಿರ್ದೇಶನಗೈದು ತಾನೇ ಅದರ ಹೀರೋ ಕೂಡ ಆಗಿದ್ದ ಪಿ.ಎನ್. ಸತ್ಯ ಈಗ ಜೇಡರಹಳ್ಳಿ ಜೀವನಾಧಾರಿತ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಜೇಡರಹಳ್ಳಿ ಬದುಕಿನ ಕತೆ ಅಂದಮೇಲೆ ಅದರಲ್ಲಿ ಬ್ರೂಸ್ಲಿಯ ಪಾತ್ರವೂ ಇರಲೇಬೇಕು. ನೈಸ್ ರಸ್ತೆಯಲ್ಲಿ ಇತ್ತೀಚೆಗೆ ನಡೆದ ಜೇಡರಹಳ್ಳಿ ಚಿತ್ರದ ಮುಹೂರ್ತಕ್ಕೆ ಬ್ರೂಸ್ಲಿ ಕೂಡ ಬಂದಿದ್ದ. ಎಂಟು ಬೆರಳಿಗೂ ಉಂಗುರ, ಎರಡೆರಡು ಚಿನ್ನದ ಬ್ರೇಸ್‌ಲೇಟ್ ತೊಟ್ಟೆ ಬಂದಿದ್ದನಂತೆ. ಅದು ಶೂಟಿಂಗಿಗೆಂದು ಬ್ರೂಸ್ಲಿ ಧರಿಸಿದ್ದ ಆಭರಣಗಳೇ ಅಥವಾ ತನ್ನ ಬಂಡವಾಳ ಬಯಲಾಗದಿರಲೆಂದು ಹಾಕಿಕೊಂಡಿದ್ದ ರೋಲ್ಡ್‌ಗೋಲ್ಡ್ ಒಡವೆಗಳೇ ಗೊತ್ತಿಲ್ಲ. ಜೇಡರಹಳ್ಳಿ ನಿಜ ಬದುಕಿನ ಸಿನಿಮಾ ತೆರೆಕಾಣುವ ಮೊದಲೇ ಅದರ ಪ್ರಮುಖ ಪಾತ್ರಧಾರಿಯೊಬ್ಬನ ವಿಕೆಟ್ಟು ಬಿದ್ದಿರುವುದು ಎಂಥಾ ವಿಪರ್ಯಾಸವಲ್ಲವೇ?

ಶ್ರೀನಗರ ಬಸ್‌ಸ್ಟ್ಯಾಂಡಿನಲ್ಲಿ ತಾನೇ ಬಂದು ಇಸ್ಪೀಟ್ ... ತೆರೆದ. ಶುರುವಿನಲ್ಲಿ ಅಷ್ಟಿಷ್ಟು ದುಡ್ಡೂ ಗಳಿಸಿದ್ದ. ...ನಾಯಿತೋ ಎರಡೇ ವರ್ಷಕ್ಕೆ ತನ್ನ ಇಸ್ಪೀಟ್ ...ಯನ್ನು ಇನ್ನಾರಿಗೋ ವಹಿಸಿಕೊಟ್ಟ. ಆದರೆ ಜುಗಾರಿ ...ಚಟ್ತಲ್ಲ; ಅದು ಆತನನ್ನು ಸಂಪೂರ್ಣವಾಗಿ ಆವರಿಸಿ ...ಡಿತ್ತು. ಗುರು ಜೇಕೆಯ ಜೊತೆಗಿದ್ದ ಹುಡುಗರೆಲ್ಲ ... ಪಾಡಿಗೆ ತಾವಿದ್ದು ರೌಡಿಜಮ್ಮಿಗೇ ವಿದಾಯ ...ದ್ದರೆ ಹಳೆಯ ದುಷ್ಮನಿ ಮಾತ್ರ ಬ್ರೂಸ್ಲಿಯನ್ನು ಬಿಡಲಿಲ್ಲ. ...ಗೆ ವರ್ಷದ ಹಿಂದೆ ಶ್ರೀನಗರದ ಪೆಟ್ರೋಲ್ ಬಂಕ್‌ನಲ್ಲಿ ... ಕಾರಿಗೆ ಪೆಟ್ರೋಲ್ ತುಂಬಿಸಿಕೊಂಡು ಇನ್ನೇನು ... ತಿರುಗಿಸಬೇಕೆನ್ನುವಷ್ಟರಲ್ಲೇ ಲಾಂಗ್ ಹಿಡಿದ ಐವರು ...ಡುಗರು ಬ್ರೂಸ್ಲಿಯ ಮೇಲೆ ದಾಳಿಯಿಟ್ಟರು.

...ಅವನು ಲೇಔಟ್ ಮಂಜನ ತಮ್ಮ ಲೇಔಟ್ ನವೀನ ... ಜೊತೆ ಲೇಔಟ್ ಗುಂಡಾ ಮತ್ತು ಅಪ್ಪಿ ಕೂಡ ...ರು. ಅವತ್ತು ಅದೃಷ್ಟವಶಾತ್ ಹೇಗೋ ಬಚಾವಾದ ...ಸ್ಲಿಗೆ ಲೇಔಟ್ ಮಂಜನ ಕೊಲೆಯ ಸೇಡು ತನ್ನನ್ನು ...ಬಾಲಿಸಿ ಬರುತ್ತಿದೆಯೆಂಬುದು ಗ್ಯಾರಂಟಿಯಾಗಿತ್ತು. ...ನ ಹತ್ಯೆಗೆ ಪ್ರತೀಕಾರವಾಗಿ ಒಂದೋ ಜೇಕೆ ಇಲ್ಲವೆಂದರೆ ...ಸ್ಲಿಯನ್ನು ಮುಗಿಸಿಬಿಡಲು ಲೇಔಟ್ ನವೀನ ...ರಿಸಿದ್ದ. ಆತನ ಬೆನ್ನಿಗೆ ಹಳೇ ಗೆಳೆಯ ಕಾಟ್ ರವಿ ...ದ್ದ.

...ಲೇಔಟ್ ಮಂಜನ ಹತ್ಯೆಯ ಪಾಪ ಬೆನ್ನುಹತ್ತಿದ್ದು ...ದೆಯಾದರೆ ಮತ್ತೊಂದೆಡೆ ಇದೀ ಜೇಕೆ ಗ್ಯಾಂಗ್ ...ತ್ಯಾಗ ಮಾಡಿದ್ದು ಬ್ರೂಸ್ಲಿಯನ್ನು ಕಂಗೆಡಿಸಿದೆ. ಇದಕ್ಕೆ ...ತೆ ಇಸ್ಪೀಟು ಚಟ ಬೇರೆ. ದಿನ ಬೆಳಿಗ್ಗೆಯಾದರೆ ...ದಲ್ಲ ಒಂದು ಇಸ್ಪೀಟ್ ಅಡ್ಡೆಯನ್ನು ಹೊಕ್ಕು ಕೂತು ...ತ್ತಿದ್ದ. ಕೂತು ಉಣ್ಣುವವನಿಗೆ ಎಷ್ಟಿದ್ದರೇನು? ಇಸ್ಪೀಟು ...ನನ್ನು ದಿನೇದಿನೇ ನುಂಗುತ್ತಿತ್ತು. ಕಂಡಕಂಡವರ ಬಳಿ ... ಎತ್ತಿದ. ಇನ್ನೆಲ್ಲೂ ಸಾಲ ಹುಟ್ಟಲ್ಲ ಎಂದು ಗೊತ್ತಾಗಿದ್ದೇ ...ರ್ವತಿಪುರದ ಕುಖ್ಯಾತ ಮೀಟರ್ ಬಡ್ಡಿ ಕುಳಗಳಾದ ...ರಿ ಮಂಜ, ಬಾಬು ಎಳೆ ಅಲಿಯಾಸ್ ತುಳಸಿ ...ಂತಾದವರಿಂದ ಲಕ್ಷಗಟ್ಟಲೇ ಸಾಲ ಪಡೆದ. ಕಲಾಸಿಪಾಳ್ಯದ ...ಟರ್ ಬಡ್ಡಿಗೆ ಕೈಯಿಟ್ಟ ಯಾರು ತಾನೇ ಉಳಿಯಲು ...ಸ್ಯ? ಅದಕ್ಕೆ ಪೂರಕವಾಗಿ ಕಾಂಗ್ರೆಸ್ ಪಕ್ಷ ಸೇರಿಕೊಂಡು ...ನಗರದ ಡೀಕೆ ಬಂಟ ರಮೇಶ್ ಎಂಬ ಪುಡಿನಾಯಕನ ...ತೆ ಬಿದ್ದ. ಗಣಿ ಲೂಟಿ ವಿರುದ್ಧ ಬಳ್ಳಾರಿ ಯಾತ್ರೆಯಲ್ಲೂ ...ಗವಹಿಸಿ ಕಾಂಗ್ರೆಸ್ ನಾಯಕ ರಮೇಶನಿಂದ ಮತ್ತೆ ... ಲಕ್ಷ ಸಾಲ ಎತ್ತಿದ. ಆತನ ಇಸ್ಪೀಟು ಚಟ ...ಥಾ ಅನಾಹುತಕ್ಕೇರಿತೆಂದರೆ ಮೊನ್ನೆ ಉಗಾದಿ ಹಬ್ಬಕ್ಕೆಂದು ...ಗುಡ್ಡದ ನಟೋರಿಯಸ್ ಇಸ್ಪೀಟು ಖದೀಮ ನಾಗೇಂದ್ರ ...ರ್ಗಡಿಸಿದ್ದ ಇಸ್ಪೀಟು ಅಡ್ಡೆಯಲ್ಲಿ ಒಂದೇ ದಿನಕ್ಕೆ 50 ... ರೂಪಾಯಿ ಸೋತು ಬಿಟ್ಟ!


...ಇದರ ಆಘಾತಕ್ಕೆ ಬಿದ್ದು ಆತ ಮಾಡಿಕೊಂಡ ...ತ್ತೊಂದು ಯಡವಟ್ಟೆಂದರೆ ಮಲ್ಲೇಶ್ವರಂ 18 ನೇ ಕ್ರಾಸಿನ ...ಖ್ಯಾತ ಮೀಟರ್ ಬಡ್ಡಿ ಕುಳ ಗೋಪಾಲನಿಂದ ಮತ್ತೆ ... ಲಕ್ಷ ಸಾಲ ಎತ್ತಿದ್ದು. ಜೊತೆಗೆ ಈ ಹಿಂದೆಯೇ ...ಟರ್ ಬಡ್ಡಿ ಬಿಡುವ ಐದಾರು ಮಂದಿ ಪೊಲೀಸ್ ...ಕಾರಿಗಳಿಂದ ಲಕ್ಷಗಟ್ಟಲೇ ಸಾಲ ಎತ್ತಾಗಿತ್ತು. ಒಂದೆಡೆ ...ಲೀಸ್ ಸಾಲ, ಇನ್ನೊಂದೆಡೆ ಪಾರ್ವತಿಪುರದ ಮೀಟರ್ ...ಡ್ಡಿ ಖದೀಮರ ಸಾಲ, ಮಲ್ಲೇಶ್ವರದ ಗೋಪಾಲ ಕೊಟ್ಟ ..., ಕಾಂಗ್ರೆಸ್ ಲೀಡರ್ ರಮೇಶ್‌ನಿಂದ ಪಡೆದ ಸಾಲ, ...ಹಿತರು, ಆಪ್ತರಿಂದ ಎತ್ತಿದ್ದ ಸಾಲ; ಹೀಗೆ ಸಿಕ್ಕಸಿಕ್ಕಲ್ಲಿ ...ಸ್ಪೀಟಿಗೆಂದು ಆತ ಮಾಡಿದ ಸಾಲವೇ ಎರಡು ...ಟಿಯನ್ನು ಮೀರಿತ್ತು.

...ಆದಾಯವಿಲ್ಲ. ಯಾವುದೇ ವ್ಯವಹಾರವಿಲ್ಲ. ...ತಕ್ಕೊಂದು ಮನೆ ಕೂಡ ಇಲ್ಲ. ಹಿಂದಿನಂತೆ ರೌಡಿಸಂ ...ಪಾರಿಗೆ ಮತ್ತೆ ಕೈಯಿಡುವಂತಿಲ್ಲ. ಸಾಲ ಕೊಟ್ಟವರಿಗೆ ...ಂಥ ಉತ್ತರ ಕೊಟ್ಟಾನು? ಬಹುಶಃ ಆತನ ಬದುಕಿನ ...ಲ್ಲಾ ಬಾಗಿಲುಗಳೂ ಬಂದ್ ಆಗಿರಬೇಕು. ಜೊತೆಗೆ ...ಔಟ್ ಮಂಜನ ಹತ್ಯೆಯ ಸೇಡು ಬೇರೆ ಬೆನ್ನಟ್ಟಿತ್ತಲ್ಲ. ...ಲ್ಲದೇ ಆತ್ಮಹತ್ಯೆಗೆ ಶರಣಾಗಿದ್ದಾನೆ.

... ಪಾಪದ ದಾರಿಯು ಕೊನೆಯಲ್ಲಿ ಸಾವಲ್ಲದೇ ...ತ್ತೇನಿರಲು ಸಾಧ್ಯ?

• ರಾ. ಸೋಮನಾಥ್

ಬಳ್ಳಾರಿ: ರಾಮುಲು ಭಂಟ ರಾಮಚಂದ್ರ ಬೀದಿ ಹೆಣವಾದ




ಹೆಂಗಸರ ಖಯಾಲಿ ವಿಪರೀತವಾದರೆ ಏನಾಗಬಹುದೆಂಬುದಕ್ಕೆ ಪಕ್ಕಾ ಉದಾಹರಣೆಯೆಂಬಂತೆ ರಾಮಚಂದ್ರ ಹೆಣವಾಗಿದ್ದಾನೆ. ಈತ ಮಾಜಿ ಪೊಲೀಸಪ್ಪ. ಸೇವೆಯಲ್ಲಿದ್ದಷ್ಟೂ ದಿನ ಮೈಮೇಲಿನ ಖಾಕಿಯನ್ನು ಕೈಗೆ ಸಿಕ್ಕ ಹೆಂಗಳೆಯರನ್ನು ಕೆಡವಿಕೊಂಡು ದಕ್ಕಿಸಿಕೊಳ್ಳಲು ಬಳಸಿಕೊಂಡಿದ್ದ ದುಷ್ಟ. ಇಂಥ ಹಾದರಕ್ಕೆ ಅಡ್ಡ ಬಂದಾತನನ್ನು ನಡುಬೀದಿಯಲ್ಲಿ ಕೊಂದು ಕೆಡವಿದ್ದು, ಈ ಪ್ರಕರಣದಲ್ಲಿ ಜೈಲು ಸೇರಿ ಮುದ್ದೆ ಮುರಿದದ್ದು, ಶಿಕ್ಷೆ ಅನುಭವಿಸಿ ಹೊರಬಂದ ಬಳಿಕವೂ ತೀರಾ ಸ್ನೇಹಿತರ ಹೆಂಡತಿಗೇ ಅಟಕಾಯಿಸಿಕೊಳ್ಳುವಷ್ಟು ಕಾಮುಕನಾದದ್ದು ರಾಮಚಂದ್ರನ ಸಾಧನೆಯ ಪ್ರಮುಖಾಂಶಗಳು. ಈ ಒಟ್ಟಾರೆ ಸಾಧನೆಗಾಗಿ ರಾಮಚಂದ್ರನಿಗೆ ಬೀದಿ ಹೆಣವಾಗುವ ಇನಾಮು ಸಿಕ್ಕಿದೆ.

ಭತ್ತಿ ಹಾವಂಭಾವಿ ಪ್ರದೇಶದ ಕರಿಮಾರೆಮ್ಮ ಗುಡಿಯ ಸಮೀಪ ಗೋಣಿ ಚೀಲದಲ್ಲಿ ತುಂಬಲ್ಪಟ್ಟಿದ್ದ ರಾಮಚಂದ್ರನ ಶವ ಗಾಬರಿ ಹುಟ್ಟಿಸುವಷ್ಟು ವಿಕಾರಗೊಂಡಿತ್ತು. ಅದರ ಸ್ಥಿತಿ ಕೊಂದವರ ಭಯಂಕರ ಆಕ್ರೋಶವನ್ನು ಸಾಕ್ಷೀಕರಿಸುವಂತಿತ್ತು. ಸ್ಥಳಕ್ಕಾಗಮಿಸಿದ ಪೊಲೀಸರು ಇದು ರಾಮಚಂದ್ರನ ಹೆಣ ಎಂಬ ವಿಚಾರ ಖಾತ್ರಿಪಡಿಸುತ್ತಲೇ ನೆರೆದಿದ್ದ ಜನರಲ್ಲಿದ್ದ ಆತಂಕ, ಕನಿಕರಗಳೆಲ್ಲ ಜರ್ರನೆ ಇಳಿದಂತಾಗಿತ್ತು. ಬಹುತೇಕರು ಇವನಿಗೆ ಈ ರೀತಿಯಲ್ಲದೆ ಬೇರ್ಯಾವ ರೀತಿಯಲ್ಲೂ ಸಾವು ಬರಲು ಸಾಧ್ಯವಿರಲಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದರು.

ರಾಮಚಂದ್ರ ಬದುಕಿದ ರೀತಿಯೇ ಅಂತಹುದಿತ್ತು. ಪೊಲೀಸ್ ಇಲಾಖೆಗೆ ಸಶಸ್ತ್ರ ಪೊಲೀಸ್ ಪೇದೆಯಾಗಿ ಪಾದಾರ್ಪಣೆ ಮಾಡಿದ ರಾಮಚಂದ್ರ ಇಲಾಖೆಯ ಛಾಯಾಗ್ರಾಹಕನಾಗಿಯೂ ಕೆಲಸ ಮಾಡುತ್ತಿದ್ದ. ಚೆಂದಗೆ ಬದುಕುವ ಎಲ್ಲ ಅವಕಾಶಗಳೂ ಆತನಿಗಿದ್ದವು. ಆದರೆ ರಾಮಚಂದ್ರನಿಗೆ ಹೆಂಗಸರ ಖಯಾಲಿ ವಿಪರೀತವಾಗಿ ಅಂಟಿಕೊಂಡಿತ್ತು. ಆದಾಗಲೇ ಸ್ಥಳೀಯ ಮಹಿಳೆಯೊಬ್ಬಳನ್ನು ಪಳಗಿಸಿಕೊಂಡಿದ್ದ. ಈ ವಿಚಾರದಲ್ಲೇ ಅದೇನೋ ಮನಸ್ತಾಪ ಬಂದು ಹಾವಂಭಾವಿಯ ವೆಂಕಟೇಶ್ವರ ದೇವಾಲಯದೆದುರು ಒಬ್ಬನನ್ನು ಕೊಚ್ಚಿ ಕೊಲೆ ಮಾಡಿದ್ದ. ಈ ಪ್ರಕರಣದಲ್ಲಿ ಜೈಲು ಸೇರಿದ ರಾಮಚಂದ್ರ ಪೊಲೀಸ್ ವೃತ್ತಿಗೇ ಸಂಚಕಾರ ತಂದುಕೊಂಡಿದ್ದ. ತದನಂತರ ಖುಲಾಸೆಗೊಂಡಿದ್ದ.

ಸಾಕ್ಷಿಗಳ ಕೊರತೆಯಿಂದ ನಿರ್ದೋಷಿಯಾಗಿ ವಾಪಸಾದ ಅನಾಹುತಕಾರಿ ರಾಮಚಂದ್ರ ಪೊಲೀಸ್ ಪೇದೆಯಾಗಿ ಮರುನೇಮಕಗೊಂಡ. ಈ ಸಂದರ್ಭದಲ್ಲೇ ಗಣಿಗಳ್ಳ ಕಂ ಮಾಜಿ ಆರೋಗ್ಯ ಸಚಿವ ಶ್ರೀರಾಮುಲನ ಸಂಗ ಬೆಳೆಸಿಕೊಂಡ. ಖಾಕಿ ತೊಟ್ಟುಕೊಂಡೇ ಮನಸಾರೆ ಸೇವೆ ಮಾಡಿ ಮತ್ತಷ್ಟು ಹತ್ತಿರಾಗಲು ಪ್ರಯತ್ನಿಸಿದ. ಈ ಸಂದರ್ಭದಲ್ಲೂ ಕೂಡ ರಾಮಚಂದ್ರನಿಗೆ ಹೆಂಗಸರ ಖಯಾಲಿಯ ಪಿತ್ಥ ಇಳಿದಿರಲಿಲ್ಲ. ಇದಲ್ಲದೆ ಕುಡಿಯುವ ಚಟವೂ ಅಂಟಿಕೊಂಡಿತ್ತು. ಇವೆರಡೂ ಚಟಗಳಿಗೆ ಸಂಬಳ ಸಾಲುವಂತಿರಲಿಲ್ಲ. ಹೀಗೇ ಒಂದಷ್ಟು ಕಾಲ ತಳ್ಳಿ ಇದ್ದಕ್ಕಿದ್ದಂತೆ ರಾಜೀನಾಮೆ ನೀಡಿ ಹೊರಬಂದಿದ್ದ.

ಆನಂತರ ಕೆಲಸವಿಲ್ಲದ ರಾಮಚಂದ್ರ ಪರ್ಮನೆಂಟಾಗಿ ಶ್ರೀರಾಮುಲನ ಪಟಾಲಂ ಸೇರಿದ. ಕೆಲವೇ ದಿನಗಳಲ್ಲಿ ಆಪ್ತ ವಲಯದಲ್ಲಿ ಗುರುತಿಸಿಕೊಂಡು ಚಿಕ್ಕಪುಟ್ಟ ಗಣಿ ವ್ಯವಹಾರ ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡ. ಈ ದಂಧೆಯಿಂದಲೇ ಕೋಟಿಯಷ್ಟು ಸಂಪಾದಿಸಿದ್ದ ಅನ್ನುವವರೂ ಇದ್ದಾರೆ. ಹೀಗೆ ಒಂದಷ್ಟು ಹಣಬೆ ಕಾಸು ಸಿಗುತ್ತಲೇ ಹೆಂಗಸರ ಖಯಾಲಿ, ಕುಡಿತದ ಚಟವೆಲ್ಲಾ ವಿಪರೀತವಾಗಿ ಹೋಗಿತ್ತು.



ರಾಮಚಂದ್ರ ಇತ್ತೀಚೆಗೆ ದೇವಿನಗರದಲ್ಲಿನ ಮಹಿಳೆಯೊಬ್ಬಳೊಂದಿಗೆ ಸಂಬಂಧ ವಿರಿಸಿಕೊಂಡಿದ್ದ. ಇದರ ಜೊತೆಜೊತೆಗೆ ಅಧಿಕೃತವಾಗಿ ಎರಡನೇ ಮದುವೆ ಮಾಡಿಕೊಂಡಿದ್ದ. ಬರಬರುತ್ತಾ ರಾಮಚಂದ್ರ ಅದೆಷ್ಟು ವಿಕೃತ ಕಾಮುಕನಾಗಿದ್ದನೆಂದರೆ, ತೀರಾ ಹತ್ತಿರದ ಸ್ನೇಹಿತರ ಹೆಂಡತಿಯರನ್ನೂ ತಡವಿಕೊಂಡು ರಾದ್ಧಾಂತ ಮಾಡಿಕೊಂಡಿದ್ದ. ಹಲವರು ಈ ಬಗ್ಗೆ ರಾಮಚಂದ್ರನೊಂದಿಗೆ ಜಗಳವಾಡಿ ಮನೆಗೆ ಕರೆಯುವುದನ್ನೇ ಬಿಟ್ಟಿದ್ದರು. ದೇವಿನಗರದ ಹೆಂಗಸೊಂದಿಗಿನ ಸಂಬಂಧ ಸಹ ಆಕೆಯ ಸಹೋದರನಿಗೆ ತಿಳಿದು ರಾದ್ಧಾಂತವಾಗಿತ್ತು. ಆಕೆಯ ಸಹೋದರ ಪಟ್ಟಾಭಿ ಎಂಬಾತ ಮನೆ ಕಡೆ ತಲೆ ಹಾಕದಂತೆ ಎಚ್ಚರಿಕೆಯನ್ನೂ ನೀಡಿದ್ದ.



ಇದರಿಂದ ಕುದ್ದು ಹೋದ ರಾಮಚಂದ್ರ ಪುಂಡ ಪಟಾಲಂ ಒಂದನ್ನು ಕಲೆ ಹಾಕಿದ್ದಾನೆ. ಕಳೆದ ಸೋಮವಾರ ಸಂಜೆಯ ಹೊತ್ತಿಗೆ ಎಲ್ಲರಿಗೂ ಕುಡಿಸಿದ ರಾಮಚಂದ್ರ ತಾನೂ ಕಂಠಮಟ್ಟ ಕುಡಿದಿದ್ದಾನೆ. ರಾತ್ರಿ ವೇಳೆ ಪಟಾಲಂನೊಂದಿಗೆ ತಾನು ಅನೈತಿಕ ಸಂಬಂಧ ಹೊಂದಿದ್ದ ಮಹಿಳೆಯರ ಸಹೋದರನಾದ ಸ್ನೇಹಿತರಾದ ಭತ್ರಿಯ ಪಟ್ಟಾಭಿ ಎಂಬಾತನ ಮನೆಗೆ ಹೋಗಿ ದಾಂಧಲೆಯೆಬ್ಬಿಸಿದ್ದಾನೆ. ಆದರೆ ರಾಮಚಂದ್ರ ತನ್ನ ವಿರುದ್ಧ ಸಂಚು ಹೂಡಿರುವ ವಿಚಾರ ಪಟ್ಟಾಭಿಗೆ ಮೊದಲೇ ತಿಳಿದಿತ್ತು. ಆತ ಯುವಕರೊಂದಷ್ಟು ಮಂದಿಯನ್ನು ಕಲೆ ಹಾಕಿ ಕಾಯುತ್ತಿದ್ದ. ತದನಂತರ ಕುಡಿದು ಚಿತ್ತಾಗಿದ್ದ ರಾಮಚಂದ್ರನಿಗೆ ಎಲ್ಲರ ಜೊತೆ ಸೇರಿ ಕಬ್ಬಿಣದ ರಾಡುಗಳಿಂದ ಹಲ್ಲೆ ನಡೆಸಿದ. ಆಸುಪಾಸಲ್ಲಿದ್ದವರೆಲ್ಲ ಓಡಿ ಹೋದದ್ದೇ ರಾಮಚಂದ್ರ ಏಕಾಂಗಿಯಾಗಿ ತಗುಲಿಕೊಂಡು ಅರೆಜೀವಾವಸ್ಥೆ ತಲುಪಿದ.

ಪಟ್ಟಾಭಿ ಮತ್ತು ತಂಡದ ಆಕ್ರೋಶ ಎಂಥಾದಿತ್ತೆಂದರೆ ರಾಮಚಂದ್ರ ಜೀವಂತವಿರುವಾಗಲೇ ಆತನನ್ನು ಗೋಣಿ ಚೀಲವೊಂದಕ್ಕೆ ತುಂಬಿಕೊಂಡು ಮನೆಯಿಂದ ಹೊರಬಿದ್ದರು. ಪಕ್ಕದಲ್ಲೇ ಹರಿಯುವ ಕಾಲುವೆಗೆ ಎಸೆಯುವುದು ಅವರ ಉದ್ದೇಶ. ಆದರೆ ರಾಮಚಂದ್ರ ಗೋಣಿಚೀಲದೊಳಗಿಂದಲೇ ವಿಪರೀತ ಕಿರುಚಾಡುತ್ತಿದ್ದ. ಇದರಿಂದಾಗಿ ರಾಮಚಂದ್ರನ ಕುತ್ತಿಗೆಗೆ ಮಚ್ಚಿನಿಂದ ಹೊಡೆದು ಕೊಲೆ ಮಾಡಿ ಶವವನ್ನು ಗೋಣಿಚೀಲದಲ್ಲಿ ಕಟ್ಟಿ ಕರಿಮಾರೆಮ್ಮ ಗುಡಿಯ ಸಮೀಪವಿರುವ ಬಯಲು ಪ್ರದೇಶದಲ್ಲಿ ಎಸೆದು ಪರಾರಿಯಾದರು.

ಭತ್ತಿಯಲ್ಲಿ ಸೋಮವಾರದಂದು ಈರಣ್ಣ ದೇವರ ಉತ್ಸವ ನಡೆಯುತ್ತಿತ್ತು. ಇಂಥಾ ಸಂದರ್ಭದಲ್ಲೇ ಹೊಡೆದಾಟ ಬಡಿದಾಟ ನಡೆಯುವುದರಿಂದ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಊರ ಸುತ್ತಲೂ ಪಹರೆ ಕಾಯುತ್ತಿದ್ದ ಪೊಲೀಸರಿಗೆ ಮಾರನೆ ದಿನ ಬೆಳಗ್ಗೆ ಕರಿಮಾರೆಮ್ಮ ಗುಡಿಯ ಸಮೀಪ ಗೋಣಿಚೀಲದಲ್ಲಿ ಶವವಿರುವ ವಿಚಾರ ತಿಳಿದಾಗ ತಕ್ಷಣ ಮೇಲಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ತದನಂತರ ಇದು ರಾಮಚಂದ್ರನ ಶವವೆಂಬುದು ಖಾತ್ರಿಯಾಗಿದೆ.

ಮಿಂಚಿನ ವೇಗದ ತನಿಖೆ ನಡೆಸಿದ ಅಧಿಕಾರಿಗಳು ಪ್ರಮುಖ ಆರೋಪಿ ಪಟ್ಟಾಭಿಯ ಸಹೋದರ ಮತ್ತವನ ಅತ್ತಿಗೆಯನ್ನು ಬಂಧಿಸಿದ್ದಾರೆ. ದಿನದೊಪ್ಪತ್ತಲ್ಲೇ ಪಟ್ಟಾಭಿ ಹಾಗೂ ಚಂದ್ರ ಎಂಬುವರೂ ತಗುಲಿಕೊಂಡಿದ್ದಾರೆ. ದಿನದ ಅಂತರದಲ್ಲಿಯೇ ಪರಿಸ್ಥಿತಿ ತಿಳಿಯಾದಂತಾಗಿದೆ.

ರಾಮಚಂದ್ರ ಅದೆಷ್ಟೋ ಮಹಿಳೆಯರಿಗೆ ಕಿರುಕುಳ ನೀಡುತ್ತಾ ಇಬ್ಬರು ಹೆಂಡಿರನ್ನೂ ವಿಪರೀತ ಗೋಳಾಡಿಸುತ್ತಿದ್ದವನು. ತೊಟ್ಟ ಖಾಕಿಗೂ ಮಹಾ ದ್ರೋಹವೆಸಗಿದವನು. ಇವನ ಸಾವಿನ ಮೂಲಕ ಎಷ್ಟೋ ಅಮಾಯಕ ಹೆಂಗಸರು ಪಾರಾಗಿದ್ದಾರೆಂದೇ ಜನ ಮಾತಾಡಿಕೊಳ್ಳುತ್ತಿದ್ದಾರೆ.

• ವರದಿಗಾರ



ಮೈಸೂರು: ಕೊಲೆಗಡುಕ ಮಂಟೇಲಿಂಗನಿಗೆ ಜೈಲು ಕಾಯಂ!

ತನ್ನದೇ ಸಂಘಟನೆಯ ಕಾರ್ಯಕರ್ತೆಯನ್ನು ಕೊಂದಿದ್ದ ಕುಖ್ಯಾತ ದಲಿತ ಪರ ಹೋರಾಟಗಾರ, ಅಪ್ಪಟ ಎತ್ತುವಳಿ ಗಿರಾಕಿ ಮಂಟೇಲಿಂಗಯ್ಯನಿಗೆ ಜೀವಾವಧಿ ಶಿಕ್ಷೆ ಘೋಷಣೆಯಾಗಿದೆ. ಸದರಿ ಪ್ರಕರಣದ ಸಂಬಂಧ 2005 ರಲ್ಲಿ ಕೆಲ ಸಹಚರರೊಂದಿಗೆ ಜೈಲುಪಾಲಾಗಿದ್ದ ಮಂಟೇಲಿಂಗನೆಂಬ ಶನಿಯಿಂದ ಜನಸಾಮಾನ್ಯರಿಗೂ ಮುಕ್ತಿ ದೊರೆತಂತಾಗಿದೆ. ಈತನಿಗೆ ಜೀವಾವಧಿ ಶಿಕ್ಷೆ ಘೋಷಣೆಯಾಗುತ್ತಲೇ ದಲಿತರೂ ಸೇರಿದಂತೆ ಬಹುತೇಕರು ಖುಷಿ ಪಟ್ಟಿದ್ದಾರೆ.

ಮಳವಳ್ಳಿ ಮೂಲದ ಮಂಟೇಲಿಂಗಯ್ಯ ಮಾತನ್ನೇ ಬಂಡವಾಳವಾಗಿಸಿಕೊಂಡು ಅಖಂಡ 20 ವರ್ಷಗಳ ಕಾಲ ದಲಿತರ ನಾಯಕನೆಂಬಂತೆ ಮೆರೆದವನು. ಈ ಇಪ್ಪತ್ತು ವರ್ಷಗಳ ಆರಂಭದ ಒಂದೆರಡು ವರ್ಷಗಳನ್ನು ಹೊರತುಪಡಿಸಿದರೆ, ಮತ್ತೆಲ್ಲವೂ ಅಕ್ಷರಶಃ ದರ್ಪ, ದೌರ್ಜನ್ಯ ಕೊಲೆಗಡುಕತನದ ಪರ್ವ. ಹಳೇ ಮೈಸೂರು ಪ್ರಾಂತ್ಯದಲ್ಲಿ ಮಂಟೇಲಿಂಗಯ್ಯ ದಲಿತ ಹೋರಾಟದ ಶಕ್ತಿಯಂತೆ ಕಂಗೊಳಿಸಿದ್ದವನು. ಆದರೆ ಒಂದಷ್ಟು ಮಂದಿ ತನ್ನ ಹಿಂದೆ ಜಮಾಯಿಸಿ ಇತರರೂ ತನ್ನೆಡೆಗೆ ಭಯವಿಟ್ಟುಕೊಂಡಿದ್ದಾರೆಂಬುದನ್ನು ತಿಳಿಯುತ್ತಲೇ ಮಂಟೇಲಿಂಗ ಮೆಲ್ಲಗೆ ಹಾದಿ ಬದಲಿಸಿದ. ಅದು ಅಕ್ಷರಶಃ ಹಣ ಪೀಕುವ ಹಾದಿ. ಇದಕ್ಕೆ ಎದುರಾಗಿ ನಿಂತವರಿಗೆ ನಿರಂತರ ಕಿರುಕುಳ ಅಥವಾ ಸಾವೇ ಗತಿಯೆಂಬಂತೆ ಭಯಾನಕವಾಗಿ ಬೆಳೆದುನಿಂತ ಮಂಟೇಲಿಂಗ ದಲಿತರನ್ನೇ ಕಾಡಿಸಿದ್ದು ದುರಂತಮಯ ಇತಿಹಾಸ.

ಇಂಥ ಪಾಪಿಷ್ಠ ಕೆಲಸಗಳೆಲ್ಲ ಒಟ್ಟಾಗಿ ಮಂಟೇಲಿಂಗನಿಂದ ಫಾಯಿದೆ ಕಟ್ಟಿಸಿಕೊಂಡಿವೆ. ಮೈಸೂರಿನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ. ಮಂಗಳವಾರ ತೀರ್ಪು ಪ್ರಕಟಿಸಿ ಮಂಟೇಲಿಂಗಯ್ಯ ಸೇರಿದಂತೆ ಹದಿನೆಂಟು ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಮೆರೆದಾಟದ ಸಂದರ್ಭದಲ್ಲಿ ಇಂತಹದೊಂದು ಸ್ಥಿತಿಯನ್ನು ಊಹಿಸಿಕೊಂಡಿರದಿದ್ದ ಮಂಟೇಲಿಂಗ 'ಇದು ನನ್ನ ಏಳಿಗೆ ಸಹಿಸಲಾರದವರ ಪಿತೂರಿ. ನನ್ನದೇನೂ ತಪ್ಪಿಲ್ಲ' ಅಂತೆಲ್ಲ ಕೊಸರಾಡಿದ್ದಾನೆ.

ಮಂಟೇಸ್ವಾಮಿಯ ಇತಿಹಾಸ ಕೆದಕಿದರೆ ಆತನಿಗೆ ಇಂದು ಸಿಕ್ಕಿರುವ ಕಠೋರ ಶಿಕ್ಷೆಯೂ ಕಮ್ಮಿಯೇ ಎನ್ನಬಹುದಾದ ಘಟನಾವಳಿಗಳು ದಂಡಿದಂಡಿಯಾಗಿ ಸಿಗುತ್ತವೆ. ಮಂಟೇಲಿಂಗಯ್ಯ ಮೂಲತಃ ಮಳವಳ್ಳಿಯವನು. ಈತನ ಅಪ್ಪ ಯಾವುದೋ ಕಾಲದಲ್ಲಿ ಮೈಸೂರಿಗೆ ವಲಸೆ ಬಂದು ಕೆ.ಆರ್. ಮಿಲ್‌ನಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದ. ಮೈಸೂರಲ್ಲೇ ಓದು ಆರಂಭಿಸಿದ ಮಂಟೇಲಿಂಗ ಕಾಲೇಜು ಸೇರುವ ಹೊತ್ತಿಗಾಗಲೇ ಹೊಡೆದಾಟ-ಬಡಿದಾಟಗಳಲ್ಲಿ ಪರಿಣತಿ ಪಡೆದಿದ್ದ. ನಂತರ ಕಾಲೇಜು ತೊರೆದು ಗಾಂಧಿನಗರದ ಶೇಖರ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಕೊಂಡ. ಈ ಸಂದರ್ಭದಲ್ಲಾಗಲೇ ಮೈಸೂರು ಸೀಮೆಯಲ್ಲಿ ದಲಿತ ಚಳವಳಿ ಮೆಲ್ಲಗೆ ಚಿಗಿತುಕೊಳ್ಳಲಾರಂಭಿಸಿತ್ತು, ಅದರೊಳಗೆ ಎಂಟ್ರಿ ಕೊಟ್ಟ ಮಂಟೇಲಿಂಗ ನೋಡನೋಡುತ್ತಲೇ ಪ್ರಮುಖ ನಾಯಕರ ಸಾಲು ಸೇರಿದ.

ಮೈಕು ಸಿಕ್ಕರೆ ದಿನಗಟ್ಟಲೆ ಮಾತಾಡಬಲ್ಲ ಚಾಕಚಕ್ಯತೆ, ಹೋರಾಟವನ್ನು ಬಡಿದಾಟದ ಲೆವೆಲ್ಲಿಗೂ ಕೊಂಡೊಯ್ದು ದಕ್ಕಿಸಿಕೊಳ್ಳಬಲ್ಲ ಉನ್ಮಾದ-ಇವೆಲ್ಲ ಮಂಟೇಲಿಂಗ ದಲಿತ ನಾಯಕನಾಗಿ ವಿಜೃಂಭಿಸಲು ಸಹಕರಿಸಿದವು. ಈತನ ಹಿಂದೆ ಯುವ ಹೋರಾಟಗಾರರ ದಂಡೇ ನೆರೆಯಲಾರಂಭಿಸಿತು. ಇದರಿಂದಾಗಿಯೇ ಅಂಬೇಡ್ಕರ್ ಜನಜಾಗೃತಿ ಮಹಾಸಭಾ (ಎಜೆಎಂಎಸ್)ನ ರಾಜ್ಯಾಧ್ಯಕ್ಷನಾಗಿ ಬಿಟ್ಟ. ಈ ಹಂತದಲ್ಲಿ ನೊಂದವರಿಗೆ ದನಿಯಾಗಬಲ್ಲ ನಿಯತ್ತು ಮಂಟೇಲಿಂಗನಿಗಿತ್ತು. ಇದರಿಂದಾಗಿಯೇ ಒಂದಷ್ಟು ಮಂದಿಗೆ ಸಹಾಯವಾದುದನ್ನು ತಳ್ಳಿಹಾಕಲಾಗುವುದಿಲ್ಲ, ದಲಿತರಿಗೆ ಹಲವಾರು ದೇವಸ್ಥಾನಗಳಿಗೆ ಪ್ರವೇಶಾವಕಾಶ ಕಲ್ಪಿಸುವಲ್ಲಿ ಈತ ಪ್ರಮುಖ ಪಾತ್ರ ವಹಿಸಿದ್ದ.

ಆದರೆ ಯಾವಾಗ ತಾನು ಕರೆಕೊಟ್ಟರೆ ಯುವಕರು ಒಗ್ಗೂಡುತ್ತಾರೆಂಬುದು ತಿಳಿಯಿತೋ ಆಗ ಮಂಟೇಲಿಂಗನೊಳಗೆ ವಂಚನೆ ಸರಿದಾಡತೊಡಗಿತು. ತದನಂತರ ಹಣದ ಆಧಾರದಲ್ಲಿ ಪರ ವಿರೋಧ ಅಂತ ಪ್ರತಿಭಟಿಸಲಾರಂಭಿಸಿದ. ಬರಬರುತ್ತಾ ಈತನ ಧನದಾಹ ದಲಿತರನ್ನೇ ಬೆಂಕಿಗೊಡ್ಡುವ ಹಂತಕ್ಕೆ ಬೆಳೆದು ನಿಂತಿತು.

ಆ ಬಳಿಕ ಶುರುವಾದದ್ದು ಪಕ್ಕಾ ಡೀಲಿಂಗ್ ವೃತ್ತಾಂತ. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಿಸುತ್ತಲೇ ಅದರಲ್ಲೂ ಡೀಲು ಕುದುರಿಸಲಾರಂಭಿಸಿದ. ವಂಚನೆಗೆ ಬಡರೈತರನ್ನು ಆಯ್ದುಕೊಂಡ ಮಂಟೇಲಿಂಗ ವಿವಿಧ ಸಾಲಮನ್ನಾ ಮಾಡಿಸುವುದಾಗಿ ನಂಬಿಸಿ ಮನಸಾರೆ ಕಾಸು ಕಿತ್ತ; ಅಕ್ಷರದ ಪರಿಚಯವಿಲ್ಲದ, ಯಾರ ಮೇಲಾದರೂ ಏರಿಹೋಗಬಲ್ಲ ಹುಂಬ ದಲಿತ ಹುಡುಗರನ್ನಿಟ್ಟುಕೊಂಡು ಹೋರಾಟದ ಹೆಸರಲ್ಲೇ ಕಾಸು ಬಾಚಲಾರಂಭಿಸಿದ. ಇದರ ವಿರುದ್ಧ ದನಿಯೆತ್ತಿದವರನ್ನು ಕಂಡಕಂಡಲ್ಲಿ ಹಿಡಿದು ಬಡಿದ.

ಬರಬರುತ್ತಾ ಈತನ ಹೋರಾಟದ ಉದ್ದೇಶ ಜನಸಾಮಾನ್ಯರ ಕಣ್ಣಿಗೆ ರಾಚುವಂತೆ ರೋಲ್‌ಕಾಲ್‌ಮಯವಾಯ್ತು. ಮೂಡಾ ವತಿಯಿಂದ ನಿರ್ಮಾಣಗೊಂಡ ಮನೆಗಳಿಗೆ ಹಿಂಬಾಲಕರನ್ನು ನುಗ್ಗಿಸಿ ಯಾರ್‍ಯಾರಿಗೋ ಠಾವು ಕಲ್ಪಿಸಿದ. ಅವರಿಂದ ತಿಂಗತಿಂಗಳು ಹಫ್ತಾ ವಸೂಲಿ ಮಾಡುತ್ತಾ ದುಂಡಗಾದ. ನೋಡನೋಡುತ್ತಲೇ ಅಂಬೇಡ್ಕರ್ ಜನಜಾಗೃತಿ ಮಹಾಸಭಾದ ಕಾರ್ಯಕರ್ತರೆಲ್ಲ ಮಂಟೇಲಿಂಗನ ಎತ್ತುವಳಿ ಅಸಿಸ್ಟೆಂಟುಗಳಾಗಿ ಬದಲಾದರು. ಇಂತಿಂಥ ವಸೂಲಿ ಕೈಂಕರ್ಯಕ್ಕೆ ಇಂತಿಂತವರು ಅಂತ ಮಂಟೇಲಿಂಗ ನಿಗದಿ ಮಾಡಿದ್ದ. ಈ ದಂಧೆಯಿಂದ ಲಕ್ಷಾಂತರ ರೂಪಾಯಿ ತಿಂಗತಿಂಗಳು ಸಂಗ್ರಹವಾಗತೊಡಗಿದ್ದೇ ಪಾಪದ ದುಡ್ಡಿನ ಪಾಲಿಗಾಗಿ ವೈಮನಸ್ಯ ಹುಟ್ಟಿಕೊಂಡಿತು. ಮಂಟೇಲಿಂಗನ ತಂಡದಿಂದ ಅನೇಕರು ದೂರಾದರು. ಅಂಥವರಲ್ಲಿ ಗೋವಿಂದರಾಜ ಮತ್ತು ಶ್ರೀನಿವಾಸ್ ಪ್ರಮುಖರು.



ಈ ನಡುವೆ 1999 ರಲ್ಲಿ ಮೂಡಾ ನಿರ್ಮಿಸಿದ್ದ ಮುನ್ನೂರೂ ಚಿಲ್ಲರೆ ಮನೆಗಳು ಮಂಟೇಲಿಂಗನ ಸುಪರ್ದಿಗೆ ಸಿಕ್ಕಿತ್ತು. ಆತ ಪ್ರತಿ ಮನೆಗಳಿಂದಲೂ ಪ್ರತೀ ತಿಂಗಳು ಐದು ಸಾವಿರ ವಸೂಲಿ ಮಾಡುತ್ತಿದ್ದ. 2005 ರ ಅಕ್ಟೋಬರ್ ತಿಂಗಳಲ್ಲಿ ಈ ಮೂಡಾ ಮನೆಗಳಿಂದ ಮಾಮೂಲಿ ಸಂಗ್ರಹಿಸುವ ಕೆಲಸ ಹದಿನೈದು ವರ್ಷಗಳಿಂದಲೂ ಸಂಘಟನೆಯ ಕಾರ್ಯಕರ್ತೆಯಾಗಿದ್ದ ಗಂಗಮ್ಮಳ ಹೆಗಲೇರಿತ್ತು, ಆಕೆ ನಿಯತ್ತಾಗಿ ಎತ್ತುವಳಿ ನಡೆಸಿ ಅದನ್ನ ಮಂಟೇಲಿಂಗನಿಗೆ ತಲುಪಿಸಿದ್ದಳು.

ಇದಾದ ಬಳಿಕದ ವಿದ್ಯಮಾನಗಳಲ್ಲಿ ಗಂಗಮ್ಮ ಮಂಟೇಲಿಂಗನ ವಿರುದ್ಧ ಹಲವಾರು ವಿಚಾರಗಳ ಸಂಬಂಧ ಕೆಂಡಕಾರತೊಡಗಿದಳು. ಇದಕ್ಕೆ ಆದಾಗಲೇ ಸಂಘಟನೆ ತೊರೆದಿದ್ದ ಗೋವಿಂದರಾಜ್ ಮತ್ತು ಶ್ರೀನಿವಾಸ್ ತುಪ್ಪ ಸುರಿಯತೊಡಗಿದರು. ಇದರಿಂದ ಮತ್ತಷ್ಟು ಉತ್ತೇಜಿತಳಾದ ಗಂಗಮ್ಮ 2005 ರ ಅಕ್ಟೋಬರ್ 16 ರಂದು ಮೈಸೂರಲ್ಲೊಂದು ಪತ್ರಿಕಾಗೋಷ್ಠಿ ಕರೆದು ಮಂಟೇಲಿಂಗನ ಎತ್ತುವಳಿ ಅಸಲಿಯತ್ತನ್ನು ಇಂಚಿಂಚಾಗಿ ತೆರೆದಿಟ್ಟಳು.


ಗಂಗಮ್ಮ ತನ್ನ ವಿರುದ್ಧ ಗುಡುಗಿದ್ದಕ್ಕಿಂತ ಹೆಚ್ಚಾಗಿ ತನಗೆ ಎದುರಾಡಿ ಸಂಘಟನೆ ತೊರೆದಿದ್ದ ಗೋವಿಂದರಾಜ್ ಹಾಗೂ ಶ್ರೀನಿವಾಸ್ ಆಕೆಯ ಹಿಂದಿದ್ದರಿಂದ ಮಂಟೇಲಿಂಗ ಕನಲಿದ. ತಕ್ಷಣ ಅವರಿಬ್ಬರಿಗೂ ಮುಹೂರ್ತ ನಿಗದಿಪಡಿಸಿದ. ಈ ಜವಾಬ್ದಾರಿಯನ್ನು ತನ್ನ ಭಂಟರಾದ ರೌಡಿ ಸಿದ್ಧ ಬಾರ್ ಬೆಂಡರ್ ಮಂಜು, ನಾಗರಾಜ್ ಅಲಿಯ[ಸ್] ಕೆಂಚ, ಕುಳ್ಳ ಸಿದ್ಧರಾಮ, ಶೋಭಾ, ಚಂದ್ರಮ್ಮ ಮು[ಂ] ದವರಿಗೆ ವಹಿಸಿದ. ಈ ದಂಡು ಧ್ವಾಸಲೋಕ ... ಬಂದಿಳಿಯಿತು. ಮಂಟೇಲಿಂಗಯ್ಯನೇ ಖುದ್ದು ಜಾಲಾಡಿ... ಗೋವಿಂದ ರಾಜ್ ಆದಾಗಲೇ ನಾಪತ್ತೆಯಾಗಿದ್ದ.

ಇದರಿಂದ ಕನಲಿದ ಮಂಟೇಲಿಂಗ ಠಾವು ಸೇರಿ... ಆತನ ಭಂಟರು ಸೀದಾ ಹೆಬ್ಬಾಳದ ಲಕ್ಷ್ಮಿಕಾಂತ ನಗ[ರಕ್ಕೆ] ನುಗ್ಗಿ ಗಂಗಮ್ಮಳನ್ನು ಸಾರ್ವಜನಿಕವಾಗಿ ಅಟ್ಟಾಡಿಸಿದ[ರು]. ತದನಂತರ ಆಕೆಯನ್ನು ಸುಮೋದಲ್ಲಿ ತುಂಬಿತಂ[ದು] ಮಂಟೇಲಿಂಗನೆದುರು ನಿಲ್ಲಿಸಿದ್ದಾರೆ. ಗಂಗಮ್ಮ ಎ... ದೀನಳಾಗಿ ಬೇಡಿಕೊಂಡರೂ ಕರಗದ ಮಂಟೇಲಿಂಗ ... ಗ್ಯಾಂಗ್‌ಗೆ ಆಕೆಯನ್ನು ಕೊಲ್ಲಲು ಆದೇಶಿಸಿದ್ದಾನೆ. ಆದಾಗ[ಲೇ] ಅರೆಜೀವ ಸ್ಥಿತಿಯಲ್ಲಿದ್ದ ಗಂಗಮ್ಮಳನ್ನು ವಡ್ಡರಪಾಳ್ಯದ ಕ... ನದಿ ಬಳಿಗೆ ಎಳೆತಂದು ಬೀರು ಬಾಟಲ್‌ಗಳಿಂದ ತ... ಬಾರಿಸಿದ್ದಾರೆ. ತದನಂತರ ಆಕೆಯ ದೇಹದ ಮೇಲೆ ಸುವ... ಹತ್ತಿಸಿ ಹೆಣವನ್ನು ಕಬನಿಗೆ ಬಿಸಾಡಿ ಧರ್ಮಸ್ಥಳ... ಕಾಲ್ಕಿತ್ತಿದ್ದಾರೆ.

ಮಂಟೇಲಿಂಗ ಎಂಥಾ ರಾಕ್ಷಸನೆಂದರೆ, ಸದರಿ ಕೊಲೆಯಲ್ಲಿ ಭಾಗಿಯಾಗಿದ್ದ ಶಂಕ್ರ ಎಂಬಾತ ಗೋವಿಂದರ ರಾಜ್‌ಗೆ ಮಾಹಿತಿ ನೀಡುತ್ತಾನೆಂಬ ಗುಮಾನಿಯಿಂದ ಆತನನ್ನು ಮುಗಿಸಲು ಹವಣಿಸಿದ್ದ. ಇದರ ವಾಸನೆ ಅರಿತ ಶಂಕ್ರ ಹೇಗೋ ಧರ್ಮಸ್ಥಳದಿಂದ ತಪ್ಪಿಸಿಕೊಂಡು ಮಳವಳ್ಳಿಗೆ ಬಂದು ಗೋವಿಂದರಾಜ್‌ಗೆ ವಿಷಯ ತಿಳಿಸಿದ. ತದನಂತರ ವಿಚಾರ ಪೊಲೀಸರಿಗೂ ತಿಳಿದು ವಿಜಯನಗರದ ಸರ್ಕಲ್ ಇನ್ಸ್‌ಪೆಕ್[ಟರ್] ಮೋಹನ್ ಗಂಗಮ್ಮನ ಮಗನಿಂದ ದೂರು ಪಡೆದು ಎಫ್‌ಐಆರ್ ದಾಖಲಿಸಿಕೊಂಡರು. ಆದಾದಬಳಿಕ ... ಆಡ್ಡಾದಲ್ಲಿ ಹಂದಿಯಂತೆ ಪವಡಿಸಿದ್ದ ಮಂಟೇಲಿಂಗನನ್ನು ಏಕಾಏಕಿ ಹೊತ್ತು ತಂದು ಜೈಲಿಗೆ ತಳ್ಳಿದರು. ಆದಾದನಂತರ ಮಂಟೇಲಿಂಗನ ಮೇಲೆ ಅಖಂಡ ಹದಿನೇಳು ಕೇಸುಗಳು ಜಡಿಯಲ್ಪಟ್ಟಿದ್ದವು. ಶಿಕ್ಷೆ ಕಾಯಂ ಆಯ್ತು, ಐಪಿಎಸ್ ಅಧಿಕಾರಿಗಳದ್ದೇ ಒಂದು ಸಂಘ ಹುಟ್ಟು ಹಾಕಿ ತಾನೇ ಅಧ್ಯಕ್ಷನಾಗಿದ್ದನಲ್ಲಾ ಮಂಟೇಲಿಂಗ? ಆ ಪ್ರಭಾವದಿಂದ ಹೊರಬರಲು ನಾನಾ ಕಸರತ್ತು ಮಾಡಿದ. ತನ್ನ ಮಾನಸ ಗುರು ಭರಣಿಯನ್ನು ಅಂಗಲಾಚಿದ. ಆದರೆ ನ್ಯಾಯವೆಂಬುದ[ು] ನಿಷ್ಠುರವಾಗಿ ಚಾಟಿ ಬೀಸಿದೆ. ಮಾಡ ಬಾರದ್ದು ಮಾಡಿದ ಮಂಟೇಲಿಂಗನಿಗೆ ಸಾಯುವವರೆಗೂ ಜೈಲೆ[ೇ] ಜಗತ್ತು!

ಇದು ಇಂದಿನ ದಲಿತ ನಾಯಕರುಗಳಿಗ[ೆ] ಎಚ್ಚರಿಕೆಯಾಗಬೇಕಿದೆ. ಒಂದು ಕಡೆ ದಲಿತರ ಬದು[ಕು] ತಲ್ಲಣಿಸುತ್ತಿದ್ದರೆ, ಅದರ ಹೆಸರಲ್ಲಿ ಹೋರಾಟಕ್ಕಿಳಿದ ದ[ಲಿತ] ನಾಯಕರನೇಕರೂ ಇಂದಿಗೂ ಎತ್ತುವಳಿಯನ್ನ[ೇ] ದಂಧೆಯಾಗಿಸಿಕೊಂಡಿದ್ದಾರೆ. ಕೆಲವರು ಮಂಟೇಲಿಂ[ಗನ] ಅಪರಾವತಾರವೇ ಆಗಿಹೋಗಿದ್ದಾರೆ.

ದಲಿತರ ಹೆಸರಲ್ಲಿ ದಲಿತರನ್ನೇ ವಂಚಿಸುವುದು ಎ... ದಬ್ಬಾಳಿಕೆಗಳಿಗಿಂತಲೂ ದೊಡ್ಡ ಅಪರಾಧ. ಹಾದಿ ಬಿಟ್ಟರ[ೆ] ಹಾಲಿ ದಲಿತ ನಾಯಕರು ಎಚ್ಚೆತ್ತುಕೊಳ್ಳದೇ ಹೋ[ದರೆ] ಮಂಟೇಲಿಂಗನಿಗೆ ಕಂಪನಿ ಕೊಡುವ ಸದವಕ[ಾಶ] ಕೂಡಿಬರುವುದು ಖಚಿತ!



ಹೆಸರು ಗೊತ್ತಿರದ TVಯ ಹೆಸರೇ ಕದಂಬ ಟಿವಿ!

ಕ್ಯಾಪ್ಟನ್ ರಂಗನಾಥ್ ಮತ್ತೆ ಅಖಾಡಕ್ಕಿಳಿಯುತ್ತಿದ್ದಾರೆ.

ಕದಂಬ ಟಿವಿಯ ಮೂಲಕ!

ಕಳೆದ ಎರಡು ಮೂರು ತಿಂಗಳಿಂದ ಸುದ್ದಿಮನೆಯಲ್ಲಿ ರಂಗನ ಸದ್ದೇ ಇರಲಿಲ್ಲ. ಅವರು ವಿಜಯ ಕರ್ನಾಟಕದ ಎಡಿಟರ್ ಆಗಲು ಯತ್ನಿಸಿ, ಬೇರೆಬೇರೆ ಟಿವಿ ಚಾನಲ್‌ಗಳ ಜೊತೆ ಕೆಲಸ ಮಾಡಲು ಯೋಚಿಸಿ ಕೊನೆಗೆ ಸುಮ್ಮನಾಗಿದ್ದರು.

ಇಲ್ಲಿ ಸುಮ್ಮನಾಗುವುದೆಂದರೆ ಖಾಲಿ ಕೂತು ಬಿಡುವುದು ಎಂದಲ್ಲ. ತಕ್ಕ ಸಾಮರ್ಥ್ಯ, ಚಿಕ್ಕ ಯಶಸ್ಸು ಸಿಕ್ಕರೂ ಯಾವ ಪತ್ರಕರ್ತರೂ ಸುಮ್ಮನೆ ಇದ್ದುಬಿಡುವುದಿಲ್ಲ. ಹೊಸ ದಾರಿಗಳನ್ನು ಹುಡುಕುತ್ತಿರುತ್ತಾರಷ್ಟೇ.

ಎಚ್.ಆರ್. ರಂಗನಾಥ್ ಈಗ ತಮ್ಮದೇ ಹೊಸ ದಾರಿ ಹುಡುಕಿಕೊಂಡಿದ್ದಾರೆ.

ತಮ್ಮದೇ ಕದಂಬ ಟಿವಿ ಚಾಲನೆಗೆ ಕೈ ಹಾಕುವ ಮೂಲಕ.

ಕಳೆದ ಆಗಸ್ಟ್ ತಿಂಗಳ 26 ನೇ ತಾರೀಖು ಪ್ರಜಾವಾಣಿಯ ಮುಖಪುಟದಲ್ಲಿ ಒಂದು ವಿಭಿನ್ನ ಜಾಹೀರಾತು ಪ್ರಕಟವಾಗಿತ್ತು,

`TV ಹೆಸರು ಗೊತ್ತಿಲ್ಲ, ಆದರೂ ಕೆಲಸ ಖಾಲಿ ಇದೆ'

ಎಂದಿತ್ತು ಆ ಜಾಹೀರಾತು. ಮೂರನೇ ಪುಟದಲ್ಲಿ ಮುಂದುವರೆದಿದ್ದ ಆ ಜಾಹೀರಾತಿನಲ್ಲಿ, ತುಂಬ ಸ್ಫೂರ್ತಿ ಇರುವವರು ಬೇಕೆಂತಲೂ, ವಿಪರೀತ ಅನುಭವ, ಇರುವವರು ಬೇಡವೇ ಬೇಡವೆಂತಲೂ, ಮುಂತಾಗಿ 'ಬೇಕಾಗಿದ್ದಾರೆ' ಪ್ರಕಟಿಸಲಾಗಿತ್ತು, ರೈಟ್‌ಮ್ಯಾನ್ ಮೀಡಿಯಾ ಪ್ರೈ ಲಿಮಿಟೆಡ್ ಎಂಬೆಸರಿನಲ್ಲಿ ಪ್ರಕಟವಾಗಿರುವ ಜಾಹೀರಾತಿನಲ್ಲಿ ಆರ್.ಟಿ. ನಗರದ ಅಡ್ರೆಸ್ ಇದೆ.



ಮೀಡಿಯಾ ಮಂದಿ ಹೇಳುತ್ತಿರುವುದು ಇದು ಎಚ್.ಆರ್. ರಂಗನಾಥ್‌ರ ಹೊಸ ಪ್ರಾಜೆಕ್ಟ್ ಅಂತ. ಬಲ್ಲ ಮೂಲಗಳ ಪ್ರಕಾರ ಹಾಲಿ ಕಾರ್ಪೊರೇಟರ್ ಕಂ ಸಿನಿಮಾ ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನ ಈ ಚಾನಲ್‌ಗೆ ಪಾರ್ಟನರ್ ಅಂತೆ.

ಸಾಮಾನ್ಯ ಪತ್ರಕರ್ತರಾಗಿ ವೃತ್ತಿಜೀವನ ಶುರು ಮಾಡಿದ ರಂಗನಾಥ್ ಇವತ್ತು 50 ಕೋಟಿ ರೂಪಾಯಿ ಬಂಡವಾಳ ಹಾಕಿ ಸ್ವಂತಕ್ಕೆ ಟಿವಿ ಚಾನಲ್ ಮಾಡುವ ಲೆವೆಲ್‌ಗೆ ತಲುಪಿರುವುದು ಆಶ್ಚರ್ಯ ಹುಟ್ಟಿಸುವಂತಿದೆ.

ಕ್ಯಾಪ್ಟನ್ ರಂಗನಾಥ್‌ಗೆ ಹೇಳಬಹುದಾದ ಒಂದೆರಡು ಹಿತವಚ[ನ] ಏನೆಂದರೆ

ಅವರು ಸುಖಾಸುಮ್ಮನೆ ಸಹೋದ್ಯೋಗಿಗಳ ಮೇಲೆ ರೇಗಿ ಬೀಳುವುದು, ಕೆಲವೊಮ್ಮೆ ಹಿಯಾಳಿಸುವುದನ್ನು ಮಾಡುತ್ತಿರುತ್ತಾರೆ ಎಂಬ ಮಾತಿದೆ. ಅವರ extreme professional attitude ಟಿವಿ ಸಿಬ್ಬಂದಿಗೆ ಮಾತ್ರವಲ್ಲ , ಕೆಲವೊಮ್ಮೆ ವೀಕ್ಷಕರಿಗೂ ಹೊರೆ, ನೀರಸ ಅನ್ನಿಸಿದ್ದು ಉಂಟು.

ಇವೆಲ್ಲ ರಂಗಾ ಬಗ್ಗೆ ಅವರಿದ್ದ ಸುವರ್ಣ ಚಾನಲ್‌ನ ಜೊತೆಗಾರರ ಅನ್ನಿಸಿಕೆ.

ಇದೆಲ್ಲ ಏನೇ ಇರಲಿ, ಕದಂಬರ ಕಹಳೆ ಬೇಗನೆ ಮೊಳಗಲಿ.

ಗುಡ್‌ಲಕ್ ರಂಗನಾಥ್.

ಊರು ದಬ್ಬಿತು ಜೈಲು ಕರೆಯಿತು



ಆಗಸ್ಟ್ 29ರ ಸೋಮವಾರ ಮಧ್ಯಾಹ್ನ 2.45ರ ಸಮಯ. ಸ್ಥಳ. ಲೋಕಾಯುಕ್ತ ವಿಶೇಷ ನ್ಯಾಯಾಲಯ ಸಿಟಿ ಸಿವಿಲ್ ಕೋರ್ಟ್ ಆವರಣ.

ರಾಜ್ಯದ ಮುಖ್ಯಮಂತ್ರಿಯೊಬ್ಬ ಭ್ರಷ್ಟಾಚಾರದ ಕಾರಣಕ್ಕೆ ಪದಚ್ಯುತಿಗೊಂಡು ಈಗ ಅದೇ ಭ್ರಷ್ಟಾಚಾರ ನಿಯಂತ್ರಣ ಸಂಸ್ಥೆ (ಲೋಕಾಯುಕ್ತ)ಯ ವಿಶೇಷ ನ್ಯಾಯಾಲಯದ ಕಟಕಟೆಯಲ್ಲಿ ಕೈಕಟ್ಟಿ ನಿಂತಿದ್ದಾನೆ. ಪಕ್ಕದಲ್ಲೇ ಸಂಸದ ಮತ್ತು ಮಗ ರಾಘವೇಂದ್ರ, ಮತ್ತೊಬ್ಬ ಮಗ ವಿಜಯೇಂದ್ರ ಮತ್ತು ಅಳಿಯ ಸೋಹನ್‌ಕುಮಾರ್!

ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಕಂಡರಿಯದ ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ನೆರೆದ ಜಂಗುಳಿಯಿತ್ತಲ್ಲ; ಲೋಕಾಯುಕ್ತ ಕೋರ್ಟಿನಲ್ಲಿ ನೆರೆದ ವಕೀಲರ ಸಂಖ್ಯೆಯೇ ನಾನೂರನ್ನು ಮೀರಿತ್ತು. ನ್ಯಾಯಾಲಯದ ಹೊರಗೆ, ಕಾರಿಡಾರ್ ತುಂಬಾ ಮತ್ತು ಕೆಳಗಿನ ಇಡೀ ಕಾಂಪೌಂಡಿನಲ್ಲಿ ರಸ್ತೆಗುಂಟ ಸಾವಿರಾರು ಜನ ಕಿಕ್ಕಿರಿದು ನಿಂತಿದ್ದರೆ, ಅವರನ್ನು ನಿಯಂತ್ರಿಸಲಾಗದೇ ಪರದಾಡುತ್ತಿದ್ದ ಪೊಲೀಸರ ಸಂಖ್ಯೆಯೇ ಇನ್ನೂರಕ್ಕೂ ಅಧಿಕ.

ಸರಿಯಾಗಿ ಮಧ್ಯಾಹ್ನ ಮೂರು ಗಂಟೆಗೆ ಲೋಕಾಯುಕ್ತ ನ್ಯಾಯಾಧೀಶ ಎನ್.ಕೆ.ಸುದೀಂದ್ರ ರಾವ್ ಪ್ರತ್ಯಕ್ಷರಾಗಿದ್ದೇ ತಡ, ಯಡಿಯೂರಪ್ಪ ದೀನವದನರಾಗಿ ಎರಡೂ ಕೈಯೆತ್ತಿ ಮುಗಿದರು. ಜೊತೆಗಿದ್ದ ಮಕ್ಕಳು ಮತ್ತು ಅಳಿಯ ಕೂಡ ಅಷ್ಟೇ ಭೀತಿಯಿಂದ ನ್ಯಾಯಾಧೀಶರಿಗೆ ಕೈಮುಗಿದದ್ದನ್ನು ನೋಡಿದ್ದೇ ನೆರೆದಿದ್ದ ಜಂಗುಳಿಯಲ್ಲಿ ತಮ್ಮ ಮೊಬೈಲ್ ಹೊರತೆಗೆದು ಅದರ ಕ್ಯಾಮೆರಾದಲ್ಲಿ ಕೆಲವರು ಫೋಟೋ ಕ್ಲಿಕ್ಕಿಸತೊಡಗಿದರು. ಬಹುಶಃ ಮುಖ್ಯಮಂತ್ರಿಯಾಗಿ ಆಪತ್ತು ಬಂದಾಗಲೆಲ್ಲ ಯಡ್ಡಿ ಯಾವ್ಯಾವ ದೇವಾಲಯಗಳಿಗೆ ಭೇಟಿ ಕೊಟ್ಟು ಪೂಜೆ ಸಲ್ಲಿಸಿ ಕೈಮುಗಿದಿದ್ದರೋ ಆಗಲೂ ಇಷ್ಟೊಂದು ಭೀತಿಯಿಂದ, ಭಕ್ತಿಯಿಂದ ಕೈಮುಗಿದಿರಲಿಕ್ಕಿಲ್ಲ.

ಇದನ್ನು ಕಂಡ ಜನ ಮಾಜಿ ಮುಖ್ಯಮಂತ್ರಿಗೊದಗಿದ ದುರ್ಗತಿ ಕಂಡು ಗೇಲಿ ಮಾಡಿ ನಗುತ್ತಿದ್ದರೆ, ಸೈಲೆನ್ಸ್... ಸೈಲೆನ್ಸ್.... ಎಂದು ನ್ಯಾಯಾಧೀಶರು ಪದೇಪದೇ ಬೆಲ್ ಒತ್ತಿ ಎಚ್ಚರಿಸುತ್ತಿದ್ದರು. ಏನೇ ಎಚ್ಚರಿಕೆ ಕೊಟ್ಟರೂ ಜನ ಕೇಳಬೇಕಲ್ಲ. ಯಡ್ಡಿ ಪರ ವಕೀಲ ರವಿ ನಾಯ್ಕ ಈ ಪ್ರಕರಣದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಇರುವಾಗ ಹನುಮಂತರಾಯ ಏಕೆ ಬೇಕು? ಎಂದು ನ್ಯಾಯಾಧೀಶರೆದುರು ಪ್ರಶ್ನೆಯಿಟ್ಟರೆ ಅದಕ್ಕೆ ಪ್ರತಿಯಾಗಿ ಹನುಮಂತರಾಯ ಇದು ಖಾಸಗಿ ದೂರಾದ್ದರಿಂದ ಪಬ್ಲಿಕ್ ಪ್ರಾಸಿಕ್ಯೂಟರ್ ಅಗತ್ಯವಿಲ್ಲ, ನಾವೇ ವಾದ ಮಾಡುತ್ತೇವೆ ಎಂದು ತಿರುಗೇಟು ಕೊಟ್ಟರು.

ಸಿರಾಜಿನ್ ಭಾಷಾ ಪರ ಹನುಮಂತರಾಯರು ವಾದಿಸುವುದನ್ನು ಶತಗತಾಯ ತಡೆಗಟ್ಟಬೇಕೆಂಬ ಯಡ್ಡಿಪರ ವಕೀಲರಿಗೆ ಇಲ್ಲೂ ಹಿನ್ನಡೆಯಾಗಿದ್ದನ್ನು ಕಂಡು ಕಟಕಟೆಯಲ್ಲಿ ನಿಂತಿದ್ದ ಯಡ್ಡಿ ಎರಡನೇ ಸುತ್ತು ತಮ್ಮ ಕರವಸ್ತ್ರ ತೆಗೆದು ಬೆವರೊರೆಸಿಕೊಂಡರು. ಅಷ್ಟರಲ್ಲೇ ಯಡ್ಡಿ ವಕೀಲ ರವಿನಾಯ್ಕ ಅಪ್ಪ-ಮಕ್ಕಳ ಪರವಾಗಿ ಜಾಮೀನು ಕೋರಿದ ಅರ್ಜಿ ಮುಂದಿಟ್ಟರೆ ನ್ಯಾಯಾಧೀಶರು ಅದನ್ನು ನೋಡುತ್ತಿದ್ದಂತೆಯೇ ಸೆಪ್ಟೆಂಬರ್ ಏಳನೇ ತಾರೀಕಿಗೆ ಪ್ರಕರಣವನ್ನು ಮುಂದೂಡಿದರು. ಆವತ್ತೇ ಜಾಮೀನು ಸಿಗಬಹುದೆಂಬ ಯಡ್ಡಿಯ ನಿರೀಕ್ಷೆ ಕೂಡ ಹುಸಿಯಾಗಿತ್ತು, ಮತ್ತೆ ಮೂರನೇ ಬಾರಿ ಕರವಸ್ತ್ರ ತೆಗೆದದ್ದೇ ಬೆವರೊರೆಸಿಕೊಂಡರು.

ಮಧ್ಯಾಹ್ನ 3.30ರ ಹೊತ್ತಿಗೆ ವಿಚಾರಣೆ ಮುಗಿಸಿದ ಜಸ್ಟೀಸ್ ಸುಧೀಂದ್ರ ರಾವ್ ಪ್ರಕರಣವನ್ನು ಮುಂದೂಡಿದ್ದೇ ತಡ, ಯಡ್ಡಿ ಮತ್ತೊಮ್ಮೆ ಭಯಂಕರ ಭೀತಿಯಿಂದ ದೈನೇಸಿಯಾಗಿ ನ್ಯಾಯಾಧೀಶರಿಗೆ ಕೈಮುಗಿದು ಇನ್ನೇನು ಕಟಕಟೆಯಿಂದ ಹೊರನಡೆಯಬೇಕು. ಅಷ್ಟರಲ್ಲೇ ಹೊರಗೆ ಕಿಕ್ಕಿರಿದು ಸೇರಿದ್ದ ಜನಜಂಗುಳಿಯಿಂದ ಶೇಮ್..ಶೇಮ್ ಎಂಬ ಕೂಗು ಯಡ್ಡಿ ಮತ್ತವರ ಮಕ್ಕಳ ಕಿವಿಗಪ್ಪಳಿಸುತ್ತಲೇ ಇತ್ತು, ಇನ್ನೇನು ಪೊಲೀಸರ ಬೆಂಗಾವಲಿನಲ್ಲಿ ಕೋರ್ಟ್ ಹಾಲ್‌ನಿಂದ ಹೊರಬೀಳಬೇಕು. ಮತ್ತೊಂದು ದಿಕ್ಕಿನಿಂದ ಭ್ರಷ್ಟ ಯಡಿಯೂರಪ್ಪನಿಗೆ ಧಿಕ್ಕಾರ... ಧಿಕ್ಕಾರ ಎಂಬ ಘೋಷಣೆಗಳು ಇಡೀ ಕೋರ್ಟ್ ಆವರಣವನ್ನೇ ಅಲ್ಲಾಡಿಸಿಬಿಟ್ಟಿತ್ತು.

ಒಂದು ದಿಕ್ಕಿನಿಂದ ಶೇಮ್... ಶೇಮ್... ಕೂಗಾದರೆ ಮತ್ತೊಂದು ಬದಿಯಿಂದ ಧಿಕ್ಕಾರದ ಘೋಷಣೆ. ಯಡ್ಡಿಗಿದು ಅನಿರೀಕ್ಷಿತ ಆಘಾತ. ಕೇವಲ ಹತ್ತು ದಿನದ ಹಿಂದಷ್ಟೇ ಅಣ್ಣಾ ಹಜಾರೆ ಪರವಹಿಸಿ ತಾನೂ ಕೂಡಾ ಭ್ರಷ್ಟಾಚಾರದ ವಿರುದ್ಧ ಸತ್ಯಾಗ್ರಹ ಮಾಡ್ತೀನಿ ಎಂದು ಹೇಳಿಕೆ ಕೊಟ್ಟಿದ್ದ ಯಡ್ಡಿಗೆ ಕೋರ್ಟ್‌ನ ವಕೀಲರು ಸೇರಿದಂತೆ ನೆರೆದ ಜನರೆಲ್ಲ ಸೇರಿ ಧಿಕ್ಕಾರ ಹಾಕುತ್ತಿದ್ದರು!

ಇದು ಆಗಸ್ಟ್ 29 ರ ಸೋಮವಾರ ಮಧ್ಯಾಹ್ನ ಸೆಷನ್ಸ್ ಕೋರ್ಟ್ ಆವರಣದಲ್ಲಿ ಯಡ್ಡಿ ಅನುಭವಿಸಿದ ದುರ್ವಿಧಿಯಾದರೆ ಅದೇ ಹೊತ್ತಿಗೆ ರಾಜ್ಯ ಹೈಕೋರ್ಟ್ ಗಾಯದ ಮೇಲೆ ಬರೆ ಎಳೆದಂತೆ ಮತ್ತೊಂದು ಪೆಟ್ಟು ಕೊಟ್ಟಾಗಿತ್ತು. ವಕೀಲ ಸಿರಾಜಿನ್ ಭಾಷಾ ಸಲ್ಲಿಸಿದ ದೂರು ಮತ್ತು ಅದಕ್ಕೆ ಲೋಕಾಯುಕ್ತ ಹಾಕಿದ್ದ ಎಫ್‌ಐಆರ್‌ಗೆ ಸಂಬಂಧಪಟ್ಟಂತೆ ನಿರೀಕ್ಷಣಾ ಜಾಮೀನು ಕೋರಿ ಯಡ್ಡಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ತಿರಸ್ಕರಿಸಿದ್ದರು.

ಯಡ್ಡಿ ಪರ ವಕೀಲ ಲಲಿತ್; ಯಾವುದೇ ಸೂಕ್ತ ದಾಖಲೆ ಇಲ್ಲದೆ ಏಕಾಏಕಿ ರಾಜ್ಯಪಾಲರು ಯಡಿಯೂರಪ್ಪನವರ ವಿರುದ್ಧ ದೂರು ದಾಖಲು ಮಾಡಲು ಅನುಮತಿ ನೀಡಿದ್ದಾರೆಂದು ದೂರಿದ್ದನ್ನು ಕೋರ್ಟು ಮುಲಾಜಿಲ್ಲದೇ ತಳ್ಳಿ ಹಾಕಿತ್ತು. ಹೈಕೋರ್ಟ್ ಸ್ಪಷ್ಟವಾಗಿ ಹೇಳಿತ್ತು; ಯಡಿಯೂರಪ್ಪನ ವಿರುದ್ಧ ವಕೀಲ ಸಿರಾಜಿನ್ ಭಾಷಾ ಮಾಡಿರುವ ಆರೋಪಗಳಲ್ಲಿ ಸತ್ಯಾಂಶ ಇದೆ ಎಂಬುದನ್ನು ಖಾತರಿಪಡಿಸಿಕೊಂಡೇ ದೂರು ದಾಖಲಿಸಲು ಅನುಮತಿ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಸ್ಥಾನದಿಂದ ಸದ್ಯ ಇಳಿದಿದ್ದರೂ ರಾಜಕೀಯವಾಗಿ ಯಡಿಯೂರಪ್ಪ ಇನ್ನೂ ಪ್ರಭಾವಿ. ಜೊತೆಗೆ ಈ ಪ್ರಕರಣದಲ್ಲಿ ಸಾಕ್ಷಿಗಳೆಲ್ಲ ಐಪಿಎಸ್ ಅಧಿಕಾರಿಗಳು ಮತ್ತು ಉನ್ನತ ಹುದ್ದೆಯಲ್ಲಿರುವವರು. ಹಾಗೊಮ್ಮೆ ಜಾಮೀನು ನೀಡಿದ್ದೇ ಆದರೆ ಯಡಿಯೂರಪ್ಪ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿರುವುದು ಮತ್ತು ಸಾಕ್ಷಿಗಳು ತಮ್ಮ ಕೆಲಸದಲ್ಲಿ ನಿರಾತಂಕವಾಗಿ ಮುಂದುವರಿಯುವುದು ಕಷ್ಟ ಎಂಬ ಭಾಷಾರ ವಾದದಲ್ಲಿ ಹುರುಳಿದೆ.... ಎಂದು ಹೈಕೋರ್ಟ್ ನ್ಯಾಯಮೂರ್ತಿ ನಾರಾಯಣಸ್ವಾಮಿ ಯಡಿಯೂರಪ್ಪ ಪರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಕಡ್ಡಿ ತುಂಡು ಮಾಡಿದಂತೆ ವಜಾ ಮಾಡಿಬಿಟ್ಟರು. ಇತ್ತ ಲೋಕಾಯುಕ್ತ ಕೋರ್ಟಿನ ಕಟಕಟೆಯಲ್ಲಿ ನಿಲ್ಲಬೇಕಾದ ದುರ್ವಿಧಿ, ತಕ್ಷಣಕ್ಕೆ ಜಾಮೀನು ಸಿಗದೇ ಅದು ಸೆಪ್ಟೆಂಬರ್ 7 ಕ್ಕೆ ಮುಂದೂಡಲ್ಪಟ್ಟ ಹತಾಶೆ, ಕಿಕ್ಕಿರಿದ ಜನ ಧಿಕ್ಕಾರ ಹಾಕಿ ತನ್ನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರೀತಿ ಮತ್ತು ಇದೆಲ್ಲಕ್ಕೂ ಸೇರಿಸಿ ಗಾಯದ ಮೇಲೆ ಬರೆ ಎಳೆದಂತೆ ಹೈಕೋರ್ಟಿನಲ್ಲಿ ವಜಾಗೊಂಡ ನಿರೀಕ್ಷಣಾ ಜಾಮೀನು ಅರ್ಜಿ-

ಹೆಜ್ಜೆಹೆಜ್ಜೆಗೂ ಯಡ್ಡಿಗೆ ತಿರಸ್ಕಾರ, ಧಿಕ್ಕಾರ ಮತ್ತು ಮಾಡಿದ ಪಾಪದ ಫಲ ಬಿಟ್ಟರೆ ಎಲ್ಲೂ ಅನುಕೂಲದ ಮಾತೇ ಇಲ್ಲ. "ಇನ್ನು 6 ತಿಂಗಳಲ್ಲಿ ನಾನೇ ಮುಖ್ಯಮಂತ್ರಿಯಾಗಿ ಬರ್‍ತೀನಿ, ಇದೆಲ್ಲ ನನ್ನ ಏಳಿಗೆ ಸಹಿಸಲಾಗದ ವಿರೋಧಿಗಳು ನಡೆಸುತ್ತಿರುವ ಪಿತೂರಿ" ಎಂದೆಲ್ಲ ಭಾಷಣ ಬಿಗಿದ ಯಡ್ಡಿಗೆ ಈಗ ವಾಸ್ತವದ ಅರಿವಾಗುತ್ತಿದೆ.


ಚೋರರ ಗ್ಯಾಂಗ್

ಕೆಐಎಡಿಬಿಯಲ್ಲಿ ಕಟ್ಟಾ ಮಾಡಿದ ಲೂಟಿಗೂ ಮುಖ್ಯಮಂತ್ರಿಯಾಗಿ ಯಡ್ಡಿ ಮಾಡಿದ ಡೀನೋಟಿಫಿಕೇಷನ್ ದಂಧೆಗೂ ಸಾಮ್ಯತೆಯಿದೆ. ಲೋಕಾಯುಕ್ತರ ಮೊಕದ್ದಮೆ 2/11 ರಲ್ಲಿ ಯಡ್ಡಿ ಮೊದಲ ಆರೋಪಿಯಾದರೆ ಕೃಷ್ಣಯ್ಯ ಶೆಟ್ಟಿ ಎರಡನೇ ಆರೋಪಿ. ರಾಚೇನಹಳ್ಳಿ ಸ.ನಂ. 56 ರಲ್ಲಿ ಕೃಷ್ಣಯ್ಯ ಶೆಟ್ಟಿಗೆ 1.12 ಎಕರೆ ಡಿನೋಟಿಫೈ ಮಾಡಿಕೊಟ್ಟಿದ್ದಕ್ಕೆ ಪ್ರತಿಯಾಗಿ ಕೃಷ್ಣಯ್ಯ ಶೆಟ್ಟಿ 16 ಗುಂಟೆ ಜಾಗವನ್ನು ಯಡ್ಡಿ ಮಕ್ಕಳ ಧವಳಗಿರಿ ಪ್ರಾಪರ್ಟೀಸ್‌ಗೆ ವರ್ಗಾವಣೆ ಮಾಡಿದ ಬಗ್ಗೆ ಪಕ್ಕಾ ದಾಖಲೆಯಿದೆ.

ರಸ್ತೆಗೆಂದು ನೋಟಿಫೈ ಮಾಡಿದ್ದ ವೈಯಾಲಿಕಾವಲ್ ಸೊಸೈಟಿಯ ಭೂಮಿಯನ್ನು ಡಿನೋಟಿಫೈ ಮಾಡಿ ಅದರ 49.972 ಚದುರ ಅಡಿಗಳನ್ನು ಕೃಷ್ಣಯ್ಯ ಶೆಟ್ಟಿ ಮೂಲಕ ಧವಳಗಿರಿ ಪ್ರಾಪರ್ಟೀಸ್‌ಗೆ ವರ್ಗಾವಣೆಗೊಂಡ ಬಗ್ಗೆ ಕರಾರುವಾಕ್ಕಾದ ದಾಖಲೆಯನ್ನು ವಕೀಲ ಸಿರಾಜಿನ್ ಭಾಷಾ ಸಲ್ಲಿಸಿದ್ದಾರೆ.

ಇನ್ನು 3/11 ರ ಮೊಕದ್ದಮೆಯಲ್ಲಿ ಅರಕೆರೆ, ದೇವರ ಚಿಕ್ಕನಹಳ್ಳಿ, ಗೆದ್ದಲಹಳ್ಳಿಯಲ್ಲಿ ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ 2.5 ಎಕರೆಯನ್ನು ಡಿನೋಟಿಫೈ ಮಾಡಿದ ಯಡ್ಡಿ ಅದನ್ನು ತನ್ನ ಪರಮಾಪ್ತ 15 ಮಂದಿಯ ಹೆಸರಲ್ಲಿ ಖರೀದಿಸಿ ಕ್ರಮೇಣ ಅಳಿಯ ಸೋಹನ್ ಮೂಲಕ ಮತ್ತೆ ತಮ್ಮ ಕುಟುಂಬಕ್ಕೆ ಹಿಂಪಡೆದಿದ್ದಕ್ಕೂ ಸ್ಪಷ್ಟ ದಾಖಲಾತಿಗಳಿವೆ. ಇದೇ ದಾಟಿಯ ಮತ್ತೊಂದು ಕೇಸು 4/11. ಇದು ಅಗರದ ಸ.ನಂ. 449 ರ 2.5 ಎಕರೆಯ ಡಿನೋಟಿಫೈ ಮತ್ತು ಕೃಷ್ಣಯ್ಯ ಶೆಟ್ಟಿಗೆ ಆನೇಕಲ್ ತಾಲ್ಲೂಕಿನಲ್ಲಿ 880 ಎಕರೆ ಕೃಷಿ ಭೂಮಿಯನ್ನು ಭೂಪರಿವರ್ತನೆ ಮಾಡಿಸಿಕೊಟ್ಟ ವಿವಿಧ ಪ್ರಕರಣಗಳನ್ನು ಒಟ್ಟುಗೂಡಿಸಿ ಹಾಕಿದ ಕೇಸು. ಚಿಕ್ಕಪೇಟೆ ಶಾಸಕ ಹೇಮಚಂದ್ರ ಸಾಗರ್‌ಗೆ ಬನಶಂಕರಿ ಐದನೇ ಹಂತದಲ್ಲಿ 10 ಎಕರೆ ಅಂದರೆ 175 ಕೋಟಿ ರೂಪಾಯಿ ಬೆಲೆಬಾಳುವ ಬಿಡಿಎ ಸೊತ್ತನ್ನು ಡಿನೋಟಿಫೈ ಮಾಡಿಕೊಟ್ಟು, ಪ್ರತಿಯಾಗಿ ಮೂರೂವರೆ ಕೋಟಿ ರೂಪಾಯಿ ಲಂಚ ಪಡೆದ ಪ್ರಕರಣವೂ ಇದೇ ಕೇಸಿಗೆ ಸೇರಿದೆ.

ಅಗರದ ಸ.ನಂ. 449 ರಲ್ಲಿದ್ದ 2.5 ಎಕರೆ ಭೂಮಿಯನ್ನು ಡಿನೋಟಿಫೈ ಮಾಡಲು ಸಾಧ್ಯವೇ ಇಲ್ಲ ಎಂದು ಹಿಂದಿದ್ದ ಡಿನೋಟಿಫಿಕೇಷನ್ ಕಮಿಟಿ ಸ್ಪಷ್ಟವಾಗಿ ತಳ್ಳಿಹಾಕಿದ್ದನ್ನು ಯಡ್ಡಿ ಒಂದೇ ದಿನದಲ್ಲಿ ಡಿನೋಟಿಫೈ ಮಾಡುತ್ತಾರೆ. ಹೇಳಿಕೇಳಿ ಇದು ಎಚ್.ಎಸ್.ಆರ್. ಲೇಔಟಿಗೆಂದು 84 ರಲ್ಲೇ ಬಿಡಿಎ ಸ್ವಾಧೀನ ಪಡಿಸಿಕೊಂಡ ಸೊತ್ತು, 86 ರಲ್ಲಿ ಅಂತಿಮ ಅಧಿಸೂಚನೆ ಕೂಡ ಮುಗಿಯುತ್ತದೆ. ಅದರ ಪರಿಹಾರದ ಮೊತ್ತ ಕೂಡ ಜಮೀನುದಾರರಾದ ಗುಂಡಪ್ಪ ಮತ್ತು ವೆಂಕಟಮ್ಮರ ಹೆಸರಿಗೆ ಬಿಡಿಎ ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟಿದೆ. ಇದರಲ್ಲಿ 20 ಸೈಟುಗಳನ್ನು ವಿಂಗಡಿಸಿ ಆಗಿತ್ತು.

ಇದರ ಸದ್ಯದ ಮಾರುಕಟ್ಟೆ ಬೆಲೆಯೇ 75 ಕೋಟಿ. ಇಂಥ ಆಸ್ತಿಯನ್ನು ಮುಖ್ಯಮಂತ್ರಿ ಯಡ್ಡಿ ಡಿನೋಟಿಫಿಕೇಷನ್ ಕಮಿಟಿಗೂ ಕಳಿಸದೇ ಒಂದೇ ದಿನದಲ್ಲಿ ಡಿನೋಟಿಫೈ ಮಾಡುತ್ತಾರೆ. ಈ ರೀತಿ ಡೀನೋಟಿಫೈ ಆಗಿದ್ದೇ ತಡ **Elyon Developers** ಎಂಬ ರಿಯಲ್ ಎಸ್ಟೇಟ್ ಕಂಪನಿಯ ಯುಗಂಧರ್ ಎಂಬಾತ ಕೇವಲ 1.86 ಕೋಟಿಗೆ 14 ಸಾವಿರ ಚದುರ ಅಡಿಯನ್ನೂ ಉಳಿಕೆ 5 ಸಾವಿರ ಚದುರ ಅಡಿಗಳಷ್ಟನ್ನು ಕೇವಲ 44 ಲಕ್ಷಕ್ಕೆ ಜಮೀನುದಾರರಿಂದ ಖರೀದಿಸುತ್ತಾನೆ.

ಅಲ್ಲಿಗೆ ಹೆಚ್ಚೂಕಮ್ಮಿ 2 ಕೋಟಿಗೆ ಇಡೀ 75 ಕೋಟಿಯ ಸೊತ್ತನ್ನು ಯುಗಂಧರ್ ಖರೀದಿಸಿದಂತಾಯ್ತು. ಆದರೆ ಇದೇ ಯುಗಂಧರ್ ಯಡ್ಡಿಯ ಬೇನಾಮಿ ಕಂಪನಿಯಾದ ಭಗತ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಅಪ್ಲಿಕೇಷನ್ ಮನಿ ಎಂದು ಎರಡು ಕೋಟಿ ಕೊಡುತ್ತಾನೆ. ಹೀಗೆ ಕೊಟ್ಟು 2 ಕೋಟಿಗೆ ಪ್ರತಿಯಾಗಿ ಯುಗಂಧರ್ ಯಾವುದೇ ಷೇರ್ ಅನ್ನಾಗಲಿ, ಇನ್ನಾವುದೇ ಪ್ರತಿಫಲವನ್ನಾಗಲಿ ಪಡೆಯುವುದಿಲ್ಲ.

ಅಷ್ಟಕ್ಕೂ ಭಗತ್ ಹೋಮ್ಸ್ ಪ್ರೈ. ಲಿಗೆ ಯಾರೆಲ್ಲ ಡೈರೆಕ್ಟರಗಳೆಂದು ಕೆದಕಿದರೆ; ಯಡ್ಡಿ ಅಳಿಯ ಸೋಹನ್ ಕುಮಾರ್ ಯಡ್ಡಿಯ ಕುಟುಂಬದ ಭ್ರಮರ ಎಂಬಾಕೆ, ಮಗ ವಿಜಯೇಂದ್ರನ ಹೆಂಡತಿ ಮಂಕರ ಪ್ರೇಮ, ಮತ್ತೊಬ್ಬ ಮಗ ರಾಘವೇಂದ್ರ ಪತ್ನಿ ತೇಜಸ್ವಿನಿ ರಾಘವೇಂದ್ರ ಮುಂತಾದವರೇ ಡೈರೆಕ್ಟರ್‌ಗಳು. ಕಂಪನಿಯ ಹಿನ್ನೆಲೆ ನೋಡಿದರೆ ಇದು ಯಾವತ್ತೂ ಯಾವುದೇ ವ್ಯವಹಾರವನ್ನಾಗಲಿ, ಕಟ್ಟಡ ನಿರ್ಮಾಣವನ್ನಾಗಲಿ ಮಾಡೇ ಇಲ್ಲ. ಇಂಥ ಕಂಪನಿಗೆ ರಿಯಲ್ ಎಸ್ಟೇಟ್ ಖದೀಮ ಯುಗಂಧರ್ ವಿನಾಕಾರಣ 2 ಕೋಟಿ ಏಕೆ ಕೊಡುತ್ತಾನೆಂದರೆ 75 ಕೋಟಿ ಮೊತ್ತದ ಬಿಡಿಎ ಸೊತ್ತನ್ನು ಕಬಳಿಸಿದನಲ್ಲ; ಅದಕ್ಕೆ!

ಟೆಲಿಕಾಂ ಎಂಪ್ಲಾಯಿಸ್ ಸೊಸೈಟಿಗೆ ಲೇಔಟ್‌ಗೆಂದು ಕೃಷ್ಣಯ್ಯ ಶೆಟ್ಟಿಗೆ ಆನೇಕಲ್ ತಾಲ್ಲೂಕು, ಅರೆನೂರು ಗ್ರಾಮದಲ್ಲಿ ಅಕ್ಕಪಕ್ಕದ ಮೈಲನಹಳ್ಳಿ, ಬಿದುರುಗುಪ್ಪೆ, ಸರ್ಜಾಪುರ ಸೇರಿದಂತೆ ಒಟ್ಟು 380 ಎಕರೆ ಕೃಷಿ ಭೂಮಿಯನ್ನು ಹಸಿರುಪಟ್ಟಿಯಿಂದ ವಾಸದ ಉದ್ದೇಶಕ್ಕೆಂದು ಪರಿವರ್ತಿಸಿಕೊಟ್ಟ ಯಡ್ಡಿಗೆ ಪ್ರತ್ಯುಪಕಾರವಾಗಿ ಕೃಷ್ಣಯ್ಯ ಶೆಟ್ಟಿ ಭಗತ್ ಹೋಮ್ಸ್‌ಗೆ 3 ಕೋಟಿ ರೂಪಾಯಿ ವರ್ಗಾಯಿಸುತ್ತಾರೆ. ಅದೇ ರೀತಿ ಧವಳಗಿರಿ ಪ್ರಾಪರ್ಟೀಸ್‌ಗೆ ಮತ್ತೆ ಎರಡು ಕೋಟಿ ರೂಪಾಯಿ ಹಾಕುತ್ತಾರೆ.


ತನ್ನ ಪರ 380 ಎಕರೆ ಕೃಷಿ ಭೂಮಿಯನ್ನು ಹಸಿರು ಪಟ್ಟಿಯಿಂದ ಪರಿವರ್ತಿಸದೆ ಹೋಗಿದ್ದರೆ ಕೃಷ್ಣಯ್ಯ ಶೆಟ್ಟಿ ಏಕೆ ವಿನಾಕಾರಣ ಯಡ್ಡಿ ಮಕ್ಕಳ ಕಂಪನಿಗೆ ದುಡ್ಡು ಹಾಕುತ್ತಾನೆ? ಹಾಗೇ ಹತ್ತೆಕರೆ ಅಂದರೆ 175 ಕೋಟಿಯ ಬನಶಂಕರಿ ಬಿಡಿಎ ಆಸ್ತಿಯನ್ನು ಡಿನೋಟಿಫೈ ಮಾಡಿಕೊಟ್ಟಿದ್ದಕ್ಕೆ ಪ್ರತಿಯಾಗಿ ಹೇಮಚಂದ್ರ ಸಾಗರ್ ಒಡೆತನದ ಸಾಗರ್ ಹೆಲ್ತ್ ಕೇರ್ ಕಂಪನಿಯಿಂದ ಯಡ್ಡಿ ಮಕ್ಕಳ ಸಹ್ಯಾದ್ರಿ ಹೆಲ್ತ್ ಕೇರ್‌ಗೆ ಮೂರೂವರೆ ಕೋಟಿ ರೂಪಾಯಿ ವರ್ಗಾವಣೆಗೊಂಡಿದ್ದಕ್ಕೂ ವಕೀಲ ಸಿರಾಜಿನ್ ಭಾಷಾ ನಿಖರವಾದ ದಾಖಲಾತಿಗಳನ್ನು ಸಲ್ಲಿಸಿದ್ದಾರೆ.

ಇಂಥ ಒಟ್ಟು 15 ಡಿನೋಟಿಫಿಕೇಷನ್ ಪ್ರಕರಣಗಳನ್ನು ಒಟ್ಟುಗೂಡಿಸಿ ಅದನ್ನು ಐದು ಮೊಕದ್ದಮೆಗಳ ರೂಪದಲ್ಲಿ ಸಲ್ಲಿಸಿದ ವಕೀಲ ಸಿರಾಜಿನ್ ಭಾಷಾ ಯಡ್ಡಿ ಕುಟುಂಬದ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಸೆಪ್ಟೆಂಬರ್ ಏಳಕ್ಕೆ ಯಡ್ಡಿಯ ಜಾಮೀನು ಪ್ರಶ್ನೆ ಇತ್ಯರ್ಥಗೊಳ್ಳುತ್ತದೆ. ಹೈಕೋರ್ಟ್ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿರುವಾಗ ಇನ್ನು ಲೋಕಾಯುಕ್ತ ಕೋರ್ಟು ಯಾವ ಆಧಾರದ ಮೇಲೆ ಜಾಮೀನು ನೀಡಲು ಸಾಧ್ಯ?

ಯಡ್ಡಿ-ಮಕ್ಕಳು ಜೈಲು ಪಾಲಾಗುವ ಗಳಿಗೆ ಕ್ಷಣಕ್ಷಣಕ್ಕೂ ಸಮೀಪಿಸುತ್ತಿದೆ.

• ರಾ. ಸೋಮನಾಥ್


ಜೊತೆಜೊತೆಯಲ್ಲಿ ಜೈಲಿಗೆ....



ಮುಂಬೈನವನಾದ ವಿನೋದ್ ಗೋಯಲ್ ಒಂದು ಗಣಿ ಲೈಸೆನ್ಸ್ ಗಿಟ್ಟಿಸಲು ಏನೇನು ಆಟ ಆಡಿದ್ದಾನೆಂದು ನೋಡಿದರೆ ಆಶ್ಚರ್ಯವಾಗಲೇಬೇಕು. ಖೊಟ್ಟಿ ದಾಖಲೆಗಳು, ನಕಲಿ ಸರ್ಕಾರಿ ಪತ್ರಗಳು, ರೆವಿನ್ಯೂ ಇಲಾಖೆಯ ಡೋಂಗಿ ಸ್ಕೆಚ್‌ಗಳು... ಒಂದಾ ಎರಡಾ! ಇದೆಲ್ಲ ಅನಾಹುತಗಳು ನಡೆದದ್ದು ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ! ಏನೇನೂ, ಅನುಭವವಿರದ ಹಾಗೂ ಬಾಲಿಶ ಮನೋಭಾವದವನೊಬ್ಬ ಮುಖ್ಯಮಂತ್ರಿಯಾದರೆ ಮಾಡಬಹುದಾದ ಯಡವಟ್ಟುಗಳನ್ನು ಕುಮಾರಸ್ವಾಮಿ ಸಿಎಂ ಆಗಿದ್ದಾಗ ಕಣ್ಣುಮುಚ್ಚಿಕೊಂಡು ಮಾಡಿಬಿಟ್ಟಿದ್ದಾರೆ. ಮತ್ತೀಗ ಸಿಕ್ಕಿಬಿದ್ದಿದ್ದಾರೆ!

ಕುಮಾರಸ್ವಾಮಿ ಕುತ್ತಿಗೆ ಸುತ್ತ

ಜಂತಕಲ್ ಹಗರಣ

• ಪಾರ್ವತೀಶ

...ಇದು ಅಷ್ಟು ಸುಲಭವಾಗಿ ಜೀರ್ಣವಾಗುವಂತಹ ಭೋಜನವಲ್ಲ!

ಜಂತಕಲ್ ಗಣಿ ಲೈಸೆನ್ಸ್ ಹಗರಣದಿಂದ ಮಾಜಿ ಸಿಎಂ ಕುಮಾರಸ್ವಾಮಿ ತಪ್ಪಿಸಿಕೊಳ್ಳುವುದು ಅಷ್ಟು ಸಲೀಸಾಗಿಯೂ ಇಲ್ಲ.

ಯಡ್ಡಿ ಮಕ್ಕಳು ತಮ್ಮ ಪ್ರೇರಣಾ ಟ್ರಸ್ಟಿಗೆ ಜಿಂದಾಲ್ ಗಣಿ ಕಳ್ಳರಿಂದ 40 ಕೋಟಿ ರೂಪಾಯಿ ನುಂಗಿದ್ದು, ಜನಾರ್ದನ ರೆಡ್ಡಿ ಮತ್ತವನ ಹೆಂಡತಿ ಲಕ್ಷ್ಮಿಅರುಣ ಅಸೋಸಿಯೇಟೆಡ್ ಮೈನಿಂಗ್ ಕಂಪನಿಯ ಮೂಲಕ ಸಾವಿರಾರು ಕೋಟಿ ರೂ. ಮೌಲ್ಯದ ಅದಿರನ್ನು ಕದ್ದು ಸಾಗಿಸಿರುವ ಹಗರಣಗಳೇ ಒಂದು ರೀತಿಯದಾದರೆ ಎಚ್‌ಡಿಕೆ ಬೆಂಬಲದೊಂದಿಗೆ ನಡೆದಿರುವ ಜಂತಕಲ್ ಗಣಿ ಲೈಸೆನ್ಸ್‌ನದ್ದೇ ಬೇರೊಂದು ರೀತಿಯ ಹಗರಣ.

ಈಗ ಕುಮಾರಸ್ವಾಮಿಗೆ ಚಳಿ,ಜ್ವರ ಎರಡನ್ನೂ ತರಿಸಿರುವ ಈ ಹಗರಣ ಸೃಷ್ಟಿಸಿರುವುದು ವಿನೋದ್ ಗೋಯಲ್ ಎಂಬ ಖದೀಮ.

ಮುಂಬೈನವನಾದ ಈ ಗೋಯಲ್ ಒಂದು ಗಣಿ ಲೈಸೆನ್ಸ್ ಗಿಟ್ಟಿಸಲು ಏನೇನು ಆಟ ಆಡಿದ್ದಾನೆಂದು ನೋಡಿದರೆ ಆಶ್ಚರ್ಯವಾಗಲೇಬೇಕು. ಖೊಟ್ಟಿ ದಾಖಲೆಗಳು, ನಕಲಿ ಸರ್ಕಾರಿ ಪತ್ರಗಳು ರೆವಿನ್ಯೂ ಇಲಾಖೆಯ ಡೋಂಗಿ ಸ್ಕೆಚ್‌ಗಳು... ಒಂದಾ ಎರಡಾ!

ಇದೆಲ್ಲದರ ಜೊತೆಗೆ ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೆಳಮಟ್ಟದಿಂದ ಹಿಡಿದು ಉನ್ನತಾಧಿಕಾರಿಗಳತನಕ ಎಲ್ಲರಿಗೂ ಲಂಚ ತಿನ್ನಿಸಿದ್ದಾನೆ. ಅರಣ್ಯ ಕಾಯಿದೆ, ಗಣಿಗಾರಿಕೆ ನಿಯಮಗಳನ್ನೆಲ್ಲ ಗಾಳಿಗೆ ತೂರಿದ್ದಾನೆ.

ಇದೆಲ್ಲ ಅನಾಹುತಗಳು ನಡೆದದ್ದು ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ!

ಅಷ್ಟೇ ಅಲ್ಲ, ಖುದ್ದು ಕುಮಾರಸ್ವಾಮಿಯೇ ಈ ವಿನೋದ್ ಗೋಯಲ್‌ನ ಗಣಿ ಲೈಸೆನ್ಸ್ ವಿಚಾರದಲ್ಲಿ ಪರ್ಸನಲ್ ಇಂಟರೆಸ್ಟ್ ತೋರಿಸಿ ಶಾಮೀಲಾಗಿರುವ ವಿಚಾರ ದಾಖಲೆ ಸಮೇತ ಹೊರಬಂದಿದೆ. ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆಯವರ ತನಿಖಾ ವರದಿಯ ಚಾಪ್ಟರ್ 16, 17, 18 ಹಾಗೂ 19ರಲ್ಲಿ ಈ ಹಗರಣದ ಪೂರ್ಣ ವಿವರಗಳಿವೆ.

ಆ ವಿವರಗಳನ್ನು ಮತ್ತು ತನಿಖಾಧಿಕಾರಿ ಡಾ.ಯು.ವಿ.ಸಿಂಗ್‌ರ ಪತ್ತೆದಾರಿಕೆ ನೋಡಿದರೆ ಗಾಬರಿಯಾಗುತ್ತದೆ. ಯಾಕೆ ಗೊತ್ತೆ?

ಏನೇನೂ ಅನುಭವವಿರದ ಹಾಗೂ ಬಾಲಿಶ ಮನೋಭಾವದವನೊಬ್ಬ ಮುಖ್ಯಮಂತ್ರಿಯಾದರೆ ಏನೇನು ಯಡವಟ್ಟುಗಳನ್ನು ಮಾಡಬಹುದೋ ಅಂತದೆಲ್ಲವನ್ನೂ ಕುಮಾರಸ್ವಾಮಿ ಸಿಎಂ ಆಗಿದ್ದಾಗ ಕಣ್ಣುಮುಚ್ಚಿಕೊಂಡು ಮಾಡಿಬಿಟ್ಟದ್ದಾರೆ. ಮತ್ತೀಗ ಸಿಕ್ಕಿಬಿದ್ದಿದ್ದಾರೆ!

ಜಂತಕಲ್ ಎಂಟರ್‌ಪ್ರೈಸಸ್‌ನ ಅವ್ಯವಹಾರಗಳು

ಚಿತ್ರದುರ್ಗ ಜಿಲ್ಲೆಯಲ್ಲಿರುವ ಹೊಳಲ್ಕೆರೆ ತಾಲೂಕಿನ ಹಿರಕಂಡವಾಡಿ ಮತ್ತು ತನಿಗೇನಹಳ್ಳಿಯಲ್ಲಿ ಗಣಿ ಗುತ್ತಿಗೆಯನ್ನು 1965ರಲ್ಲಿ ಶ್ರೀ ಕೆ.ರಾಘವೇಂದ್ರ ರಾವ್ ಅವರಿಗೆ ನೀಡಲಾಗಿತ್ತು, ಆದರೆ ಜಂತಕಲ್ ಎಂಟರ್‌ಪ್ರೈಸಸ್ ಕಂಪನಿಯು ಈ ಗುತ್ತಿಗೆಯನ್ನು 1967ರಲ್ಲಿ ತನ್ನ ಹೆಸರಿಗೆ ವರ್ಗಾಯಿಸಲಾಯಿತೆಂದು ಹೇಳುತ್ತದೆ. ಆದರೆ ಇದರ ಸಮರ್ಥನೆ ಮಾಡಲು ಯಾವುದೇ ದಾಖಲೆಯಾಗಲಿ, ಸರ್ಕಾರದ ಆಜ್ಞೆಯಾಗಲಿ ಯಾವುದೇ ಕಡತದಲ್ಲೂ ಇಲ್ಲ ಅಥವಾ ಗುತ್ತಿಗೆದಾರರ ಬಳಿಯೂ ಇಲ್ಲ, ಆದರೂ ಮೇಲ್ಕಂಡ ಗಣಿ ಗುತ್ತಿಗೆಯನ್ನು ಎರಡು ಬಾರಿ ಸರ್ಕಾರವು 13.08.2007ರಲ್ಲಿ ನವೀಕರಣ ಮಾಡಿದೆ. ಅದೂ 22 ವರ್ಷಗಳ ನಂತರ. ನವೀಕರಣವನ್ನು ಅಂದಿನ ಮುಖ್ಯಮಂತ್ರಿಗಳ ಕಾರ್ಯದರ್ಶಿ "16 ಕಂಡಿಕೆ 12ನ್ನು ಮಾನ್ಯ ಮುಖ್ಯಮಂತ್ರಿಗಳು ಅನುಮೋದಿಸಿದ್ದಾರೆ. (ಡಿ.ವಿ.ಪ್ರಸಾದ್) ಮುಖ್ಯಮಂತ್ರಿಗಳ ಕಾರ್ಯದರ್ಶಿ" ಎಂದು ದಾಖಲಿಸಿದ್ದಾರೆ

ಅರಣ್ಯ ಸಂರಕ್ಷಣಾ ಕಾಯಿದೆ, 1980ರಡಿಯಲ್ಲಿ ಅನುಮೋದನೆಯನ್ನು ಅಪೂರ್ಣ ದಾಖಲೆಗಳ ಕಾರಣಕ್ಕಾಗಿ ನೀಡಲಾಗಿರಲಿಲ್ಲ, ತದನಂತರ ಖೋಟಾ ದಾಖಲೆಗಳ ಸಲ್ಲಿಕೆಯಿಂದ ಕೆಲವು ತೊಂದರೆಗಳು ತಲೆಯೆತ್ತಿದ್ದವು. ಗುತ್ತಿಗೆ ಅವಧಿ ಮುಗಿದ ಮೇಲೆ ಅನುಮೋದನೆಯನ್ನು ಪಡೆಯದೆ ಗಣಿಗಾರಿಕೆ ನಡೆಸುವುದು, ಅರಣ್ಯ ಸಂರಕ್ಷಣಾ ಕಾಯಿದೆ 1980ರಡಿಯಲ್ಲಿ ಅಪರಾಧವೆನಿಸುತ್ತದೆ. ಈ ತೊಂದರೆಯನ್ನು ದೂರಮಾಡಲು, ಜಂತಕಲ್ ಮೈನಿಂಗ್ ಕಂಪನಿಯ ಜಿ.ಪಿ.ಎ ದಾರನಾದ ವಿನೋದ್ ಗೋಯಲ್ "ಹಳೆಯ ಗುಪ್ಪೆ ಅದಿರನ್ನು" ಸಾಗಿಸುವ 'ನೆಪ'ದಲ್ಲಿ ಗಣಿಗಾರಿಕೆಗಿಳಿದನು.

ಈತನು ಮುಂಬೈ ನಿವಾಸಿ. ಬೆಂಗಳೂರಿನಲ್ಲಿಯೂ ಆಫೀಸ್ ಇದೆ. ಈತನು ತುಮಕೂರು ಜಿಲ್ಲೆಯಲ್ಲಿಯೂ ಹನುಮಾನ್ ಮೈನ್ಸ್ ಎಂಬ ಗಣಿಯನ್ನು ಹೊಂದಿದ್ದಾನೆ. ಬೇರೊಂದು ಕಂಪನಿಯಾದ ಶ್ರೀ ಸಾಯ್ ವೆಂಕಟೇಶ್ವರ ಮಿನರಲ್ಸ್‌ಗೆ ಗುತ್ತಿಗೆ ಅನುಮತಿ ಪಡೆಯುವ ಪ್ರಯತ್ನದಲ್ಲಿ ಒಳಗೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಈತನಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಗಣಿ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳೊಡನೆ ಮತ್ತು ರಾಜಕೀಯ ಮಟ್ಟದಲ್ಲಿಯೂ ಒಳ್ಳೆಯ ಸಂಪರ್ಕಗಳಿವೆ.



ಈತನು ಎಂ.ಒ.ಇ.ಎಫ್ (ಅರಣ್ಯ ಮತ್ತು ಪರಿಸರ ಇಲಾಖೆ)ನಲ್ಲಿ ಕೆಲಸ ಮಾಡುತ್ತಿದ್ದ ಇರ್ಫಾನ್ ಶೇಖ್ ಎಂಬುವರು ಸಹಿಮಾಡಿ ಬರೆದ ಪತ್ರಗಳು ಬಂದಂತೆ ಎರಡು ಪತ್ರಗಳನ್ನು ಸೃಷ್ಟಿ ಮಾಡಿ ಅದನ್ನು ಸಕ್ಷಮ ಪ್ರಾಧಿಕಾರಕ್ಕೆ ಬರೆದು, ಈ ಖೋಟಾ ಪತ್ರಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಲ್ಲಿಸಿ ಕಬ್ಬಿಣದ ಅದಿರನ್ನು ಸಾಗಿಸಲು ಅನುಮತಿಯನ್ನು ಕೇಳಿದ್ದಾನೆ. ಈ ಪತ್ರಗಳ ಆಧಾರದ ಮೇಲೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ಈತನಿಗೆ ಆ 'ಹಳೆಯ ಗುಪ್ಪೆಗಳನ್ನು' ತೆಗೆಯಲು ಅನುಮತಿ ನೀಡಿದರು.

ಆದರೆ ಇದಕ್ಕೆ ಮೊದಲು ನಿರ್ದೇಶಕರು ಈ ಅನುಮತಿ ಪತ್ರದ ಮೇಲೆ ಟಿಪ್ಪಣಿಯಲ್ಲಿ ಹೀಗೆ ಬರೆದಿದ್ದಾರೆ:

"ಈ ಕುರಿತು ಮುಖ್ಯಮಂತ್ರಿಗಳ ಕಚೇರಿಯಿಂದ ಮತ್ತು ಸ್ವತಃ ಮುಖ್ಯಮಂತ್ರಿಗಳಿಂದ ತಡೆಯಲಾಗದಷ್ಟು ಒತ್ತಡ ಬಂದಿದೆ. ಅರಣ್ಯ ಮತ್ತು ಪರಿಸರ ಇಲಾಖೆಯ ಕಾನೂನಿನ ಪ್ರಕಾರ ಇದಕ್ಕೆ ಅನುಮತಿಯನ್ನು ನೀಡಲಾಗುವುದಿಲ್ಲ, ಆದರೂ ಮಾನ್ಯ ಮುಖ್ಯಮಂತ್ರಿಗಳ ಒತ್ತಡ ಬಂದಿದ್ದು ಎರಡೇ ಗಂಟೆಯ ಅವಧಿಯೊಳಗೆ ಈ ಅನುಮತಿಯನ್ನು ನೀಡಬೇಕೆಂದು ಅವರು ಫೋನ್ ಮೂಲಕ ತಿಳಿಸಿದ್ದಾರೆ. ಇದಕ್ಕೆ ದೀರ್ಘವಾದ ಪ್ರಕ್ರಿಯೆ ಪಾಲಿಸಬೇಕು. ಆದರೆ ಸರ್ಕಾರದ ಅತ್ಯುನ್ನತ ಮಟ್ಟದಿಂದ ಒತ್ತಾಯ ಇರುವುದರಿಂದ ನಾವು ಇದನ್ನು ಆದಷ್ಟು ಬೇಗ ನೀಡಬೇಕಾಗಿದೆ.

ಸಹಿ,
ಕಮೀಷನರ್.

–ಇದಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ತಾನು ಅಂತಹ ಯಾವುದೇ ಪತ್ರವನ್ನು ಜಂತಕಲ್ ಎಂಟರ್‌ಪ್ರೈಸಸ್ ರವರಿಗೆ ನೀಡಿಲ್ಲವೆಂದೂ, ಇಂತಹ ಪತ್ರಕ್ಕೆ ಸಹಿ ಮಾಡಿರುವ ಇರ್ಫಾನ್ ಶೇಖ್ ಎಂಬ ಹೆಸರಿನ ಯಾವುದೇ ವ್ಯಕ್ತಿ ತನ್ನ ಇಲಾಖೆಯಲ್ಲಿ ಕೆಲಸ ಮಾಡುತ್ತಿಲ್ಲವೆಂದು ತಿಳಿಸಿದೆ. ಆಮೇಲೆ ವಿನೋದ್ ಗೋಯಲ್ ಸಹ ಆ ಪತ್ರವು ನಕಲಿಯೆಂಬುದನ್ನು ಒಪ್ಪಿಕೊಂಡಿದ್ದಾನೆ.

ಈ ಸಂಬಂಧದಲ್ಲಿ ತನಿಖೆ ಶುರುವಾದಾಗ ಗಣಿ ಇಲಾಖೆಯು ವಿನೋದ್ ಗೋಯಲ್ ಮತ್ತು ಪಿ.ಸಿ.ಸಿ.ಎಫ್. (ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ) ಇವರುಗಳ ನಡುವೆ ನಡೆದ ಪತ್ರ ವ್ಯವಹಾರವುಳ್ಳ ಕಡತವು ಕಳುವಾಗಿದೆ ಎಂದು ಹೇಳಿತು. ಅದಲ್ಲದೆ ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಕಾರ್ಯಾಲಯದಿಂದಲೂ 'ನಾಪತ್ತೆ'ಯಾದವು. ಆದರೆ ಈ ಕಳ್ಳತನದ ಬಗೆಗಿನ ದೂರನ್ನು ಆರು ತಿಂಗಳ ನಂತರ ಕೊಟ್ಟಿದ್ದು ಆಶ್ಚರ್ಯಕರವಾಗಿದೆ. ಈ ಕಳ್ಳತನದಲ್ಲಿ ಭಾಗಿಯಾದ ಎಲ್ಲ ಅಧಿಕಾರಿಗಳ ಬಗೆಗೆ ವಿಚಾರಣೆ ನಡೆಯಬೇಕಿತ್ತು, ಆದರೆ ಮೂರು ವರ್ಷಗಳ ನಂತರವೂ ಅಂತಹ ಯಾವುದೇ ಕ್ರಮವನ್ನು ಯಾರೂ ತೆಗೆದುಕೊಳ್ಳಲಿಲ್ಲ.

ಜಂತಕಲ್ ಎಂಟರ್‌ಪ್ರೈಸಸ್ ತನ್ನ ಬಳಿ 1981-83 ರ ಅವಧಿಯ ಕಬ್ಬಿಣದ ಅದಿರು ಲಭ್ಯವೆಂದು ಅದನ್ನು ಸಾಗಿಸಲು ಅನುಮತಿ ಕೊಡಿಸಬೇಕೆಂದು ನ್ಯಾಯಾಲಯಕ್ಕೆ ತಿಳಿಸಿತು. ಆದರೆ ಜಂತಕಲ್ ಕಂಪನಿಗೆ ಗಣಿ ಗುತ್ತಿಗೆ ಇರಲಿಲ್ಲವಾದ್ದರಿಂದ ಯಾವ ರೀತಿಯಲ್ಲಿ ಅದಕ್ಕೆ 1,17,800 ಮೆಟ್ರಿಕ್ ಟನ್ ಅಷ್ಟು ಮಾಲು ಬಂದಿದೆ ಎಂಬುದರ ಬಗೆಗೆ ಯಾರೂ ಪ್ರಶ್ನಿಸಲಿಲ್ಲ.

ಇದರ ಬಗೆಗೆ ನ್ಯಾಯಾಲಯದಲ್ಲಿ ವಾದವಿವಾದಗಳು ನಡೆದು, ವಿನೋದ್ ಗೋಯಲ್ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ 8094/2008 ಸಲ್ಲಿಸಿದ ನ್ಯಾಯಾಲಯ ವಾದಿಯ ಪರವಾಗಿ ತೀರ್ಪು ನೀಡಿತು. ಇದರ ವಿರುದ್ಧ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯು ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಶೇಷ ಅರ್ಜಿಯನ್ನು ಸಲ್ಲಿಸಿತು.

ಈ ವಿಷಯವು ವಿಚಾರಣೆಗೆ ಬಂದಾಗ ಸರ್ಕಾರಿ ವಕೀಲರು ಚಿತ್ರದುರ್ಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ನೀಡಿದ 18-06-2009 ರ ವರದಿಯನ್ನು ಸಲ್ಲಿಸಿದರು. ಅದರಲ್ಲಿ ಭೌತಿಕವಾಗಿ ಇರುವ ಮಾಲಿನ ಪರಿಮಾಣ 9 ಗುಪ್ಪೆಗಳಾಗಿದ್ದು ಅದು 1,17,800 ಮೆಟ್ರಿಕ್ ಟನ್ ಇದೆ ಎಂದು ಗಣಿ ಮತ್ತು ಭೂಗರ್ಭ ಇಲಾಖೆಯು ಅಂದಾಜು ಮಾಡಿದೆ. ಆದರೆ ಈ ಗಣಿ ಪ್ರದೇಶದಲ್ಲಿ 1985ರಿಂದೀಚೆಗೆ ಯಾವುದೇ ಗಣಿಗಾರಿಕೆಯು ನಡೆದಿಲ್ಲ ಎಂದು ವರದಿಯಲ್ಲಿ ದಾಖಲಿಸಲಾಗಿತ್ತು.

ಅಷ್ಟೇ ಅಲ್ಲ, ಹೀಗೆ ಅದಿರನ್ನು ಸಂಗ್ರಹಿಸಿಟ್ಟದ್ದರಿಂದ ಅರಣ್ಯ ಅಭಿವೃದ್ಧಿ ಆಗಿಲ್ಲ, ಜೊತೆಗೆ ಸಸ್ಯಸಂಪತ್ತು ಮತ್ತು ಸುತ್ತಮುತ್ತಲಿನ ನೀರಿನ ಹಳ್ಳಕೊಳ್ಳಗಳು ಹಾಳಾಗಿವೆ ಎಂದೂ ವರದಿ ಹೇಳಿತ್ತು. ಹಾಗೆಯೇ "ಸುತ್ತಮುತ್ತಲ 12.00 ಹೆಕ್ಟೇರ್‌ನಷ್ಟು ಪ್ರದೇಶ ಹಾನಿಗೊಂಡಿದ್ದು ಅದರ ಮೌಲ್ಯವು ಹೆಕ್ಟೇರ್ ಒಂದಕ್ಕೆ ರೂ. 8.03 ಲಕ್ಷದಂತೆ 12 ಹೆಕ್ಟೇರ್‌ಗಳಿಗೆ ಹಾನಿಯ ಮೊತ್ತವು ರೂ. 96.36 ಲಕ್ಷ. ಪುನಃ ಅರಣ್ಯೀಕರಣಕ್ಕಾಗಿ ಹೆಕ್ಟೇರ್ ಒಂದಕ್ಕೆ ರೂ. 84,000ದಂತೆ 80.94 ಹೆಕ್ಟೇರ್‌ಗಳಿಗೆ ರೂ.

…ಆಗುತ್ತದೆ. ಇದನ್ನು ಅರಣ್ಯ ಇಲಾಖೆಗೆ …ಬೇಕಾಗುತ್ತದೆ" ಎಂದು ವರದಿ ಹೇಳಿತ್ತು.

…ರದ ಇಲಾಖೆಯು ಸಲ್ಲಿಸಿದ ಇಂತಹ …ನ್ನು ಆಧರಿಸಿ ನ್ಯಾಯಾಲಯವು ವಿನೋದ್ …ಪರ ತೀರ್ಪನ್ನು ನೀಡಿತು.

… ಈ ವಿಚಾರದಲ್ಲಿ ಸರ್ಕಾರಿ ಪತ್ರಗಳ …ಖೋಟ ಪತ್ರಗಳು ಮತ್ತು ಕಾನೂನಿನ …ಂದ ಪಾರಾಗಲು ಸರ್ಕಾರಿ ಕಾಗದಪತ್ರಗಳ …ತಗಳ ಕಳ್ಳತನದ ಮೂಲಕ ದಾಖಲೆಗಳ …ಲ್ಲವೂ ನಡೆದಿದ್ದು ಇದನ್ನೆಲ್ಲ …ಯದ ಗಮನಕ್ಕೆ ಸರ್ಕಾರದ ಅಧಿಕಾರಿಗಳು …ಈ ಕೃತ್ಯಗಳಲ್ಲಿ ಸರ್ಕಾರಿ ಅಧಿಕಾರಿಗಳ …ಮತ್ತು ಸಂಚು ಎದ್ದುಕಾಣುತ್ತದೆ. ಸಕ್ಷಮ …ಳಿಂದ ಮುಖ್ಯ ಕಾಗದಪತ್ರಗಳ ಕಡತದ …ದು ಸರ್ಕಾರದ ಪ್ರಧಾನ …ರ್ಶಿಯವರ ಕಾರ್ಯಾಲಯ ಮತ್ತು ಅರಣ್ಯ …ು ಮುಖ್ಯಸ್ಥರ ಕಾರ್ಯಾಲಯದಿಂದ …ವರ ಬಗೆಗೆ ವಿಚಾರಣೆಯು ಅತ್ಯಗತ್ಯವಾಗಿದೆ.

…ನ್ನೆಲ್ಲ ಪರಿಶೀಲಿಸಿದ ಯು.ವಿ.ಸಿಂಗ್ ಕೊನೆಗೆ …ಕ್ರಮಕ್ಕೆ ಶಿಫಾರಸ್ಸು ಮಾಡಿದ್ದಾರೆ.

…ಣಿ ಗುತ್ತಿಗೆಯ ಪತ್ರವೇ ಇಲ್ಲದೆ, …ನ್ನೇ ಮೊದಲು ಮಾಡಿಕೊಳ್ಳದೆ ವಿನೋದ್ …ಗೆ ಎರಡನೇ ಬಾರಿ 23.08.2007ರಲ್ಲಿ … ಮಾಡಿರುವುದು ಕಾಯಿದೆಯ ಉಲ್ಲಂಘನೆ …ಪೂರ್ಣ.

…ನೋದ್ ಗೋಯಲ್ ಒಂದು …ನ್ನು ರಚಿಸಿ, ಗುತ್ತಿಗೆ ಪ್ರದೇಶದಲ್ಲಿ …ರುವ ಅದಿರನ್ನು ತೆಗೆದು ಸಾಗಿಸುವ ಕೆಲಸ …ನೆಪದಲ್ಲಿ ಖೋಟ ದಾಖಲೆಗಳನ್ನು …. ಹಳೆಯ ಗುಪ್ಪೆಗಳನ್ನು ತೆಗೆಯಲು …ಪಡೆಯಲು ಅವರು ರಾಜಕೀಯ ಒತ್ತಡ …ದು ಸ್ಪಷ್ಟವಾಗಿದೆ.

…ಂತಕಲ್ ಎಂಟರ್‌ಪ್ರೈಸಸ್ …93/933 ಅನ್ನು … ಗೋಯಲ್ ಅವರಿಗೆ … ಕೋಟಿಗೆ ಮಾರಲಾಗಿದ್ದು, …ೊತ್ತವನ್ನು ಜಂತಕಲ್ …ಪ್ರೈಸಸ್‌ನ ಸಿಂಡಿಕೇಟ್ …ಬಳ್ಳಾರಿ ಖಾತೆಯಲ್ಲಿ ಜಮಾ …ಗಿದೆ. ಇದು …ಬಾಹಿರವಾದುದರಿಂದ …ರದ್ದು ಮಾಡಿ ರೂ.3.01 …ಹಣವನ್ನು ಸರ್ಕಾರ …ೋಲು ಹಾಕಿಕೊಳ್ಳಬೇಕು.

ಈ ವಿಚಾರದಲ್ಲಿ ಮಾನ್ಯ ಸರ್ವೋಚ್ಚ …ಯದ ಖಾರವಾದ ಟೀಕೆಗಳಿಗೆ ರಾಜ್ಯ … ಉತ್ತರಿಸುವ ಗೋಜಿಗೆ ಹೋಗಿಲ್ಲ. …ಲ್ಲದೆ ವಿನೋದ್ ಗೋಯಲ್, …ೋವಾ ಬಂದರಿನಿಂದ 97693.85 …ಟನ್‌ನಷ್ಟು ಕಬ್ಬಿಣದ ಅದಿರನ್ನು ಟ್ವೆಂಟಿ …ಚುರಿ ವೈರ್ ರಾಡ್ಸ್‌ನ ಮೂಲಕ …ಕ್ಕೆ ರಫ್ತು ಮಾಡಿದ್ದಾರೆ. ಅದರಲ್ಲಿ …ಸ್ ಮೈನ್ಸ್‌ನಿಂದ 2992 ಮೆಟ್ರಿಕ್ ಟನ್ …ಬ್ಬಿಣದ ಅದಿರನ್ನು ನೀಡಿದ್ದು ಉಳಿದ …ನ ಕಬ್ಬಿಣದ ಅದಿರು ಹೇಗೆ ಎಲ್ಲಿಂದ …ಬುದನ್ನು ಪತ್ತೆ ಮಾಡಿ …ಬಾಹಿರವಾದ ಅದಿರಿಗೆ ಅದರ ಬೆಲೆಯಾದ … ಕೋಟಿ ರೂ. ವಸೂಲಿಯ ಜೊತೆಗೆ … ವಿಧಿಸಬೇಕಿದೆ.

… ಜಿ.ಪಿ.ಎ.ದಾರ ವಿನೋದ್ ಗೋಯಲ್ …ಕಾನೂನುಬಾಹಿರ ಅವ್ಯವಹಾರಗಳಲ್ಲಿ …ಗಿರುವುದರಿಂದ ಅವರಿಗೆ ನೀಡಿದ ಗಣಿ …ನ್ನು ರದ್ದು ಮಾಡುವುದು ಅತಿ ಅವಶ್ಯಕ.

… ಅವ್ಯವಹಾರಕ್ಕೆ ಸಹಕರಿಸಿದ ಎಲ್ಲ …ಗಳ ವಿರುದ್ಧ ಕಾನೂನಿನ ಕ್ರಮ …ಬೇಕು.

…ದಕ್ಕೆಲ್ಲ ಸಹಕರಿಸಿದ ಆಗಿನ ಮುಖ್ಯಮಂತ್ರಿ …ಕುಮಾರಸ್ವಾಮಿ ಅವರಿಂದ ರಾಜ್ಯಕ್ಕೆ ನಷ್ಟ …ಅವರ ವಿರುದ್ಧ ಸೂಕ್ತ ಕ್ರಮ …ಳ್ಳುವುದು ರಾಜ್ಯ ಸರ್ಕಾರಕ್ಕೆ ಬಿಟ್ಟ ವಿಷಯ …ಲೋಕಾಯುಕ್ತ ವರದಿ

…ನುಬಾಹಿರವಾಗಿ ಶ್ರೀ ಸಾಯಿ …ೇಶ್ವರ ಮಿನರಲ್ಸ್‌ಗೆ ಗಣಿಗುತ್ತಿಗೆ

… ಎಸ್. ವಿ.ಸಕ್ರೆ, ಮಹಾರಾಷ್ಟ್ರದ ರಾಜ್ಯದ …ಉಪಯೋಗಿ ಇಲಾಖೆಯ ಗುತ್ತಿಗೆದಾರ, ಇವರು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್, ನಂ 6, 3ನೇ ಅಡ್ಡರಸ್ತೆ, ಸುಧಾಮನಗರ, ಬೆಂಗಳೂರು-27 (ಇದೊಂದು ಕಾಲ್ಪನಿಕ ವಿಳಾಸ) ಪರವಾಗಿ ಗಣಿ ಗುತ್ತಿಗೆಯ ಅರ್ಜಿಯನ್ನು 17/4/2006 ರಂದು ಸರ್ಕಾರಕ್ಕೆ ಸಲ್ಲಿಸಿದ್ದ. ಆ ಅರ್ಜಿಯಲ್ಲಿ ಸಂಡೂರು ತಾಲೂಕಿನ ಎನ್.ಇ.ಬಿ ರೇಂಜ್ ಬಳ್ಳಾರಿ ಜಿಲ್ಲೆಯಲ್ಲಿನ 550 ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಅನುಮತಿಯನ್ನು ಕೋರಿದ್ದರು. ಗಮನಿಸಬೇಕಾದ ಸಂಗತಿ ಯಾವುದೆಂದರೆ ಈ ಪ್ರದೇಶದಲ್ಲಿ ಗಣಿ ಗುತ್ತಿಗೆಯನ್ನು ಪಡೆದಿದ್ದ ಚೌಗುಲೆ ಅಂಡ್ ಕೋ ಕಂಪನಿಯವರು ತಮ್ಮ ಈ ಗಣಿ ಗುತ್ತಿಗೆ ಪ್ರದೇಶವನ್ನು ಹಿಂದಿರುಗಿಸಿದ್ದರು. ಮಾತ್ರವಲ್ಲದೆ ಸರ್ಕಾರಿ ಸ್ವಾಮ್ಯದ ವಿಐಎಸ್‌ಎಲ್ ಕಂಪನಿ ಹೊಂದಿರುವ ಪ್ರದೇಶದ ಸುಮಾರು 140 ಹೆಕ್ಟೇರ್‌ನಷ್ಟು ಜಾಗವನ್ನು ಈ ಪ್ರದೇಶ ವ್ಯಾಪಿಸಿದೆ. ಇದಕ್ಕೂ ಮುಂಚೆ ಇದೇ ಜಾಗಕ್ಕೆ ಇನ್ನೂ 29 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ ಸರ್ಕೆ ಸಲ್ಲಿಸಿದ ಅರ್ಜಿ ಕೊನೆಯದು. ತಾನೊಬ್ಬ ಭಾರಿ ಕೈಗಾರಿಕೋದ್ಯಮಿ, ಕಬ್ಬಿಣದ ಅದಿರು ಮತ್ತು ಕಬ್ಬಿಣದ ಕಂಬಿಗಳ ತಯಾರಕನೆಂದು ಸಕ್ರೆ ತನ್ನ ಅರ್ಜಿ[illegible] ಹೇಳಿಕೊಂಡಿದ್ದನು.



ಎಸ್.ವಿ.ಸಕ್ರೆಯವರ ಬದಲಾಗಿ ಸೇರಿಸಲಾಯಿತು.

ಅಂದರೆ ಮೂಲ ಅರ್ಜಿಯಲ್ಲಿಲ್ಲದ ವಿನೋದ್ ಗೋಯಲ್ ಹೆಸರನ್ನು ಮಾಲೀಕರು ಎಂದು ಆಮೇಲೆ ಸೇರಿಸಲಾಗಿದೆ. ಈ ರೀತಿಯ ಹೆಸರನ್ನು ಬದಲಾಯಿಸುವಿಕೆಯು ಸರಕಾರಿ ಅಧಿಕಾರಿಗಳು ಶಾಮೀಲಾಗದೆ ಮಾಡಲಿಕ್ಕೆ ಸಾಧ್ಯವಿಲ್ಲ. ವಿನೋದ ಗೋಯಲ್ ಅವರಿಗೆ ಅನುಕೂಲ ಮಾಡಲು ಎಲ್ಲ ರೀತಿಯ ಬದಲಾವಣೆಗಳನ್ನು ಮಾಡಲಾಗಿತ್ತು.

ಅಧೀನ ಕಾರ್ಯದರ್ಶಿಯವರ ಪತ್ರದನುಸಾರವಾಗಿ ಅಂದಿನ ನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ಸಲ್ಲಿಸಿದರು. ಅದರಲ್ಲಿ ಅರ್ಜಿದಾರರ ಹೆಸರಿನಡಿಯಲ್ಲಿ ಶ್ರೀ ವೆಂಕಟೇಶ್ವರ ಮಿನರಲ್ಸ್ (ಮಾಲೀಕರು - ವಿನೋದ್ ಗೋಯಲ್) ಎಂದು ಬರೆದಿದ್ದು ಇದೊಂದು ಉದ್ದೇಶಪೂರ್ವಕವಾಗಿ ಮಾಡಿದ ಕುಕೃತ್ಯವಾಗಿದೆ. ಎಸ್.ವಿ.ಸಕ್ರೆ ಯವರ ಹೆಸರಿದ್ದ ಮೂಲ ಅರ್ಜಿಯ ಬದಲು ಈ ಅರ್ಜಿಯನ್ನು ಇರಿಸಿದ್ದಾರೆ ಮತ್ತು ಪ್ರಸ್ತಾವನೆಯನ್ನು ವಿನೋದ್ ಗೋಯಲ್ ಅವರಿಗೆ ಅನುಕೂಲವಾಗುವಂತೆ ಈ ರೀತಿ ನಿರ್ದೇಶಕ ತಕ್ಕದಾದುದಲ್ಲವೆಂದು ಅಭಿಪ್ರಾಯಪಟ್ಟಿದ್ದರು.

ಎಸ್.ವಿ.ಸಕ್ರೆ ಅವರ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಕಂಪನಿಯು ಮಹಾರಾಷ್ಟ್ರದಲ್ಲಿ ನೋಂದಣಿಯಾಗದ ಒಂದು ಕಂಪನಿಯಾಗಿತ್ತು.

- ಅವರು ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿಯೂ ವ್ಯಾಟ್ ನೋಂದಣಿ ಪಡೆದಿಲ್ಲ.

- ಎಂ.ಎಸ್.ಟಿ ಮತ್ತು ಕೆ.ಎಸ್.ಟಿ. ನಂಬರ್ ಪಡೆದುಕೊಂಡಿಲ್ಲ.

- ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಪರವಾಗಿ ಯಾವುದೇ ವ್ಯವಹಾರ ವಿಲ್ಲದ ಕಾರಣ ಬ್ಯಾಂಕ್ ಖಾತೆಯನ್ನೂ ತೆಗೆದಿಲ್ಲ.

ಇದೀಗ ಸೋಮನಾಥ್ ವಿ.ಸಕ್ರೆ ಅವರು ತಮ್ಮ ಫರ್ಮ್‌ನ ಹೊಸ ಕಾರ್ಯಾಲಯ ವಿಳಾಸ 6, ಚೌಡಪ್ಪ ರಸ್ತೆ, ಶಾಂತಿನಗರ, ಬೆಂಗಳೂರು ಎಂದು ನೀಡಿರುವರು. ಇದು ಆ ಕಂಪನಿಯ ನೂತನ ಪಾಲುದಾರರಾದ ರಾಜ್‌ಕುಮಾರ್ ಅಗರ್ವಾಲ್ ಅವರ ವಿಳಾಸವೇ ಆಗಿದೆ.

ವ್ಯಾಟ್ ನಂಬರ್ ಇಲ್ಲದ, ಕೆ.ಎಸ್.ಟಿ. ನಂಬರ್ ಹೊಂದಿರದ, ಬ್ಯಾಂಕ್ ಖಾತೆ ಇಲ್ಲದ, ಗಣಿಗಾರಿಕೆ ಮತ್ತು ಕಬ್ಬಿಣದ ಅದಿರಿನ ವ್ಯಾಪಾರದ ವ್ಯವಹಾರವೇ ಗೊತ್ತಿಲ್ಲದ ಇವರಿಗೆ ಅದು ಹೇಗೆ 550 ಎಕರೆಯಷ್ಟು ಗಣಿ ಗುತ್ತಿಗೆಯನ್ನು ನೀಡಲಾಯಿತು ಎಂಬುದೇ ಆಶ್ಚರ್ಯಕರ. ಅಷ್ಟೇ ಅಲ್ಲದೆ, 17/04/2006ರಂದು ಗಣಿ ಗುತ್ತಿಗೆಗೆ ಅರ್ಜಿ ಸಲ್ಲಿಸಿದಾಗ ಎಸ್.ಎಸ್.ವಿ.ಎಂ ಎಂಬ ಫರ್ಮ್ ಅಸ್ತಿತ್ವದಲ್ಲೇ ಇರಲಿಲ್ಲ. ಈ ಕುರಿತು ತನಿಖಾ ತಂಡ ರಾಜ್‌ಕುಮಾರ್ ಅಗರ್ವಾಲ್ ಅವರನ್ನು ಪ್ರಶ್ನಿಸಿದಾಗ ಅವರು ತಾವು ಗಣಿ ಉದ್ಯಮದಲ್ಲಿ ಇಲ್ಲ ಎಂದರು. ಹಾಗೆಯೇ ಸಕ್ರೆ ಅವರನ್ನೂ ವಿಚಾರಣೆಗೆ ಒಳಪಡಿಸಿದಾಗ ಅವರೂ ತಾವು ಮಹಾರಾಷ್ಟ್ರದಲ್ಲಿ ಕಾಂಟ್ರಾಕ್ಟರ್ ಆಗಿದ್ದು ತಮಗೆ ಗಣಿ ಉದ್ಯಮದಲ್ಲಿ ಯಾವ ಅನುಭವವೂ ಇಲ್ಲ ಎಂದಿದ್ದಾರೆ.


ಇದೆಲ್ಲದರಿಂದ ವಿನೋದ್ ಗೋಯಲ್ ಅವರು, ಗಣಿ ಮತ್ತು ಭೂಗರ್ಭ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಮೂಲ ಅರ್ಜಿದಾರ ಎಸ್. ವಿ.ಸಕ್ರೆ ಅವರನ್ನು ಹೊರಹಾಕಿ ಅವರ ಬದಲಿಗೆ ತನ್ನ ಹೆಸರನ್ನು ಹಾಕಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕುಮಾರಸ್ವಾಮಿ ಇದಕ್ಕೆ ಸಹಕರಿಸಿರುವುದು ಈಗ ತನಿಖೆಯಿಂದ ಬೆಳಕಿಗೆ ಬಂದಿದೆ.

ಗಂಗಾರಾಂ ಬಡೇರಿಯಾ, ಬಸಪ್ಪ ರೆಡ್ಡಿ ವಿರುದ್ಧ ಕ್ರಮ ಯಾವಾಗ?



ಬಡೇರಿಯಾ

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯಲ್ಲಿ ಅನೇಕ ಉನ್ನತ ಅಧಿಕಾರಿಗಳ ಹೆಸರುಗಳಿವೆ. ಹಿರಿಯ ಐಎಎಸ್ ಅಧಿಕಾರಿ ಗಂಗಾರಾಂ ಬಡೇರಿಯಾ ಅವರಲ್ಲೊಬ್ಬ. ಹಾಲಿ ಬೆಳಗಾಂನಲ್ಲಿರುವ ಬಡೇರಿಯಾ ಗಣಿ ಮತ್ತು ಭೂವಿಜ್ಞಾನ ಇಲಾಖಾ ಮುಖ್ಯಸ್ಥನಾಗಿದ್ದಾಗ ವಿನೋದ್ ಗೋಯಲ್ ಜೊತೆ ಸೇರಿಕೊಂಡು ಜಂತಕಲ್ ಎಂಟರ್‌ಪ್ರೈಸಸ್ ಕಂಪನಿಗೆ ಕಾನೂನುಬಾಹಿರ ಫೇವರ್‌ಗಳನ್ನು ಮಾಡಿಕೊಟ್ಟಿದ್ದ. ಆಗ ಸಿಎಂ ಆಗಿದ್ದ ಕುಮಾರಸ್ವಾಮಿಗೂ ಕೊಂಚ ದಾರಿ ತಪ್ಪಿಸಿದವನು ಇದೇ ಬಡೇರಿಯಾ. ಗಣಿ ಇಲಾಖೆಯಲ್ಲಿ ಬಡೇರಿಯಾಗೂ ಮುನ್ನ ಇದ್ದ ಡಾ. ಬಸಪ್ಪ ರೆಡ್ಡಿಯೂ 'ಎ ಒನ್' ಖದೀಮನಾಗಿದ್ದ. ಇವರಿಬ್ಬರಲ್ಲದೆ ಐಎಎಸ್‌ಗಳಾದ ಡಾ.ಡಿ.ಎಸ್. ಅಶ್ವತ್ಥ್, ಮಹೇಂದ್ರ ಜೈನ್, ವಿ.ಉಮೇಶ್, ಐ.ಆರ್.ಪೆರುಮಾಳ್ ಹಾಗೂ ಐಪಿಎಸ್ ಆಫೀಸರ್‌ಗಳಾದ ಜೀಜಾ ಹರಿಸಿಂಗ್ ಮುಂತಾದವರ ಮೇಲೂ ಲೋಕಾಯುಕ್ತರು ಆರೋಪ ಮಾಡಿದ್ದಾರೆ. ಆದರೆ ಸರ್ಕಾರ ಇದುವರೆಗೂ ಚಕಾರವೆತ್ತಿಲ್ಲ.



ಸಿಎಂ ಸದಾನಂದ ಗೌಡ ಇದರತ್ತ ಕಣ್ಣುಬಿಟ್ಟು ನೋಡುವುದು ಯಾವಾಗ?

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ಈ ಬಗ್ಗೆ ಬಂದಿದ್ದ ಎಲ್ಲ ಅರ್ಜಿಗಳ ತುಲನಾತ್ಮಕ ವಿವರಣೆ ಪಟ್ಟಿ ಮಾಡಿ ಈ ಗಣಿ ಗುತ್ತಿಗೆಯ ಬಗೆಗೆ ಬಹಳಷ್ಟು ಜನರು ಅರ್ಜಿ ಹಾಕಿರುವುದರಿಂದ ಇದರ ಬಗೆಗೆ ಸರ್ಕಾರದ ಮಟ್ಟದಲ್ಲಿಯೇ ನಿರ್ಧಾರ ಕೈಗೊಳ್ಳಬೇಕೆಂದು ಟಿಪ್ಪಣಿ ಬರೆದರು. ಮುಖ್ಯಮಂತ್ರಿಯ ಕಾರ್ಯಾಲಯದಿಂದ ಬಂದ ಒತ್ತಡದ ಮೇರೆಗೆ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಅವರಿಗೆ ಅತಿ ಆತುರವಾಗಿ ಗಣಿ ಗುತ್ತಿಗೆಯನ್ನು ಅದೇ ದಿನ (5.10.2007) ನೀಡಲಾಯಿತು. ಆದರೆ ಆಗ ಸರ್ಕೆಯ ಎಸ್‌ಎಸ್‌ವಿಎಂ ಕಂಪನಿ ಅಸಲಿಗೆ ನೋಂದಣಿಯೂ ಆಗಿರಲಿಲ್ಲ!



ಯು.ವಿ.ಸಿಂಗ್

550 ಎಕರೆಯಷ್ಟು ಭಾರೀ ವಿಸ್ತೀರ್ಣದ ಅರಣ್ಯ ಪ್ರದೇಶವನ್ನು ನೋಂದಣಿಯಾಗದ, ಗಣಿಗಾರಿಕೆಯಲ್ಲಿ ಮತ್ತು ಕಬ್ಬಿಣದ ಅದಿರಿನ ವ್ಯಾಪಾರದಲ್ಲಿ ಅಷ್ಟಾಗಿ ಅನುಭವ ಹೊಂದಿರದಿದ್ದ, ಪಾರದರ್ಶಕವಲ್ಲದ ರೀತಿಯಲ್ಲಿ ನಿಯಮ ಉಲ್ಲಂಘನೆಮಾಡಿ ಲೈಸೆನ್ಸ್ ನೀಡಿದ ಕ್ರಮ ಇದಾಗಿದೆ.

ಆಗಿನ ಮುಖ್ಯಮಂತ್ರಿಗಳಿಂದ ಅನುಮೋದನೆ ಪಡೆದ ನಂತರ ಅದೇ ದಿನ ಗಣಿ ಮತ್ತು ಭೂಗರ್ಭ ಇಲಾಖೆಯ ನಿರ್ದೇಶಕರಿಗೆ ಇದನ್ನು ಕೂಡಲೇ ಭಾರತ ಸರ್ಕಾರಕ್ಕೆ ಕಳುಹಿಸಬೇಕೆಂದು ಸೂಚಿಸಲಾಯಿತು. ಆ ಪತ್ರದಲ್ಲಿ ಪ್ರಪ್ರಥಮ ಬಾರಿಗೆ ವಿನೋದ ಗೋಯಲ್ ಅವರ ಹೆಸರನ್ನು ಮಾಲೀಕರು, ಎಸ್.ಎಸ್.ವಿ.ಎಂ, ಎಂದು ಗಂಗಾರಾಂ ಬಡೇರಿಯಾ ತಯಾರಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಅದೇದಿನ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕರಡುಪತ್ರವನ್ನು ತಯಾರಿಸಲಾಯಿತು. ಆ ಕರಡುಪತ್ರದ ಮೇಲೆ 'ಇದನ್ನು ಅಂಗೀಕರಿಸಕೂಡದು' ಎಂದು ಷರಾ ಬರೆಯಲಾಗಿದೆ. ಆದರೂ ಇದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿದೆ. ತಾನು ಎಸಗಿರುವ ತಪ್ಪನ್ನು ಮುಚ್ಚಿಹಾಕಲು ಇಲಾಖಾ ನಿರ್ದೇಶಕ ಗಂಗಾರಾಂ ಬಡೇರಿಯಾ ಈ ಷರಾವನ್ನು ಆನಂತರ ಸೇರಿಸಿರಬಹುದು.ಇದು ನಂತರ ವಿವಾದವಾಯಿತು.

ಆಗ ವಿನೋದ್ ಗೋಯಲ್ ರಿಟ್ ಅರ್ಜಿ ಸಂಖ್ಯೆ 22348/2009 ಅನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ. ಇದಕ್ಕೆ ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು (ಗಣಿ ಮತ್ತು ಭೂಗರ್ಭ ಇಲಾಖೆ) ಅವರುಗಳನ್ನು ಪ್ರತಿವಾದಿಗಳಾಗಿ ಮಾಡಲಾಯಿತು. ಆದರೆ ಸರ್ಕಾರದ ಪರವಾಗಿ ಸರಿಯಾಗಿ ವಾದ ಮಾಡದೇ ಇರುವುದು ಸ್ಪಷ್ಟವಾಗುತ್ತದೆ. ರಾಜ್ಯ ಸರ್ಕಾರವು ಈ ಮೊಕದ್ದಮೆಯಲ್ಲಿ ಲಿಖಿತ ಆಕ್ಷೇಪಣೆಗಳನ್ನು ಸಹ ಸಲ್ಲಿಸಿಲ್ಲ. ಸರ್ಕಾರಿ ವಕೀಲರು ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು

ವಿನೋದ್ ಗೋಯಲ್ ಎಂಬ ಖದೀಮ

'ಟ್ವೆಂಟಿಫಸ್ಟ್ ಸೆಂಚುರಿ ವೈರ್ ರಾಡ್ಸ್' ಎಂಬ ವಿಚಿತ್ರ ಹೆಸರಿನ ಕಂಪೆನಿ ಹೊಂದಿರುವ ವಿನೋದ್ ಗೋಯಲ್ ಓರ್ವ ಅನುಮಾನಾಸ್ಪದ ಆಸಾಮಿ. ಮುಂಬೈನ ಜಹೂವಿನಲ್ಲಿ ಇವನದೊಂದು ಆಫೀಸಿದೆ. ಜಗತ್ತಿನ ನಾನಾ ದೇಶಗಳಿಗೆ ತಾನು ಕಬ್ಬಿಣದ ಅದಿರನ್ನು ರಫ್ತು ಮಾಡುತ್ತೇನೆಂದು ಹೇಳಿಕೊಳ್ಳುತ್ತಾನೆ. ಅದು ನಿಜ ಕೂಡ. ಆದರೆ ಇವನು ನಡೆಸುವ ದಂಧೆ ಕಳ್ಳತನದ್ದು.

ಈ ಖದೀಮ ಆಗ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿಗೆ ಅದು ಹೇಗೆ ಗಂಟುಬಿದ್ದನೋ ಗೊತ್ತಿಲ್ಲ. ಏನೇನು ಆಮಿಷ ಒಡ್ಡಿದನೊ ಗೊತ್ತಿಲ್ಲ. ಅಂತೂ ಕುಮಾರಸ್ವಾಮಿ ವಿವೇಚನೆ ಕಳೆದುಕೊಂಡು ಹಿಂದೆಮುಂದೆ ಯೋಚಿಸದೆ ಗೋಯಲ್‌ಗೆ ಇಡೀ ಸರ್ಕಾರಿ ಯಂತ್ರಾಂಗವನ್ನೇ ಅಡವಿಟ್ಟಂತೆ ವರ್ತಿಸಿದ್ದಾರೆ.

ಅದೆಲ್ಲದರ ಪ್ರತಿಫಲವನ್ನೀಗ ಉಣ್ಣಬೇಕಾಗಿ ಬಂದಿದೆ.

ಈ ಹಗರಣದ ಬಗ್ಗೆ ಕೇಳಿದವರಿಗೆ "ಇದೆಲ್ಲ ಐಎಎಸ್ ಅಧಿಕಾರಿ ಗಂಗಾರಾಂ ಬಡೇರಿಯಾ ಮಾಡಿದ್ದು" ಎನ್ನುತ್ತಿದ್ದಾರೆ ಕುಮಾರಸ್ವಾಮಿ.

ಆದರೆ ಕೋರ್ಟು ಅದನ್ನೆಲ್ಲಾ ಕೇಳುವುದಿಲ್ಲ. ಕೇಳಿದರೂ ಗಂಗಾರಾಮ ಬಡೇರಿಯಾನನ್ನು ಬಿಡುವುದಿಲ್ಲ. ಜೊತೆಗೆ ಕುಮಾರಸ್ವಾಮಿಯನ್ನೂ ಬಿಡುವುದಿಲ್ಲ.

ಇವರ ಜೊತೆಗೆ ಖದೀಮ ವಿನೋದ್ ಗೋಯಲ್ ಸಹ ಪಾರಾಗಲಾರ.

ಆಧುನೀಕರಣ, ಜಾಗತೀಕರಣ, ಉದಾರೀಕರಣದ ಈ ಯುಗದಲ್ಲಿ ಮನುಷ್ಯತ್ವ ಕಳಕೊಂಡವರಿಗಿದು ಕ್ಷುಲ್ಲಕ ಬಿಸಿನೆಸ್ ಅನ್ನಿಸಬಹುದು. ಆದರೆ ಭಾರತದ ದರಿದ್ರ ಸ್ಥಿತಿ-ಗತಿ; ಆರೂವರೆ ದಶಕದಿಂದ ದೇಶವನ್ನಾಳುತ್ತಿರುವ ತರಹೇವಾರಿ ಪಕ್ಷಗಳ ಪುಢಾರಿಗಳ ಹೃದಯ ಶೂನ್ಯತೆ-ಭಂಡತನಗಳೆಲ್ಲ ಈ ಶಿಶು ಮಾರಾಟ ಪ್ರಕರಣ ಒಟ್ಟೊಟ್ಟಿಗೆ ಬಿಚ್ಚಿಟ್ಟಿದ್ದೆ.



ಮಂಗಳೂರು ಮಗು ಮಾರಾಟದ ಸುತ್ತ ಬಡತನ ಮತ್ತು ಗತಿಗೇಡಿ ಭಾರತ

ಹೈಟೆಕ್ ನಗರಿ-ಪ್ರಜ್ಞಾವಂತರ ಪ್ರದೇಶ ಮಂಗಳೂರಲ್ಲಿ ಎರಡೇ ಎರಡು ದಿನದ ಹಸುಗೂಸು ಎರಡು ಸಾವಿರ ರೂಪಾಯಿಗೇ ಮಾರಾಟವಾಗಿದೆ! ಮಾರಾಟ ಮಾಡಿದ್ದು ಮತ್ಯಾರೂ ಅಲ್ಲ; ಖುದ್ದು ಹೆತ್ತ ಅಪ್ಪನೇ ಅಮ್ಮನಿಗೆ ಗೊತ್ತಾಗದಂತೆ ಶಿಶುವನ್ನು ಬಿಕರಿ ಮಾಡಿದ್ದಾನೆ! ಈ ಮುಗ್ಧ ಅಪ್ಪಯ್ಯ ಮಗುವನ್ನು ಮಾರಾಟ ಮಾಡಿದ್ದು ಮೋಜು ಮಾಡಲಿಕ್ಕೋ-ಹೆಂಡಕುಡಿಯಲಿಕ್ಕೋ ಹಣ ಹೊಂದಿಸಲಿಕ್ಕೆ ಅಲ್ಲ. ಈ ವ್ಯಾಪಾರದ ಹಿಂದೆ ಮತಾಂತರದಂಥ ಮತಾಂಧರ ಮಸಲತ್ತೂ ಅಡಗಿಲ್ಲ, ಇರುವುದು ರೌರವ ನರಕದಂಥ ಬಡತನದ ಬವಣೆ! ಬದುಕು ಸಾಗಿಸಲಾಗದಂಥ ಭಯಾನಕ ನಿರ್ಗತಿಕತನ!!

ಆಧುನೀಕರಣ, ಜಾಗತೀಕರಣ, ಉದಾರೀಕರಣದ ಈ ಯುಗದಲ್ಲಿ ಮನುಷ್ಯತ್ವ ಕಳಕೊಂಡವರಿಗಿದು ಕ್ಷುಲ್ಲಕ ಬಿಸಿನೆಸ್ ಅನ್ನಿಸಬಹುದು. ಆದರೆ ಭಾರತದ ದರಿದ್ರ ಸ್ಥಿತಿ-ಗತಿ; ಆರೂವರೆ ದಶಕದಿಂದ ದೇಶವನ್ನಾಳುತ್ತಿರುವ ತರಹೇವಾರಿ ಪಕ್ಷಗಳ ಪುಢಾರಿಗಳ ಹೃದಯ ಶೂನ್ಯತೆ-ಭಂಡತನಗಳೆಲ್ಲ ಈ ಶಿಶು ಮಾರಾಟ ಪ್ರಕರಣ ಒಟ್ಟೊಟ್ಟಿಗೆ ಬಿಚ್ಚಿಟ್ಟಿದ್ದೆ. ಮಗುವನ್ನು ಅಪ್ಪನೇ ಕಾಸಿಗೆ ಕೊಟ್ಟು ಕೈತೊಳೆದುಕೊಳ್ಳುವುದು ಅಮಾನವೀಯತೆ ಅನ್ನಿಸಿದರೂ ಬಡತನದ ಘೋರ ಹಿಂಸೆ ಮನುಷ್ಯನನ್ನು ಎಂಥ ವಿವೇಚನಾರಹಿತ ಕೃತ್ಯಕ್ಕೆ ನೂಕುತ್ತದೆಂಬುದಕ್ಕೆ ಸಾಕ್ಷಿಯಂತಿದೆ...

ಹಾಸನದ ಬಾಣಾವರ ಬಳಿಯ ಎಂಟಿಸಿಂಗಟಿ ಕರೆ ಎಂಬಲ್ಲಿಯ ಕಲಂದರ್ ಯಾನೆ ರವಿ ಮತ್ತವನ ಮಡದಿ ಲಕ್ಷ್ಮಿ ತಮ್ಮ ಎರಡೂವರೆ ವರ್ಷದ ಮಗನೊಂದಿಗೆ ಹೊಟ್ಟೆಪಾಡಿನ ಕೆಲಸ ಅರಸುತ್ತಾ ಮಾಯಾನಗರಿ ಮಂಗಳೂರಿಗೆ ಬಂದಿದ್ದಾರೆ. ಮೂರು ತಿಂಗಳಿಂದ ಬೆಲಿಗ್ರೆ ಎಂಬ ದ್ವೀಪದಲ್ಲಿ ಪ್ಲಾಸ್ಟಿಕ್ ಹಾಳೆಯ ಟೆಂಟ್‌ಅನ್ನು ಈ ದಂಪತಿಗಳು ಹಾಕಿಕೊಂಡಿದ್ದರು. ಅಲ್ಲಿ ಇವರಿಗೆ ತುತ್ತಿನ ಚೀಲ ತುಂಬಿಕೊಳ್ಳಲಾಗಲಿಲ್ಲ, ಆಗ ದಡದೀಚೆಯ ಮಂಗಳೂರಿಗೆ ಬಂದರು. ಕೆಲದಿನಗಳಿಂದ ಮಾರ್ಗನ್ಸ್ ಗೇಟ್ ಬಳಿಯ ಅಣ್ಣಾಚಿ ಮೈದಾನದಲ್ಲಿ ತಂಬುಹಾಕಿಕೊಂಡಿದ್ದರು. ಇಲ್ಲಿ ಅವರಿಗೆ ಕಟ್ಟಡ ಕಟ್ಟುವ ಕೂಲಿನಾಲಿ ಸಿಕ್ಕಿತ್ತು. ಮಂಗಳೂರಲ್ಲಿ ತಲೆ ಎತ್ತುತ್ತಿರುವ ಲ್ಯಾಂಡ್‌ಮಾಫಿಯಾದ ರಕ್ಕಸ ಬಿಲ್ಡಿಂಗ್ ಕೆಲಸಕ್ಕೆಂದು ಉತ್ತರ ಕರ್ನಾಟಕ-ಹಾಸನ ಕಡೆಯಿಂದ ವಲಸೆ ಬಂದ ಬಡವರ ದಂಡೇ ಇದೆ!

ಈ ಕಲಂದರ್-ಲಕ್ಷ್ಮಿಯರ ಬದುಕೇ ದೊಡ್ಡ ದುರಂತ! ಲಕ್ಷ್ಮಿಯ ತಾಯಿ ಹಿಂದೂ; ತಂದೆ ಮುಸ್ಲಿಂ. ಇವರ ದೊಂಥರಾ ಬಾಲ್ಯ ವಿವಾಹ! ದೊಡ್ಡವರಾದಾಗ ಮತ್ತೆ ಮದುವೆ ಹಿರಿಯರೇ ಮಾಡಿದ್ದಾರೆ. ಲಕ್ಷ್ಮಿಯ ತಂಗಿಯನ್ನು ಕಲಂದರ್‌ನ ತಮ್ಮನೇ ಮದುವೆಯಾಗಿದ್ದಾನೆ. ಲಕ್ಷ್ಮಿಗೆ ಈಗ ಬರೀ 18 ವರ್ಷ. ಕಲಂದರ್‌ಗೆ 20 ವರ್ಷ ಅಷ್ಟೆ. ಊರಲ್ಲಿದ್ದ ಆಸ್ತಿಯೆಂದರೆ ಒಂದು ಹರಕುಮುರುಕು ಮನೆ. ಆ ಮನೆಯೂ ತೀರಾ ಈಚೆಗೆ ಮುರಿದುಬಿದ್ದುಹೋಗಿದೆ. ಆಗವರಿಗೆ ನಿಲ್ಲಲೂ ನೆಲೆ ಇಲ್ಲದಾಯ್ತು. ಮೊದಲೇ ಕಿತ್ತು ತಿನ್ನುವ ಬಡತನ. ಕಂಕುಳಲ್ಲಿ ಎರಡು ವರ್ಷದ ಮಗ ಬೇರೆಯಿದ್ದ.

ಹೀಗಾಗಿ ಮಂಗಳೂರಲ್ಲಿ ಕಟ್ಟಡ ಕೆಲಸದ ಕೂಲಿ ಸಿಗುವ ಭರವಸೆಯಿಂದ ಬಂದಿದ್ದರು. ಬರುವಾಗಲೇ ಲಕ್ಷ್ಮೀ ಮತ್ತೆ ಆರು ತಿಂಗಳ ಗರ್ಭಿಣಿ ಆಗಿದ್ದಳು. ಇರುವ ಮ[...] ಬೆಳೆಸುವುದೇ ದುಸ್ತರವಾಗಿರುವಾಗ ಇನ್ನೊಂದರ ಆ[...] ಸನ್ನಿಹಿತವಾಗಿತ್ತು, ಒಂದೆಡೆ ಕಡುಬಡತನ; ಇನ್ನೊ[...] ಅಜ್ಞಾನ. ಈ ದಂಪತಿಗಳ ಗೋಳು ಹೇಳತೀರದು. ದುರ್ದಿನಗಳಲ್ಲೇ ಲಕ್ಷ್ಮಿ ಇನ್ನೊಂದು ಹೆರಿಗೆಗೆ ಅಣಿ[...]ದ್ದಳು. ಕಳೆದ 24.8.11ರಂದು ಲಕ್ಷ್ಮಿ ಗಂಡು ಮ[...] ಜನ್ಮ ನೀಡಿದ್ದಾಳೆ. ಅತ್ತ ಲಕ್ಷ್ಮಿ ತನ್ನ ಟೆಂಟ್‌ನಲ್ಲಿ [...] ನೋವಿನಿಂದ ಒದ್ದಾಡುತ್ತಿದ್ದರೆ, ಇತ್ತ ಕಲಂದರ್ ಮ[...] ಮಗು ಮಾರಲು ಗಿರಾಕಿ ಹುಡುಕುತ್ತಿದ್ದ ಮಗು ಸಾಕ[...] ಅಸಾಧ್ಯ; ಜತೆಗೆ ಆ ಮಗು ಮಾರಿದರೆ ಬರುವ ಒಂ[...] ಪುಡಿಕಾಸಿಂದ ಕೆಲ ದಿನವಾದರೂ ಜ[...]ದೂಡಬಹುದೆಂಬ ಅಮಾಯಕ ಆಸೆ-ನಿರೀಕ್ಷೆ!!


ಅಂತೂ ಟೆಂಟ್ ಹತ್ತಿರದವನೇ ಆದ ಬೋ[...] ಅನ್ವರ್ ಎಂಬಾತನ ಜತೆ ಕಲಂದರ್‌ನ ವ್ಯಾಪಾರ ಕುದ[...] ಮದುವೆಯಾಗಿ 14 ವರ್ಷವಾದರೂ ಮಕ್ಕಳಿಲ್ಲದ ಕೊ[...] ಈ ಅನ್ವರ್‌ಗೆ ಮಗುವೊಂದು ಸಿಗುತ್ತದೆಂದಾಗ [...]ಯಾಗಿದೆ. ಚೌಕಾಸಿ ನಡೆದಿದೆ. ಕೊನೆಗೆ ಎರಡು ಸಾ[...] ಮಗು ಬಿಕರಿ ವಹಿವಾಟು ಮುಗಿದಿದೆ. ಹಣ [...]ತಡ, ಕಲಂದರ್ ಡೇರೆಗೆ ಬಂದು ಹೆಂಡತಿಗೆ ಗೊತ್ತಾ[...] ಎರಡು ದಿನದ ಶಿಶುವನ್ನು ಎತ್ತಿಕೊಂಡು ಅ[...] ಬಳಿಗೋಡಿದ್ದಾನೆ. ಮಗು ಮಾರಿ ಬಂದು [...] ಗೊತ್ತಿಲ್ಲದಂತೆ ಹೆಂಡತಿ ಎದುರು ನಟಿಸಿದ್ದಾನೆ.

ಆದರೆ ಲಕ್ಷ್ಮಿ ಕರುಳಕುಡಿ ಕಾಣದಿದ್ದಾಗ ಕಂಗಾಲಾ[...] ಅತ್ತೂ ಕರೆದು ನರಳಿದ್ದಾಳೆ. ಆಕೆಯ ವೇದನೆ-ರೋ[...] ಆಚೀಚೆಯವರು ಬಂದಿದ್ದಾರೆ. ಯಾರೋ ಪೊಲೀಸ[...] ಮಗು ಕಾಣೆಯಾದ ಬಗ್ಗೆ ದೂರಿದ್ದಾರೆ. ಕಲಂ[...] ಅನ್ವರ್ ಜತೆ ಮಗು ವ್ಯಾಪಾರ ಮಾಡಿದ್ದು ಅ[...] ಮೈದಾನದಲ್ಲಿ ಆಡುತ್ತಿದ್ದ ಮಕ್ಕಳು ಕಂಡಿದ್ದರು[...] ಮೈದಾನದ ಎದುರೇ ಮೂರು ತಿಂಗಳಿಂದ [...] ಹಾಕಿಕೊಂಡಿದ್ದ ಕಲಂದರ್-ಲಕ್ಷ್ಮಿ ಪರಿಚಯ ಆ ಮಕ್ಕ[...] ಹೀಗಾಗಿ ತಾಯಿ ಮಗ್ಗುಲಲ್ಲಿದ್ದ ಮಗುವನ್ನು ಕದ್ದು ಮ[...] ಸ್ವಂತ ತಂದೆ ಕಲಂದರನೇ ಎಂಬುದು ಪೊಲೀಸ[...] ಅಕ್ಕಪಕ್ಕದವರಿಗೆಲ್ಲ ಖಾತ್ರಿಯಾಗಿ ಹೋಯ್ತು!

ಈಗ ಪೊಲೀಸರು ಅನ್ವರ್‌ನಿಂದ ಶಿಶುವನ್ನು [...] ತಾಯಿಯ ಮಡಿಲು ಸೇರಿಸಿದ್ದಾರೆ. ಮಗು ಮ[...]


ಬಾಗಲಕೋಟೆ : ಲೋಕಾಯುಕ್ತದಲ್ಲೇ ಲಫಂಗ ಅಧಿಕಾರಿಗಳು

ಭ್ರಷ್ಟ ಪೋಲೀಸಪ್ಪ ಚೌಧರಿ ಬಚಾವಾದದ್ದು ಹೇಗೆ?




ಲೋಕಾಯುಕ್ತ ಸಂಸ್ಥೆಯ ಕೆಲ ಖದೀಮರ ಅಂದಾದುಂದಿ ಪುರಾಣ ಆರಂಭವಾಗುವುದು ಕಡುಭ್ರಷ್ಟ ಸಬ್‌ಇನ್ಸ್‌ಪೆಕ್ಟರ್ ಕಂ ಖಾದಿ ಖದೀಮರ ಚೇಲಾ ಆರ್.ಎಸ್. ಚೌಧರಿಯಿಂದ. ಮುಧೋಳದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಚೌಧರಿಯ ಪುಣ್ಯಕಾರ್ಯಗಳನ್ನೆಲ್ಲ 'ಪತ್ರಿಕೆ' ಇಂಚಿಂಚಾಗಿ ವರದಿ ಮಾಡಿತ್ತು, ಅಲ್ಲಿನ ಸಕಲ ದಂಧೆಗಳೊಂದಿಗೂ ಹತ್ತಿರದ ನೆಂಟಸ್ತನ ಹೊಂದಿದ್ದ ಚೌಧರಿ ಹೊಟ್ಟೆಬಿರಿಯೆ ಉಂಡು ಪಕ್ಕದ ಊರಾದ ಲೋಕಾಪುರಕ್ಕೆ ಅಮರಿಕೊಂಡಿದ್ದರ ಮರ್ಮವನ್ನೂ ಬಿಡಿಸಿಬಿಟ್ಟಿತ್ತು. ಹುಟ್ಟಾ ಭ್ರಷ್ಟನಾದ ಈತ ಲೋಕಾಪುರದಲ್ಲಿ ಡೀಲಿಂಗ್ ದಂಧೆಯನ್ನೇ ಮುಂದುವರೆಸುತ್ತಾನೆಂಬುದನ್ನೂ ನಿಖರವಾಗಿ ಹೇಳಲಾಗಿತ್ತು, ಅದೀಗ ಅಕ್ಷರಶಃ ನಿಜವಾಗಿದೆ.


ಸಂತೋಷ್ ಹೆಗ್ಡೆಯವರ ನಿಷ್ಠುರ ಕ್ರಮಗಳಿಂದಾಗಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಸರ್ವವ್ಯಾಪಿ ಮನ್ನಣೆ ಗಳಿಸಿದೆ. ಆದರೆ ಭ್ರಷ್ಟಾಚಾರದ ವಿರುದ್ಧ ಬಡಿದಾಡಲೆಂದೇ




ಮೋಹಾಂತಿ




ಸಿದ್ದಲಿಂಗಣ್ಣನವರ್




ಶಂಕರ್ ನಾಯಕ್



ಸುರೇಶ್ ರೆಡ್ಡಿ



ಕಾರಜೋಳ



ಶಿವರಾಜ್ ಪಾಟೀಲ್

ಜನ್ಮವೆತ್ತಿದ ಈ ಸಂಸ್ಥೆಯೊಳಗೆ ಕೆಲ ಭ್ರಷ್ಟ ಅಧಿಕಾರಿಗಳಿರುವುದು ಅರಗಿಸಿಕೊಳ್ಳಲೇಬೇಕಾದ ಕಟುಸತ್ಯ. ಈ ಹಲಾಲುಕೋರರು ಆಂತರಿಕ ಗೌಪ್ಯ ವಿಚಾರಗಳನ್ನೆಲ್ಲ ಭ್ರಷ್ಟರಿಗೆ ತಲುಪಿಸಿ ತನಿಖೆಯ ಹಾದಿಯನ್ನೇ ದಿಕ್ಕೆಡಿಸುತ್ತಿದ್ದಾರೆ. ಎಂಜಲು ಕಾಸಿಗೆ ಬಾಯಗಲಿಸಿ ಲೋಕಾಯುಕ್ತದ ಪಾವಿತ್ರ್ಯವನ್ನೇ ಹಾಳು ಗೆಡವುತ್ತಿದ್ದಾರೆ. ಲೋಕಾಯುಕ್ತದೊಳಗಿರುವ ಇಂಥಾ ದುಷ್ಟ ಜಂತುಗಳು ಬಾಗಲಕೋಟೆ ಜಿಲ್ಲೆಯಲ್ಲಿ ವಿರಾಟ್ ರೂಪ ಪ್ರದರ್ಶಿಸಿವೆ.

ಲೋಕಾಯುಕ್ತ ಸಂಸ್ಥೆಯ ಕೆಲ ಖದೀಮರ ಅಂದಾದುಂದಿ ಪುರಾಣ ಆರಂಭವಾಗುವುದು ಕಡುಭ್ರಷ್ಟ ಸಬ್‌ಇನ್ಸ್‌ಪೆಕ್ಟರ್ ಕಂ ಖಾದಿ ಖದೀಮರ ಚೇಲಾ ಆರ್.ಎಸ್. ಚೌಧರಿಯಿಂದ. ಮುಧೋಳದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಚೌಧರಿಯ ಪುಣ್ಯಕಾರ್ಯಗಳನ್ನೆಲ್ಲ 'ಪತ್ರಿಕೆ' ಇಂಚಿಂಚಾಗಿ ವರದಿ ಮಾಡಿತ್ತು, ಅಲ್ಲಿನ ಸಕಲ ದಂಧೆಗಳೊಂದಿಗೂ ಹತ್ತಿರದ ನೆಂಟಸ್ತನ ಹೊಂದಿದ್ದ ಚೌಧರಿ ಹೊಟ್ಟೆಬಿರಿಯೆ ಉಂಡು ಪಕ್ಕದ ಊರಾದ ಲೋಕಾಪುರಕ್ಕೆ ಅಮರಿಕೊಂಡಿದ್ದರ ಮರ್ಮವನ್ನೂ ಬಿಡಿಸಿಬಿಟ್ಟಿತ್ತು, ಹುಟ್ಟಾ ಭ್ರಷ್ಟನಾದ ಈತ ಲೋಕಾಪುರದಲ್ಲಿ ಡೀಲಿಂಗ್ ದಂಧೆಯನ್ನೇ ಮುಂದುವರೆಸುತ್ತಾನೆಂಬುದನ್ನೂ ನಿಖರವಾಗಿ ಹೇಳಲಾಗಿತ್ತು, ಅದೀಗ ಅಕ್ಷರಶಃ ನಿಜವಾಗಿದೆ.

ಲೋಕಾಪುರ ಠಾಣೆಗೆ ಬಂದು ಚಾರ್ಜ್ ತೆಗೆದುಕೊಂಡ ಚೌಧರಿ ಎಲ್ಲಿಂದ ಕಮಾಯಿ ಬರುತ್ತದೆಂಬ ತಲಾಷಿನ ಮೂಲಕವೇ 'ಕರ್ತವ್ಯ' ಆರಂಭಿಸಿದ್ದ ಕೆಲವೇ ಕೆಲ ದಿನಗಳಲ್ಲಿ ಈತನಿಗೆ ಒಂದೇ ಏಟಿಗೆ ಲಕ್ಷಾಂತರ ರೂಪಾಯಿ ಎಣಿಸುವ ಸೌಭಾಗ್ಯವೊಂದು ಸಿಕ್ಕಿತು. ಆದರೆ ಈತನ ಕೈಗೆ ಸಿಕ್ಕಿ ನರಳಬೇಕಿದ್ದ ಮಿಕ ಬುದ್ಧಿ ಉಪಯೋಗಿಸಿ ಲೋಕಾಯುಕ್ತರಿಗೆ ವಿಷಯ ಮುಟ್ಟಿಸಿತು. ಲೋಕಾಯುಕ್ತ ಡಿವೈಎಸ್ಪಿ ಸಿದ್ದಲಿಂಗಣ್ಣವರ ಅಖಂಡ ಒಂದೂಮುಕ್ಕಾಲು ಲಕ್ಷದ ಸಮೇತ ಚೌಧರಿಯನ್ನು ರೆಡ್‌ಹ್ಯಾಂಡಾಗಿ ಹಿಡಿದಿದ್ದರು. ಆದರೆ ಚೌಧರಿ ಕೂದಲೂ ಕೊಂಕದಂತೆ ಬಚಾವಾಗಿಬಿಟ್ಟ. ಈ ಪವಾಡ ಜರುಗಿದ್ದು ಹೇಗೆಂದು ಹುಡುಕುತ್ತಾ ಸಾಗಿದರೆ ಲೋಕಾಯುಕ್ತದಲ್ಲೇ ಇರುವ ಭ್ರಷ್ಟ ಅಧಿಕಾರಿಗಳ ಜಾತಕ, ಅಸಹ್ಯ ಹುಟ್ಟಿಸುವ ಜಾತಿ ಲಾಬಿ, ರಾಜಕಾರಣಿಗಳೆನ್ನಿಸಿಕೊಂಡವರ ಹಲಾಲುಕೋರತನಗಳೆಲ್ಲ ಪದರು ಪದರಾಗಿ ಬಯಲಾಗುತ್ತವೆ.

ಸದರಿ ಪ್ರಕರಣವನ್ನು ಮೂಲದಿಂದಲೇ ವಿವರಿಸುವುದೊಳಿತು. ಲೋಕಾಪುರದಲ್ಲಿರುವ ಸಾಲುಸಾಲು ಸಿಮೆಂಟ್ ಫ್ಯಾಕ್ಟರಿಗಳಲ್ಲಿ ಜೆ.ಕೆ.ಸಿಮೆಂಟ್ ಫ[...] ಪ್ರಮುಖವಾದದ್ದು. ಇದರೊಂದಿಗೆ ವ್ಯವಹಾರ[...] ಕೊಂಡಿರುವವರಲ್ಲಿ ಉದಪುಡಿ ಎಂಬಾತ ಮುಖ್ಯ ಆ[...] ಮುಧೋಳ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷನೂ ಆ[...] ಉದಪುಡಿ ಗೋವಿಂದ ಕಾರಜೋಳನ ನಂಬಿಕಸ್ಥ[...] ಈತ ನಡೆಸುವ ತರಹೇವಾರಿ ದಂಧೆಗಳಲ್ಲಿ ಸಿ[...] ಫ್ಯಾಕ್ಟರಿಗಳಿಗೆ ಸುಣ್ಣ ಕಲ್ಲು ಪೂರೈಸುವುದೂ [...] ಇಂಥವನ ಖಾಸಾ ಸ್ನೇಹಿತ ಬಸವರಾಜ್ ಗೋ[...] ಈತ ಕಳ್ಳಮಾಲುಗಳ ಕಾಯಂ ಖರೀದಿದಾರನೂ [...]

ಈ ಬಸವರಾಜ್ ಗೋಕಾವಿ ಮೊನ್ನೆಯೂ [...] ಸಿಮೆಂಟ್ ಫ್ಯಾಕ್ಟರಿಯಿಂದ ಒಂದು ಲೋಡ್ ಸಿ[...] ಖರೀದಿಸಿದ್ದ. ಅದು ಕದ್ದ ಮಾಲು. ಆದರೆ [...] ವ್ಯವಹಾರಸ್ಥನಾದ ಬಸವರಾಜನಿಗೆ ಕದ್ದದ್ದಾದರೂ [...] ಮುಂಡಾಯಿಸಿದ್ದಾದರೂ ಸರಿ; ಕಡಿಮೆ ಬೆಲೆಗೆ [...] ಸಿಕ್ಕರೆ ಸಾಕು. ಹಾಗೆಯೇ ಸಿಕ್ಕ ಭರ್ತಿ ಒಂದು ಲ[...] ಸಿಮೆಂಟ್ ಅನ್ನು ತನ್ನ ಗೋಡೌನ್‌ಗೆ ಇಳಿಸಿಕೊಂಡ[...] ಆ ಸಿಮೆಮಟ್‌ನ ನಿಜವಾದ ಖರೀದಿದಾರ ತನಗೆ ಸಿ[...] ಬಂದಿಲ್ಲ ಅಂತ ಜೆ.ಕೆ. ಫ್ಯಾಕ್ಟರಿಗೆ ಫೋನ[...] ದಬಾಯಿಸಿದ್ದಾನೆ. ತಬ್ಬಿಬ್ಬಾದ ಮ್ಯಾನೇಜರ್, [...] ಮುಖ್ಯಸ್ಥರಿಗೆ ಗೊತ್ತಾದರೆ ಕೆಲಸ ಹೋಗುವ ಭ[...] ಪಿಎಸ್‌ಐ ಚೌಧರಿಗೆ ದೂರು ನೀಡಿದ್ದಾನೆ.

ಹೊಟ್ಟೆಗಿಲ್ಲದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ [...] ಭೋಜನ ಪ್ರತ್ಯಕ್ಷವಾದಂತೆ [...] ಆದ ಚೌಧರಿ ರಣವೇಗದಲ್ಲಿ [...] ಮಾಡಿ ಮುಗಿಸಿದ. ಜೆ.ಕೆ.ಫ್ಯಾಕ್ಟರಿ[...] ಹೊರಟ ಸಿಮೆಂಟ್‌ಲೆ[...] ಬಸವರಾಜ ಗೋಕಾವಿಯ ಗೋ[...] ತಲುಪಿರುವುದು ಪಕ್ಕಾ [...] ತಡಮಾಡದೆ ಡೀಲ್‌ಗಿಳಿದ [...] ಬಸವರಾಜನನ್ನು ಸಂಪರ್ಕಿಸಿದ್ದಾ[...] ಸಾಹೇಬ್ರ ಶಿಷ್ಯ ಉದಪುಡಿ ದೊ[...] ಗೊತ್ತದ. ಹೆದರಬ್ಯಾಡ. ಮು[...] ಇನ್ಸ್‌ಪೆಕ್ಟರ್ ಸುರೇಶ್ ರೆಡ್ಡಿ ಹ[...] ಕುಂತು ಮಾತಾಡೋಣಾ' ಅಂದಿದ್ದಾನೆ. ಇನ್[...] ಪ್ರಮುಖ ಅಂಶವೆಂದರೆ, ಉದಪುಡಿಯ ಖಾಸಾ ಸ[...] ಮಂಜುನಾಥ ಎಂಬಾತನೇ ಸಿಮೆಂಟು ಕದ್ದು ಮ[...] ದಂಧೆಯ ಕಿಂಗ್‌ಪಿನ್. ಇವನ ಮೂಲಕವೇ ಬಸವ[...] ಸಿಮೆಂಟ್ ಲೋಡ್ ಅನ್ನು ಖರೀದಿಸಿದ್ದ. [...] ತಗುಲಿಕೊಂಡರೆ ಕಾರಜೋಳನ ಇಡೀ ಗ[...] ಜೈಲುಪಾಲಾಗುತ್ತಿತ್ತು. ಆದುದರಿಂದಲೇ ಪ[...] ಮುಚ್ಚಿಹಾಕುವ ಎಲ್ಲಾ ತಯಾರಿಯೂ ಭರ್ಜರಿ[...]

...ದಿ ಅಪರಾಧವೆಂಬ ಕಾನೂನಿನ ಅರಿವಿಲ್ಲದ ...ರ್‌ನನ್ನು ಬಾಧಿಸಿದ್ದು ಭಯಂಕರ ಬಡತನ ಒಂದೇ. ...ಣು ಅನ್ವರ್‌ನನ್ನು ಬಂಧಿಸಿದರೆ, ಕಲಂದರ್ ಖಾಕಿಗಳ ...ವನೇ ಕಂಗೆಟ್ಟು ತಲೆ ಮರೆಸಿಕೊಂಡಿದ್ದಾನೆ. ಬಡತನ ...ನ ವಿವೇಚನಾರಹಿತ ದುಡುಕುತನ, ಕಾನೂನಿನ ...ಟಕೆ-ಅಸಹಾಯಕತೆ ಮತ್ತು ಮಗು ಕಣ್ಮರೆಗಳಿಂದ ...'ಹಾಕ್' ಆಗಿದ್ದಾಳೆ. ಆಕೆಯೀಗ ಲೇಡಿ ಗೋಶನ್ ...ಯಲ್ಲಿ ಗಂಡನ ಬರುವಿಗಾಗಿ ಕಾದಿದ್ದಾಳೆ.

...ದು ಪರದೆ ಮೇಲಿನ ಕತೆ. ತೆರೆಯ ಹಿಂದಿನ ...ದ ದುರಂತ ಇನ್ನೂ ಘೋರ! ದೇಶಕ್ಕೆ ಸ್ವಾತಂತ್ರ್ಯ ...ಗಳಿಗೆಯಿಂದ ಇವತ್ತಿನವರೆಗೆ ಬಡವರ ಉದ್ಧಾರದ ...ಆಳುವವರು, ಅವರ ಸಲಹೆಗಾರ ಪರ್ಯಾವರಣ ...ತರು, ಸಮಾಜೋ-ಆರ್ಥಿಕ ತಜ್ಞರು ಉದ್ದುದ್ದ ...ನ-ಭಾಷಣ ಬಿತ್ತರಿಸುತ್ತಲೇ ಇದ್ದಾರೆ. ಗ್ರಾಮೀಣ ...ರು, ಬಾಣಂತಿಯರು, ನಿರುದ್ಯೋಗಿಗಳ ಏಳ್ಗೆ ಹೆಸರಲ್ಲಿ ... ಮತ್ತು ಕೇಂದ್ರ ಸರ್ಕಾರ ತರತರದ ಯೋಜನೆ ...ಷಿಸಿದೆ. ಆದರೆ ಇಂಥ ಬೋಗಸ್ ಯೋಜನೆಗಳಿಂದ ...ದರ್-ಲಕ್ಷ್ಮಿಯಂಥವರ ಅಸಹಾಯಕ ಕುಟುಂಬಗಳಿಗೆ ... ಪ್ರಯೋಜನವಾಗಿಲ್ಲ; ಪುಢಾರಿಗಳ-ಪಂಡಿತರ ಪ್ರತಿಷ್ಠೆ ...ದಿಯೇ ಹೊರತು ಬಡವರಿಗೆ ಉಪಕಾರವೇನಾಗಿಲ್ಲ!

...ಡಕುಟುಂಬದ ಹೆಣ್ಣುಮಕ್ಕಳ ಮಾರಾಟ ರಾಜ್ಯದಲ್ಲಿ ...ಯುತ್ತಿದೆ. ಬಡತನದ ಚಿತ್ರಹಿಂಸೆ ತಾಳಲಾಗದೆ ...ಗಿ, ಹುಟ್ಟಿದ ಮಗುವಿನ ಭವಿಷ್ಯಕ್ಕಾಗಿ ನಿರ್ಗತಿಕ ...ಮ ಮಾರಾಟ ಮಾಡುತ್ತಿದ್ದಾರೆ. ಉತ್ತರ ಕನ್ನಡದಲ್ಲೂ ... ಇಂಥ ಮಾರಾಟ ಪ್ರಕರಣ ನಡೆದಿದೆ. ಇದು ...ಕ್ಕಾಗಿ ಮಾಡಿದ ದಂಧೆ. ಮಕ್ಕಳ ಮಾರಾಟ ...ನುಬಾಹಿರವಾದರೂ ಇದೆಲ್ಲ ಸರ್ಕಾರಿ ಅಧಿಕಾರಿಗಳಿಗೆ ...ಬಾಸ್ ಮಂತ್ರಿಮಾನ್ಯರಿಗೆ ಗೊತ್ತಾಗದು; ಗೊತ್ತಾದರೂ ...ಜೊಣಗೇಡಿಗಳು ತಲೆ ಕೆಡಿಸಿಕೊಳ್ಳುವುದೂ ಇಲ್ಲ. ... ಸಿದ್ಧಾಂತ'ದ ಈ ಸಮಾಜವೂ ಮಾಮೂಲಿ ಘಟನೆ ...ಖಿತ ತಾತ್ಸಾರ ಪ್ರದರ್ಶಿಸುತ್ತಿದೆ.

...ಈ ದೇಶದಲ್ಲಿ ಬಡವರ ಉದ್ಧಾರಕ್ಕೆ ಬರುವ ಯೋಜನೆ ...ಸರಿಯಾಗಿ ಜಾರಿಗೆ ಬರುವುದೇ ಇಲ್ಲ, ಬಡವರಿಗೆ ...ಯೋಜನೆಗಳ ಪರಿಚಯವೇ ಇರುವುದಿಲ್ಲ, ಯೋಜ...ಫಲ ಪಡೆಯಲು ಬಡವರು-ಅಶಿಕ್ಷಿತರು ಪರದಾಡುವ ಪರಿಸ್ಥಿತಿ ಇದೆ. ಅಧಿಕಾರಿಗಳು-ನೌಕರರು ಯೋಜನೆಯ ಲಾಭ ಪಡೆಯಲು ಬರುವವರನ್ನು ಸತಾಯಿಸುವುದು ಬಡತನಕ್ಕಿಂತಲೂ ಯಾತನಾಮಯವಾಗಿರುತ್ತದೆ. ಕೇಂದ್ರ ಸರ್ಕಾರ ಗ್ರಾಮೀಣ ಬಡವರು ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲೆಂದೇ ಉದ್ಯೋಗ ಖಾತರಿ ಯೋಜನೆ ಘೋಷಿಸಿದೆ. ಆದರೆ ಇಲ್ಲಾಗಿರುವುದು ಪರ್ಸೆಂಟೇಜ್-ಗೋಲ್‌ಮಾಲ್ ಖಾತರಿಯೇ ಹೆಚ್ಚು! ಈ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕದ ಸಾಧನೆ ಉತ್ತಮವೆಂದು ಪ್ರಧಾನಿಯೇ 'ಶಹಬ್ಬಾಸ್' ಎಂದಿದ್ದಾರೆ.

ಆದರೆ ಪ್ರಧಾನಿ ಶ್ಲಾಘನೆಗೆ ಆಧಾರವಾಗಿರುವುದು ಅಧಿಕಾರಿಗಳು ಕೊಟ್ಟಿರುವ ಖೊಟ್ಟಿ ಅಂಕಿ-ಸಂಖ್ಯೆ ಎಂಬುದು ಕಟುವಾಸ್ತವ. ಈ ಬೋಗಸ್ ಸಾಧನೆಗಾಗಿ ರಾಜ್ಯದ ರೂರಲ್ ಡೆವಲಪ್‌ಮೆಂಟ್ ಮಂತ್ರಿ ಜಗದೀಶ್ ಶೆಟ್ಟರ್ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡು ಬೀಗುತ್ತಿದ್ದಾರೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ರೋಜ್‌ಗಾರ್ ಯೋಜನೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಆಗಿದೆ. ಸುಳ್ಳು ಕೂಲಿಕಾರರ ದಾಖಲೆ ಸೃಷ್ಟಿಸಿ ಅಧಿಕಾರಿಗಳು-ಆಳುವವರು ಜಂಟಿಯಾಗೇ ನುಂಗಾಟ ನಡೆಸಿದ್ದಾರೆ. ಉದ್ಯೋಗ ಖಾತ್ರಿಯಂಥ ಹಲವು ಬಡತನ ನಿರ್ಮೂಲನಾ ಯೋಜನೆಗಳು ಪ್ರಾಮಾಣಿಕವಾಗಿ-ಕಟ್ಟುನಿಟ್ಟಾಗಿ ಅನುಷ್ಠಾನಗೊಂಡಿದ್ದೇ ಆದರೆ ಮಗು ಮಾರಾಟದಂಥ ಪ್ರಕರಣ ಆಗುತ್ತಿರಲಿಲ್ಲ. ಲಕ್ಷ್ಮಿ-ಕಲಂದರ್‌ನಂಥ ನತದೃಷ್ಟರಿಗೆ ಉದ್ಯೋಗ ಸಿಕ್ಕಿ ಕುಟುಂಬ ನಿರ್ವಹಣೆಯ ಧೈರ್ಯ ಬರುತ್ತಿತ್ತು!

ಅಣ್ಣಾ ಹಜಾರೆಯ 'ಸಮೂಹ ಸನ್ನಿಗೆ' ಸಿಕ್ಕು ಬೀದಿಗಿಳಿದು ಬೊಬ್ಬೆ ಹಾಕಿದವರೆಲ್ಲ ತಮ್ಮೂರಲ್ಲಿರುವ ಲಕ್ಷ್ಮಿ-ಕಲಂದರ್‌ನಂಥವರತ್ತ ಕಣ್ಣು ಹಾಯಿಸಬೇಕಿದೆ. ಗಾಂಧಿ ಟೋಪಿ ತಲೆಗೇರಿಸಿ ರೋಡ್ ಶೋ ಮಾಡಿದಾಕ್ಷಣ ಕ್ರಾಂತಿ ಆಗಿಬಿಡುವುದಿಲ್ಲ. ಬಡವರಿಗೆ, ಅರ್ಹರಿಗೆ ಸರ್ಕಾರಿ ಯೋಜನೆಗಳ ಪ್ರಯೋಜನ ಸಿಗುವಂತೆ ಹಜಾರೆ ಹಿಂಬಾಲಕರು ತಂತಮ್ಮ ಊರಲ್ಲಿ ನಿಯತ್ತಿನಿಂದ ಕೆಲಸ ಮಾಡಬೇಕಿದೆ. 'ಭ್ರಷ್ಟಾಚಾರ, ಭ್ರಷ್ಟಾಚಾರ' ಎಂದು ಬೊಬ್ಬೆ ಹೊಡೆದರೆ ಸಾಲದು; ಈ ದೇಶದ ಸಮಸ್ಯೆಯ ಬೇರಿಗೆ ಚಿಕಿತ್ಸೆ ಕೊಡಬೇಕೇ ಹೊರತು ಟೊಂಗೆ-ಎಲೆಗಳಿಗಲ್ಲ; ಆಗ ಮಾತ್ರ 'ಮಗು ಮಾರಾಟ'ದಂಥ ಅಮಾನುಷ ಘಟನೆ ನಿಂತೀತು!

• ನಹುಷ

...ತ್ತು. ಆದರೆ ಪ್ರಳಯಾಂತಕ ಚೌಧರಿ ಸರಿಯಾಗಿ ...ಹೊಡೆಯಲು ತಹತಹಿಸಲಾರಂಭಿಸಿದ.

...ಬಸವರಾಜ ಗೋಕಾವಿ ಮುಧೋಳ ಇನ್ಸ್‌ಪೆಕ್ಟರ್ ...ಶ್ ರೆಡ್ಡಿ ಮತ್ತು ಚೌಧರಿಯನ್ನು ಸಂಪರ್ಕಿಸಿದ. ಈ ... ಖಾಕಿ ಜೋಡಿ ಸಿಮೆಂಟ್‌ನ ಬೆಲೆ ಒಂದೂವರೆ ...ಹಾಗೂ ತಮಗೆ ಎರಡು ಲಕ್ಷ ಕೊಡಬೇಕೆಂದು ...ು ಹೊರಡಿಸಿದೆ. ಹಣ ಪಾವತಿಸಲು ಒಂದುವಾರ ...ಮಾವಕಾಶ ಬೇಡಿದ ಬಸವರಾಜ ಹೊರಬಂದು ...ತರ ಬಳಿ ಅಲವತ್ತುಕೊಂಡಿದ್ದಾನೆ. ಯಾಕೆ ...ಸುಮ್ಮನೆ ದಂಡ ಕಟ್ಟಬೇಕು ಅಂತಲೂ ಲೆಕ್ಕಾಚಾರ ...ನೆ. ತದನಂತರ ಅಚಲ ನಿರ್ಧಾರ ತಳೆದು ನಿಷ್ಠಾವಂತ ...ಕಾಯುಕ್ತ ಡಿವೈಎಸ್ಪಿ ಸಿದ್ದಿಂಗಣ್ಣವರ್‌ರನ್ನು ...ರ್ಕಿಸಿದ್ದಾನೆ.

...ಈ ಬಗ್ಗೆ ತನಿಖೆ ಆರಂಭಿಸಿದ ಸಿದ್ದಿಂಗಣ್ಣವರ್ ...ರಾಜ್‌ನ ದೂರು ದಾಖಲಿಸಿಕೊಂಡು ಅಖಾಡಕ್ಕಿಳಿ...ಿ. ಒಂದೂಮುಕ್ಕಾಲು ಲಕ್ಷದೊಂದಿಗೆ ಚೌಧರಿಯನ್ನು ...ಮಾಗುವಂತೆ ಬಸವರಾಜನಿಗೆ ತಾಕೀತು ಮಾಡಿ ... ಹಿಂಬಾಲಿಸಿದ್ದಾರೆ.

...ಈ ವಿಚಾರ ಅದಾಗಲೇ ಚೌಧರಿ ಹಾಗೂ ಸುರೇಶ್ ... ತಲುಪಿಯಾಗಿತ್ತು. ಇಷ್ಟಾಗುತ್ತಲೇ ಸುರೇಶ್ ತನ್ನ ...ಬಾಂಧವ ಉದಪುಡಿಗೆ ಫೋನಾಯಿಸಿದ್ದಾನೆ. ಜೊತೆಗೆ ...ಜೋಳನ ನೆಂಟ ಜೆಡಿಎಸ್‌ನ ಶಂಕರ ನಾಯಕನನ್ನೂ ...ರ್ಕಿಸಿ ಪುಂಡರನ್ನ ಕರೆಸಿಕೊಂಡು ಲೋಕಾಯುಕ್ತರ ... ಹಲ್ಲೆ ನಡೆಸಲು ತಯಾರಿ ನಡೆಸಿದ್ದಾನೆ. ಇದೆಲ್ಲ ...ಕೊಂಡಂತೆಯೇ ನಡೆದು ಚೌಧರಿ ಪಾರಾಗಿದ್ದಾನೆ. ... ವ್ಯವಸ್ಥಿತ ತನಿಖೆಯೊಂದಕ್ಕೆ ಈ ರೀತಿ ...ಯಾದದ್ದನ್ನು ಕಂಡು ರೋಷಗೊಂಡ ಡಿವೈಎಸ್ಪಿ ...ಗಣ್ಣವರ್ ಚೌಧರಿಯನ್ನ ಹೆಡೆಮುರಿಗೆ ಕಟ್ಟಲು ...ರಿ ನಡೆಸಿದ್ದರು. ಅದು ನಡೆದೇ ತೀರುತ್ತಿತ್ತು.

...ದರೆ ಲೋಕಾಯುಕ್ತ ದಾಳಿಯ ವಾಸನೆ ಬಡಿಯುತ್ತಲೇ ...ಿ ಹಾಗೂ ಸುರೇಶ್ ರೆಡ್ಡಿ ಪಾರಾಗುವ ಕಸರತ್ತು ...ಬಿಟ್ಟುಕೊಂಡಿದ್ದರು. ಸುರೇಶ್ ರೆಡ್ಡಿ ಜೆಡಿಎಸ್‌ನ ...ಮ ನಾಯಕ ಶಂಕರನೊಂದಿಗೆ ಸೇರಿ ರಾಜ್ಯಮಟ್ಟದ ...ಕರುಗಳನ್ನು ಸಂಪರ್ಕಿಸಲಾರಂಭಿಸಿದ. ಶಂಕರ್ ನಾಯಕ ...ಎಸ್ ಪಕ್ಷದ ವೈಎಸ್‌ವಿ ದತ್ತಾಗೆ ಫೋನಾಯಿಸಿ ...ಸೋ ಒದರಿದ. ದತ್ತಾಗೆ ಅದ್ಯಾವ ಮಂಕು ಬಡಿದಿತ್ತೋ, ...ಲೋಕಾಯುಕ್ತ ಡಿಐಜಿ ಪ್ರತಾಪ್ ಮೊಹಾರೆ ಮೇಲೆ ...ದ ಬೀರಲೆತ್ನಿಸಿದರು. ಹುಬ್ಬಳ್ಳಿ ಶಾಸಕಿ ಸೀಮಾ ...ತಿ ಕೂಡಾ ಕಾರಜೋಳನಿಗೆ ಫೋನಾಯಿಸಿ ...ವಿಯನ್ನು ಪಾರು ಮಾಡುವಂತೆ ಅಲವತ್ತುಕೊಂಡಳು. ...ಈ ಎಲ್ಲ ಒತ್ತಡ ಬೇರೆ ಬೇರೆ ರೀತಿಯಲ್ಲಿ ಲೋಕಾಯುಕ್ತ ಡಿವೈಎಸ್ಪಿ ಸಿದ್ದಿಂಗಣ್ಣವರ್ ಮೇಲೆ ಬಿತ್ತು. ಆದರಾತ ಚೌಧರಿಯನ್ನು ಬಿಟ್ಟು ಬರಿಗೈಲಿ ತೆರಳಲು ಸಿದ್ಧರಿರಲಿಲ್ಲ. ಅಷ್ಟೊತ್ತಿಗಾಗಲೇ ಲೋಕಾಯುಕ್ತ ಡಿಐಜಿ ಪ್ರತಾಪ್ ಮೊಹಾರೆಯ ಕಿರುಕುಳವೂ ವಿಪರೀತವಾಗಿತ್ತು. ಈ ಹೊತ್ತಿಗಾಗಲೇ ಸುರೇಶ್ ರೆಡ್ಡಿ ಭಯಾನಕ ಐಡಿಯಾವೊಂದನ್ನು ಹೆಣೆದಿದ್ದ. ಅದರನ್ವಯ ಪಾಪದ ಪೇದೆ ಬುದ್ನಿ ಎಂಬಾತನ ಕೈಗೆ ಬಸವರಾಜ್ ತಂದಿದ್ದ ಒಂದೂಮುಕ್ಕಾಲು ಲಕ್ಷ ರೂಪಾಯಿ ತೂರಿಸಲಾಯ್ತು. ತದನಂತರ ಆ ಪೇದೆಯನ್ನು ಬಂಧಿಸುವ ನಾಟಕವಾಡಿ ಲೋಕಾಯುಕ್ತ ಕಸ್ಟಡಿಗೆ ಒಪ್ಪಿಸಿ ಕೈತೊಳೆದುಕೊಂಡಿದ್ದಾರೆ. ನಿಷ್ಠಾವಂತ ಅಧಿಕಾರಿಯಾದ ಸಿದ್ದಿಂಗಣ್ಣವರ್ ಕಣ್ಣೆದುರೇ ನಡೆದ ವಂಚನೆ, ತಮ್ಮ ಸಂಸ್ಥೆಯ ಮೇಲಧಿಕಾರಿಯೇ ಭ್ರಷ್ಟರ ಪರ ನಿಂತದ್ದನ್ನೆಲ್ಲ ಮೂಕಪ್ರೇಕ್ಷಕನಂತೆ ನೋಡಿದರು. ಆತನಿಗೆ ಬೇರೆ ಅವಕಾಶಗಳೇ ಇರಲಿಲ್ಲ.

ಹಾಗಾದರೆ, ಲೋಕಾಯುಕ್ತರ ರಹಸ್ಯವನ್ನು ಭ್ರಷ್ಟ ಚೌಧರಿ ಹಾಗೂ ಸುರೇಶ್ ರೆಡ್ಡಿಗಳಿಗೆ ತಲುಪಿಸಿದ್ದು ಯಾರು? ಇದು ಪ್ರಮುಖ ಪ್ರಶ್ನೆ. ಈ ಬಗ್ಗೆ ತಲಾಷಿಗಿಳಿದರೆ ಲೋಕಾಯುಕ್ತ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ ಭೂಮರೆಡ್ಡಿಯೆಂಬ ಖದೀಮ ತಪ್ಪಿತಸ್ಥನಾಗಿ ನಿಲ್ಲುತ್ತಾನೆ. ಈತನಿಗೆ ಸದಾಕಾಲ ಬೆಂಬಲವಾಗಿರುವವರು. ಸಬ್‌ಇನ್ಸ್‌ಪೆಕ್ಟರ್ ಸ್ವಾಮಗೌಡ ಮತ್ತು ಪೇದೆ ಎಳಗಂಡಿ. ಈ ಇಬ್ಬರೂ ಚೌಧರಿಯ ಕುಲಬಾಂಧವರು. ಇವರೆಲ್ಲ ಸೇರಿ ದೂರು ದಾಖಲಾದ ಸಂದರ್ಭದ ನಂತರದ ಪ್ರತಿಯೊಂದು ಚಲನವಲನಗಳನ್ನೂ ಚೌಧರಿ ಮತ್ತು ಸುರೇಶ್ ರೆಡ್ಡಿಗಳಿಗೆ ತಲುಪಿಸುತ್ತಿದ್ದರು. ಜೊತೆಗೆ ಬಚಾವಾಗುವ ಟಿಪ್ಸ್‌ಗಳನ್ನೂ ನೀಡುತ್ತಿದ್ದರು.


ಇಷ್ಟೆಲ್ಲ ಸಂಚುಗಳನ್ನು ನಡೆಸಿ ಚೌಧರಿ ಪಾರಾಗಿದ್ದಾನೆ. ಆದರೆ ಲೋಕಾಯುಕ್ತರ ಕಾನೂನಿನ ಪ್ರಕಾರ ಎಫ್‌ಐಆರ್‌ನಲ್ಲಿರುವವರನ್ನು ಮಾತ್ರ ಬಂಧಿಸಬೇಕು. ಯಾಕೆಂದರೆ ಭ್ರಷ್ಟ ಅಧಿಕಾರಿಗಳು ಹಣ ಇಸಿದುಕೊಳ್ಳಲು ಯಾರನ್ನಾದರೂ ನೇಮಿಸಿಕೊಂಡಿರುತ್ತಾರೆ. ಇದು ಸರಿಯಾಗಿ ಪಾಲನೆಯಾದರೆ ಚೌಧರಿ ಜೈಲುಪಾಲಾಗುತ್ತಾನೆ. ನೂತನ ಲೋಕಾಯುಕ್ತ ಶಿವರಾಜ್ ಪಾಟೀಲರು ಬಾಹ್ಯ ಭ್ರಷ್ಟಾಚಾರ ನಿಗ್ರಹಕ್ಕೆ ಹೊರಡುವ ಮುನ್ನ ತಮ್ಮದೇ ಸಂಸ್ಥೆ ಹೊಕ್ಕಿರುವ ಭ್ರಷ್ಟರನ್ನು ಕಿತ್ತೆಸೆಯುವ ತುರ್ತಿದೆ. ಅನಿಲ್ ಭೂಮರೆಡ್ಡಿ, ಸ್ವಾಮೇಗೌಡನಂಥ ಖದೀಮರ ಬುಡಕ್ಕೊದ್ದು ಹೊರಗಟ್ಟಿ ನ್ಯಾಯ-ನಿಷ್ಠುರತೆಗೆ ನೆಲೆ ಕಲ್ಪಿಸುವ ಅವಶ್ಯಕತೆಯಿದೆ.


ಶಿವರಾಜ್ ಪಾಟೀಲ್ ಯಾವುದಕ್ಕೂ ಒಂದು ಸಲ ಬಾಗಲಕೋಟೆಯಲ್ಲಿರುವ ತಮ್ಮದೇ ಸಂಸ್ಥೆಗೆ ಬಂದು ಹೋದರೊಳಿತು.

• ಮೇಘರಾಜ್

ಚಿಕ್ಕಮಗಳೂರು-ಉಡುಪಿ
ಮೂರೂ ಪಕ್ಷಗಳಲ್ಲಿ ಆಕಾಂಕ್ಷಿಗಳ ಅಬ್ಬರ

ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಈವರೆಗಿನ ಸಂಸದರ ಅನುದಾನ ಸಮರ್ಪಕ ರೀತಿಯಲ್ಲಿ ಬಳಕೆಯಾಗಿಲ್ಲ. ಕಡೂರು-ಚಿಕ್ಕಮಗಳೂರು ರೈಲ್ವೆ ಕಾಮಗಾರಿ ಪೂರ್ಣಗೊಂಡಿಲ್ಲ. ಎರಡೂ ಜಿಲ್ಲೆಗಳ ಜನರು, ರೈತರು, ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಒಟ್ಟಾರೆಯಾಗಿ ಇಡೀ ಕ್ಷೇತ್ರ ಸಮಸ್ಯೆಗಳ ಸುಳಿಯಲ್ಲಿ ನಲುಗುತ್ತಿದೆ. ಹಲ್ಕಿರಿಯುತ್ತಾ ಕ್ಷೇತ್ರದ ಜನಕ್ಕೆ ಮುಖ ತೋರಿಸಿ ಗೆದ್ದು ಮರೆಯಾದ ಸದಾನಂದ ಗೌಡ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಮನಸ್ಸು ಮಾಡಲಿಲ್ಲ. ಈ ವಂಚನೆಯಿಂದಾಗಿ ಜನರಿಗೆ ಬಿಜೆಪಿಯೆಡೆಗೊಂದು ಅಸಹನೆ ಮನೆಮಾಡಿದೆ. ಈ ನಡುವೆಯೇ ಸದಾನಂದ ಗೌಡರು ಮುಖ್ಯಮಂತ್ರಿಯಾಗಿದ್ದಾರೆ. ಅವರು ರಾಜೀನಾಮೆ ನೀಡಿಲ್ಲವಾದರೂ ಇದೀಗಲೇ ಎಲ್ಲಾ ಪಕ್ಷಗಳಲ್ಲೂ ಅಭ್ಯರ್ಥಿಗಳ ಹುಡುಕಾಟ, ಟಿಕೆಟ್ ಲಾಬಿಗಳು ಗರಿಗೆದರಿವೆ.



ರಾಧಾ ಸುಂದರೇಶ್


ಶಂಕರ್


ಪ್ರಾಣೇಶ್

ದಿಢೀರನೆ ಸಿಎಂ ಸ್ಥಾನ ಅಲಂಕರಿಸಿದ ಡಿವಿಎಸ್ ಸುತ್ತಮುತ್ತ ಸಂದೇಹಾಸ್ಪದ ರೆಕ್ಕೆಪುಕ್ಕಗಳು ಗರಿಗೆದರಿವೆ. ಇದು ಒಂದೆಡೆ ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬಿಜೆಪಿ ಲಯ ಕಳೆದುಕೊಳ್ಳುತ್ತಿದೆ ಎಂಬುದಕ್ಕೆ ಪ್ರಮುಖ ಸಾಕ್ಷಿಯಾಗಿದೆ. ಇಲ್ಲಿ ತಕ್ಷಣಕ್ಕೆ ಉಪ ಚುನಾವಣೆಗೆ ಇಳಿದರೆ ಬಿಜೆಪಿಗೆ ಸೋಲೇ ಗತಿ. ಎರಡು ಜಿಲ್ಲೆಗಳ ಆರು ವಿಧಾನಸಭಾ ಕ್ಷೇತ್ರ ಬಿಜೆಪಿ ತೆಕ್ಕೆಯಲ್ಲಿದೆ. ಜಿ.ಪಂ.ನ ಅನಾಮತ್ತು ನಲ್ವತ್ತು ಕ್ಷೇತ್ರಗಳು ಅದರ ಬುಟ್ಟಿಯಲ್ಲಿವೆ. ಆದರೂ ಬಿಜೆಪಿ ಪಾಳೆಯದಲ್ಲಿ ಆತಂಕ ಮಡುಗಟ್ಟಿದೆ. ಭ್ರಷ್ಟಾತೀಭ್ರಷ್ಟ ರಾಜಕೀಯದಲ್ಲಿ ತೊಡಗಿರುವ ಬಿಜೆಪಿಯತ್ತ ಜಿಲ್ಲೆಯ ಜನಸಾಮಾನ್ಯರು ಕ್ಯಾಕರಿಸಿ ಉಗಿಯುತ್ತಿದ್ದಾರೆ. ಹೀಗಾಗಿ ತಕ್ಷಣ ಚುನಾವಣೆಗಿಳಿದು ಸುಖಾಸುಮ್ಮನೆ ಕ್ಷೇತ್ರವನ್ನು ಕಳೆದುಕೊಳ್ಳಲು ತಯಾರಿಲ್ಲ. ಇದು ಬಿಜೆಪಿಗರ ಘನತೆ, ಗೌರವ, ಪ್ರತಿಷ್ಠೆಯ ಪ್ರಶ್ನೆ.


ಆದರೂ ಆರು ತಿಂಗಳೊಳಗೆ ಹೇಗೂ ರಾಜಿನಾಮೆ ನೀಡಲೇಬೇಕಲ್ಲ? ರಾಜೀನಾಮೆ ಬಳಿಕದ ಪರಿಸ್ಥಿತಿಯ ಕುರಿತು ಈಗಿನಿಂದಲೇ ಚರ್ಚೆ ನಡೆಯುತ್ತಿದೆ. ಸತತ ನಾಲ್ಕು ಸಲ ಒಂದಂಗುಲ ಬಿಡದೆ ಗೆದ್ದ ಲೋಕಸಭಾ ಕ್ಷೇತ್ರವನ್ನು ಐದನೆಯ ಸಲಕ್ಕೆ ಗೆಲ್ಲಲು ಸಾಧ್ಯವಾ? ಮೂರು ಸಲ ದಿ|| ಶ್ರೀಕಂಠಪ್ಪ ಮತ್ತೊಂದು ಸಲ ಡಿ.ವಿ.ಸದಾನಂದಗೌಡ ಗೆದ್ದಿದ್ದೇ ಇತಿಹಾಸ. ಐದನೆಯ ಸಲ ಕ್ಷೇತ್ರವನ್ನು ಗೆದ್ದುಕೊಂಡರೆ ಅದೊಂದು ಐತಿಹಾಸಿಕ ದಾಖಲೆ. ಹೀಗಾಗಿ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿದೆ. ಅದಲ್ಲದೇ ಎರಡೂ ಜಿಲ್ಲೆಗಳಲ್ಲಿ ಭಿನ್ನಮತದ ಹೊಗೆ ಬೂದಿ ಮುಚ್ಚಿದ ಕೆಂಡದಂತಿದೆ. ನಿಜಕ್ಕೂ ಪ್ರತಿ ನಾಯಕರೂ ಒಬ್ಬರಿಗೊಬ್ಬರು ಹಾವು ಮುಂಗುಸಿಯಂತಾಗಿದ್ದಾರೆ.


ಸದಾನಂದಗೌ...

ಆಂತರಿಕ ಪರಿಸ್ಥಿತಿ ಬಿಗಡಾಯಿಸಿದ್ದರೂ ಆಕಾಂಕ್ಷಿಗಳ ಪಟ್ಟಿ ಹನುಮಂತನ ಬಾಲದಂತಿದೆ. ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ಎಂ.ಕೆ.ಪ್ರಾಣೇಶ್, ಮಾಜಿ ಅಧ್ಯಕ್ಷ ಎಂ.ಎಸ್.ಬೋಜೇಗೌಡ ಹಾಗೂ ಕಾರ್ಕಳದ ಮಾಜಿ ಶಾಸಕ ಸುನೀಲ್ ಕುಮಾರ್ ಲಾಬಿ ನಡೆಸುತ್ತಿದ್ದಾರೆ. ಅಂತಿಮವಾಗಿ ಸುನೀಲ್ ಕುಮಾರ್‌ನಿಗೆ ಜೋತು ಬೀಳುವ ಅವಕಾಶ ಇಲ್ಲದಿಲ್ಲ. ಈ ಹಲಾಲುಕೋರ ಮನುಷ್ಯ ಯಾವತ್ತಿಗೂ ಈ ಎರಡು ಜಿಲ್ಲೆಗಳ ಜನರನ್ನು ನೆಮ್ಮದಿಯಿಂದ ಬದುಕಲು ಬಿಟ್ಟವನಲ್ಲ. ಹಿಂದು, ಮುಸ್ಲಿಂ ನಡುವೆ ದ್ವೇಷದ ಕಿಡಿ ಹೊತ್ತಿಸಿ ಚಳಿ ಕಾಯಿಸಿದ್ದಾನೆ. ಈತ ಭಾವೈಕ್ಯತೆಯ ಬಾಬಾಬುಡನ್‌ಗಿರಿಯ ಐತಿಹಾಸಿಕ ಹಿನ್ನೆಲೆಯನ್ನು ಅಳಿಸಲು ಮಾಡದ ಕಸರತ್ತುಗಳಿಲ್ಲ. ಅದೇ ಕಾರಣದಿಂದ ಕೋಮು, ಕೋಮುಗಳ ನಡುವೆ ವಿಷ ಬೀಜ ಬಿತ್ತಿ 2004ರ ವಿಧಾನಸಭಾ ಚುನಾವಣೆಯಲ್ಲಿ ಶಾಸಕನಾದ ಸುನೀಲನನ್ನು 2008ರ ಚುನಾವಣೆಯಲ್ಲಿ ಅದೇ ಮತದಾರರು ಕೆಡವಿದ್ದರು. ರಕ್ತ ಬೀಜಾಸುರನ ಪಾತ್ರಧಾರಿಯಂತಿರುವ ಸುನೀಲ್ ಕುಮಾರ್‌ನಿಗೆ ಬಿಜೆಪಿ ಮಣೆ ಹಾಕಿದರೆ ಅದರ ನೆಲೆಗಟ್ಟು ಅಲುಗಾಡಲಿರುವುದು ಮಾತ್ರ ಸತ್ಯ.

ಇನ್ನು ಪ್ರಾಣೇಶ್, ಸಾಕಷ್ಟು ಪಕ್ವಗೊಂಡಿದ್ದಾರೆ. ಪಕ್ಷದ ತತ್ವ ಸಿದ್ಧಾಂತಕ್ಕಿಂತ ಮುಖ್ಯವಾದ ಒಂದಿಷ್ಟು ದಕ್ಷತೆ, ಪ್ರಾಮಾಣಿಕತೆಯಿದೆ. ಎರಡು ಸಲ ಜಿಲ್ಲಾಧ್ಯಕ್ಷನಾಗಿ ಜನರ ಒಡನಾಟವೂ ಇದೆ. ವರ್ಚಸ್ಸಿಲ್ಲದ ಬೋಜೇಗೌಡ ಹಾಗೂ ಹಲಾಲುಕೋರ ಟೋಪಿವಾಲಾ ಸುನೀಲನಿಗಿಂತ ಪ್ರಾಣೇಶ್ ಸಾಚಾರಂತೆ ಕಾಣುತ್ತಾರಾದರೂ ಟಿಕೆಟ್ ಸಿಗುವುದು ಅನುಮಾನ.

ಕಾಂಗ್ರೆಸ್‌ನ ನಿರೀಕ್ಷೆ ಜಯಪ್ರಕಾಶ ಹೆಗ್ಡೆ ಮೇಲಿದೆ. ಹೆಗ್ಡೆ ಕಳೆದ ಸಲ ಡಿವಿಎಸ್ ಮುಂದೆ ಮಂಡಿಯೂರಿದ್ದರಿಂದ ಈ ಸಲ ಮತದಾರರ ಅನುಕಂಪ ಗಿಟ್ಟುವ ಭರವಸೆಯಿದೆ. ಬಿ.ಎಲ್.ಶಂಕರ್ ಹಾಗೂ ಡಿ.ಕೆ.ತಾರಾದೇವಿ ಕಾಂಗ್ರೆಸ್ ಟಿಕೆಟ್ ವಂಚಿತರಾಗುವುದು ಶತಸ್ಸಿದ್ಧ. ಯಾಕೆಂದರೆ ವರ್ಚಸ್ವಿ ಹೆಣ್ಣು ಮಗಳು ತಾರಾದೇವಿಗೆ ಟಿಕೆಟ್ ಕೊಟ್ಟರೆ ಶಂಕರ್ ಪಲಾಯನ ಮಾಡುವ ಭಯ ಕಾಂಗ್ರೆಸ್‌ಗಿದೆ. ಎಚ್.ಡಿ.ದೇವೇಗೌಡರ ಗರಡಿಯಲ್ಲಿ ಪಳಗಿರುವ ಶಂಕರ್ ಸೂಕ್ಷ್ಮ ರಾಜಕಾರಣಿ. ಜಿಲ್ಲಾ ಕಾಂಗ್ರೆಸ್‌ನಲ್ಲಿ ಒಬ್ಬೊಬ್ಬ ಮುಖಂಡರು ಒಂದೊಂದು ಬಣ ಕಟ್ಟುತ್ತಾ ಪ್ರತಿ ಸಲ ಸೋಲಿಗೆ ಕಾರಣವಾಗುತ್ತಿರುವುದು ಸುಳ್ಳಲ್ಲ. ಒಂದು ಸುತ್ತು ಎಲ್ಲಾ ಪಕ್ಷವನ್ನೂ ತಿರುಗಿರುವ ತಾರಾದೇವಿ ಹಾಗೂ ಜೆಡಿಎಸ್‌ನಿಂದ ಹಾರಿ ಬಂದಿರುವ ಶಂಕರ್‌ಗೆ ಕಾಂಗ್ರೆಸ್ ನಾಯಕರು ಮಣೆ ಹಾಕುತ್ತಿಲ್ಲ. ಬಹುತೇಕ ಕಾರ್ಯಕರ್ತರು ತಾರಾದೇವಿ ಇಂಗಿತವನ್ನ ಕಡೆಗಣಿಸುವುದು ಕಾಂಗ್ರೆಸ್ ಜಾಯಮಾನವಾಗಿದೆ.



ಜೆಡಿಎಸ್ ಕಳೆದ ಸಲದಂತೆ ಈ ಸಲವೂ ತೃತಿಯರಂಗ ರಚಿಸುವ ಸಿದ್ಧತೆಯಲ್ಲಿದೆ. ಅದಾಗದಿದ್ದರೆ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಲಿರುವ ಕುರುಹು ಗೋಚರಿಸುತ್ತಿದೆ. ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪರನ್ನು ಕಣಕ್ಕಿಳಿಸುವ ಸಾಧ್ಯತೆಯಿದೆ. ಆದರೂ ಮಾಜಿ ಬಜರಂಗಿ ಮಹೇಂದ್ರ ಕುಮಾರ್ ಇವತ್ತು ಜನ ಮೆಚ್ಚುಗೆ ಗಿಟ್ಟಿಸಿಕೊಂಡು ಟಿಕೆಟ್ ಆಕಾಂಕ್ಷೆ ಹೊತ್ತುಕೊಂಡಿದ್ದಾರೆ. ಈತ ಕಣಕ್ಕಿಳಿದರೆ ಒಂದು ವರ್ಗದ ಬಿಜೆಪಿ ಮತಗಳಿಗೆ ಹೊಡೆತ ಬೀಳಲಿದೆ. ಆದರೆ ಅಂತಿಮವಾಗಿ ಮುತ್ಸದ್ದಿ ಹಿರಿಯ ಬಂಗಾರಪ್ಪ ಕಣಕ್ಕಿಳಿಯುವುದು ನಿಶ್ಚಿತ. ಹಾಗೊಂದು ವೇಳೆ ನಡೆದರೆ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ತೊಡಕಾಗಲಿದೆ. ಬಿಜೆಪಿ, ಕಾಂಗ್ರೆಸ್‌ನ ಸ್ಪರ್ಧಿಗಳಿಗೆ ಬಂಗಾರಪ್ಪ ಟೋಪಿ ಹಾಕಿಸುವ ಸಿದ್ಧತೆಯಲ್ಲಿದ್ದಾರೆ.

ಕಾರ್ಮಿಕ ನಾಯಕ ಬಿ.ಕೆ.ಸುಂದರೇಶ್‌ರ ಪತ್ನಿ ರಾಧಾ ಸುಂದರೇಶ್ ಸಿಪಿಐನಿಂದ ಸ್ಪರ್ಧಿಸುವ ನಿರೀಕ್ಷೆಯಿದೆ. ಕಳೆದ ಸಲ ಸ್ಪರ್ಧಿಸಿದ್ದ ರಾಧಾರನ್ನು ಜೆಡಿಎಸ್ ಬೆಂಬಲಿಸಿತ್ತು. ಆದರೆ ಮತ ಹಾಕಲು ಹೇಳಿದ್ದು ಮಾತ್ರ ಬಿಜೆಪಿಗೆ. ಇದೇ ಸದಾನಂದ ಗೌಡರ ಗೆಲುವಾಗಿ ಪರಿಣಮಿಸಿತ್ತು.

ತಮ್ಮ ಕ್ಷೇತ್ರದಿಂದ ಗೆದ್ದು ಸಂಸದರಾಗಿದ್ದ ಸದಾನಂದ ಗೌಡ ಮುಖ್ಯಮಂತ್ರಿಯಾಗಿದ್ದರೂ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಜನ ಸಂಭ್ರಮಿಸುವ ಸ್ಥಿತಿಯಲ್ಲಿಲ್ಲ. ಇದು ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ಯಾವ ಗತಿಯಾಗಲಿದೆಯೆಂಬುದರ ಮುನ್ಸೂಚನೆಯಂತಿದೆ.

• ಅಜೇಜ್ ಕಿರುಗುಂದ

ಕನಕನ ಇತಿಹಾಸವೂ ಕಾಗಿನೆಲೆ ಸ್ವಾಮಿಯೂ



ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕುರುಬರನ್ನು ವ್ಯವಸ್ಥಿತವಾಗಿ ತುಳಿಯಲಾಗುತ್ತಿದೆ. ಇದೀಗ ಒಂದು ಕಡೆ ಉಡುಪಿಯಲ್ಲಿ ಪೇಜಾವರ ಸ್ವಾಮಿ ಕನಕನ ಕಿಂಡಿಗೆ ನವಗ್ರಹ ಕಿಂಡಿ ಎಂದು ಹೊಸ ಹೆಸರಿಡುವ ಮೂಲಕ ತನ್ನ ಇನ್ನೊಂದು ಕುತಂತ್ರಕ್ಕೆ ಜನ್ಮ ನೀಡಿದ್ದಾರೆ. ಇನ್ನೊಂದು ಕಡೆ ಕನಕದಾಸರ ಹೆಸರಲ್ಲಿ ಆತುರಕ್ಕೆ ಜನ್ಮತಾಳಿದ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರವು ಭ್ರಷ್ಟರ ಅಭಿವೃದ್ಧಿಗೆ ವೇದಿಕೆಯಾಗಿದೆ. ಇವೆರಡರ ಮಧ್ಯೆ ಕಾಗಿನೆಲೆ ಕನಕಗುರು ಪೀಠದ ನಿರಂಜನಾನಂದ ಸ್ವಾಮಿ "ಬಿಜೆಪಿಗೆ ಒಂದು ಅವಕಾಶ ಸಿಕ್ಕಿದೆ. ಈಗ ಸರ್ಕಾರ ಸುಧಾರಿಸಿಕೊಳ್ಳದಿದ್ದರೆ ಮನೆ ಹಾದಿ ಹಿಡಿಯಬೇಕಾಗುತ್ತದೆ" ಎಂದು ಎಚ್ಚರಿಸಿದ್ದಾರೆ.








ಆದರೆ ಅವರು ಈ ಎಚ್ಚರಿಕೆ ನೀಡಿರುವುದು ಕುರುಬರ ಉದ್ಧಾರಕ್ಕಲ್ಲ, ಕಾಗಿನೆಲೆಯ ಅಭಿವೃದ್ಧಿಗಲ್ಲ, ಬದಲಾಗಿ ತನ್ನ ಶಿಷ್ಯ ಸಿ.ಹೆಚ್. ವಿಜಯಶಂಕರ್ ಅವರಿಗೆ ಸಚಿವ ಸ್ಥಾನ ನೀಡಿ ಎಂದು!

ಯಡಿಯೂರಪ್ಪ ಮುಖ್ಯಮಂತ್ರಿಯಾಗುತ್ತಲೇ ನಾಡಿನ ಮೂಲೆ ಮೂಲೆಯಲ್ಲಿರುವ ಲಿಂಗಾಯತ ಮಠಗಳಿಗೆ ಹಣ ಹಂಚಿದ. ಜೊತೆಗೆ ಆರೆಸ್ಸೆಸ್ಸಿನ ಆದೇಶದಂತೆ ಬ್ರಾಹ್ಮಣ ಸ್ವಾಮಿಗಳ ಪಾದಕ್ಕೆ ಬಿದ್ದು ಅವರಿಗೂ ಕೋಟಿ ಕೋಟಿ ರೂಪಾಯಿ ಸುರಿದ. ಕೆಲವರಿಗೆ ದೇವಸ್ಥಾನಗಳನ್ನೂ ದಾನ ಮಾಡಿದ. ಚಡ್ಡಿ ತೊಟ್ಟಿರುವ ಕುರುಬರ ನಾಯಕನಾದ ಕೆ.ಎಸ್. ಈಶ್ವರಪ್ಪನಿಗೆ ಪಕ್ಷದ ಅಧ್ಯಕ್ಷಗಿರಿ ಕೊಟ್ಟು ಮಂತ್ರಿಗಿರಿ ಕಿತ್ತುಕೊಂಡ. ಈಗ ತಾನು ಡಿಫ್ಯಾಕ್ಟೋ ಮುಖ್ಯಮಂತ್ರಿ ಆಗಿರುವಾಗ ಪಕ್ಷೇತರ ಶಾಸಕ ವರ್ತೂರ್ ಪ್ರಕಾಶನಿಗೆ ಗೂಟದ ಕಾರು ನೀಡುವ ಮೂಲಕ ವಿಜಯಶಂಕರನನ್ನು ಸೈಡ್‌ಲೈನ್ ಮಾಡಿದ್ದಾನೆ. ಇದನ್ನೆಲ್ಲ ಕಂಡು ಕುದ್ದು ಹೋಗಿರುವ ಕಾಗಿನೆಲೆ ಸ್ವಾಮಿ "ಸಾಯುವ ಹಂತದಲ್ಲಿದ್ದ ಸರ್ಕಾರಕ್ಕೆ ಹನಿ ನೀರು ಬಿಟ್ಟಿದ್ದ ವರ್ತೂರ್ ಪ್ರಕಾಶನಿಗೆ ಸಚಿವ ಸ್ಥಾನ ನೀಡುವ ಮೂಲಕ ಪಕ್ಷ ತನ್ನ ಋಣ ತೀರಿಸಿಕೊಂಡಿದೆ. ಆದರೆ ವರ್ತೂರ್‌ಗೆ ಮಂತ್ರಿ ಪದವಿ ಸಿಕ್ಕಿರುವುದು ಅವಕಾಶವಾದಿ ರಾಜಕಾರಣಕ್ಕೆ ಹೊರತು ಕುರುಬರ ಕೋಟಾದಲ್ಲಿ ಅಲ್ಲ, ಆದ್ದರಿಂದ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಿ.ಹೆಚ್.ವಿಜಯಶಂಕರ್‌ಗೆ ಮಂತ್ರಿ ಸ್ಥಾನ ಕೊಡ ಬೇಕು. ಇಲ್ಲದಿದ್ದರೆ ಪರಿಣಾಮ ನೆಟ್ಟಗಿರಲ್ಲ" ಎಂದು ಧಮಕಿ ಹಾಕಿದ್ದಾರೆ.

ಪೇಜಾವರರ ಹೊಸ ಕುತಂತ್ರ

ಯಾರಾದ್ರೂ ಇತಿಹಾಸವನ್ನು ಹೇಗೆ ತಿರುಚುವುದು ಎಂದು ಅರಿಯಬೇಕಾದರೆ ಅವರು ಪೇಜಾವರ ಸ್ವಾಮಿಯನ್ನು ನೋಡಿ ಕಲಿಯಬೇಕು. ಹಿಂದೆ ನವೀಕರಣದ ಹೆಸರಿನಲ್ಲಿ ಉಡುಪಿಯಲ್ಲಿದ್ದ ಕನಕ ಗೋಪುರವನ್ನು ಕೆಡವಿ ಹಾಕುವ ಮೂಲಕ ಅಲ್ಲಿನ ಕೃಷ್ಣ ದೇವಸ್ಥಾನದ ಇತಿಹಾಸದೊಂದಿಗೆ ಬೆಸೆದುಕೊಂಡಿರುವ ಕನಕನ ಹೆಸರನ್ನೇ ಹೊಸಕಿಹಾಕಲು ಯತ್ನಿಸಲಾಗಿತ್ತು, ಹಾಗೆಯೇ ಮೊನ್ನೆಯ ಕೃಷ್ಣ ಜನ್ಮಾಷ್ಟಮಿಯ ದಿನ ಆ ದೇವಸ್ಥಾನದಲ್ಲಿರುವ ಕನಕನ ಕಿಂಡಿಗೆ 'ನವಗ್ರಹ ಕಿಂಡಿ' ಎಂಬ ಹೆಸರಿಡುವ ಮೂಲಕ ಮತ್ತೆ ಅಂತಹದ್ದೊಂದು ಪ್ರಯತ್ನಕ್ಕೆ ಪೇಜಾವರರು ಕೈಹಾಕಿದ್ದಾರೆ.

ಉಡುಪಿಯ ಕೃಷ್ಣನ ದೇವಸ್ಥಾನದಲ್ಲಿರುವ ಕೃಷ್ಣನನ್ನು ಭಕ್ತರು ನೋಡುವುದು ಕನಕನ ಕಿಂಡಿಯ ಮೂಲಕವೇ. ಈ ಕಿಂಡಿಯ ಹಿಂದೆ ಒಂದು ಆಧ್ಯಾತ್ಮಿಕ ಇತಿಹಾಸ, ಸಾಮಾಜಿಕ ಹೋರಾಟ ಇರುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಆದರೆ ಪೇಜಾವರರಿಗೆ ಅಂತಹದ್ದೆಲ್ಲ ಬೇಡವೇಬೇಡ. ಬದಲಾಗಿ ಎಲ್ಲೆಡೆ ತಮ್ಮ ಪುರೋಹಿತಶಾಹಿ ಧೋರಣೆಯೇ ಎದ್ದುಕಾಣಬೇಕು. ಆದ್ದರಿಂದಲೇ ಅವರು ಕನಕದಾಸರನ್ನು ಉಡುಪಿಯಿಂದ ಹೊರದಬ್ಬುವ ವ್ಯವಸ್ಥಿತ ಪಿತೂರಿಯಲ್ಲಿ ತೊಡಗಿದ್ದಾರೆ.



ನಿರಂಜನಾನಂದ

ಕನಕನ ಕಿಂಡಿಗೆ ಅವರೀಗ 'ನವಗ್ರಹ ಕಿಂಡಿ' ಎಂದು ಹೆಸರಿಟ್ಟಿರುವುದರ ಹಿಂದೆಯೂ ಕನಕದಾಸರ ಹೆಸರನ್ನ ಮರೆಮಾಚುವ ಹುನ್ನಾರವಿರುವುದು ಸ್ಪಷ್ಟ. ಆದರೂ ಪೇಜಾವರರು ಮಾತ್ರ ಸುಳ್ಳು ಹೇಳುವುದನ್ನು ನಿಲ್ಲಿಸುತ್ತಿಲ್ಲ. ಅವರೀಗ "ಗರ್ಭಗುಡಿಯೊಳಗಿನ ಕನಕನ ಕಿಂಡಿಯನ್ನು ಕನಕ ನವಗ್ರಹ ಕಿಂಡಿ ಎಂದು ಕರೆಯಲಾಗಿದೆಯೇ ಹೊರತು ಬೇರೇನೂ ಆಗಿಲ್ಲ, ಕನಕ ಎಂದರೆ ಚಿನ್ನ. ಹೀಗಾಗಿ ಬಂಗಾರದಿಂದ ಲೇಪನ ಮಾಡಿರುವ ನವರಂಧ್ರಗಳಿರುವ ಕಿಂಡಿ ಎಂಬುದನ್ನು ಬಿಂಬಿಸುವ ಉದ್ದೇಶದಿಂದ ಕನಕ ನವಗ್ರಹ ಕಿಂಡಿ ಎಂದು ಕರೆಯುತ್ತೇವೆ" ಎನ್ನುತ್ತಿದ್ದಾರೆ. ಇಲ್ಲಿ ಎಲ್ಲರೂ ಗಮನಿಸಬೇಕಾದ ಅಂಶ ಯಾವುದೆಂದರೆ ಪೇಜಾವರ ಪ್ರಕಾರ ಇಲ್ಲಿರುವ ಕನಕ ಬಂಗಾರವೇ ಹೊರತು ಕನಕ ದಾಸರಲ್ಲ!

ಆದ್ದರಿಂದ ಇದರ ವಿರುದ್ಧ ಸಿಡಿದೆದ್ದಿರುವ ಕಾಗಿನೆಲೆಯ ಸ್ವಾಮಿ "ಬೇಕಾದರೆ ಕನಕ ದಾಸರ ನವಗ್ರಹ ಕಿಂಡಿ ಎಂದು ಕರೆಯಲಿ. ಆದರೆ ಕನಕದಾಸರನ್ನು ಹೊರಗಿಡುವುದು ಇಡೀ ಕುರುಬ ಸಮಾಜಕ್ಕೆ ಮಾಡುವ ಅವಮಾನ. ಇದಕ್ಕೆ ಚಡ್ಡಿ ಸರ್ಕಾರ ಸಪೋರ್ಟ್ ಆಗಿ ನಿಂತಿದೆ" ಎಂದು ಗರಮ್ ಆಗಿದ್ದಾರೆ.

ಕಾಗಿನೆಲೆ ಅಭಿವೃದ್ಧಿ ಅಲ್ಲ, ಕನಕನ ಲೂಟಿ!

'ಕುಲ ಕುಲ ಕುಲವೆಂದು ಹೊಡೆದಾಡದಿರಿ. ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ' ಎಂದ ಕನಕ ದಾಸರ ಕರ್ಮಭೂಮಿಯಲ್ಲೆ ಇವತ್ತು 'ಹಣ ಹಣವೆಂದು ಬಡಿದಾಡುವ' ಹೆಗ್ಗಣಗಳು ಹುಟ್ಟಿಕೊಂಡಿವೆ. ಹಣಕ್ಕಾಗಿ ಕನಕನನ್ನೇ ಹರಾಜಿಗಿಡುವ ಹರಾಮಕೋರರು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಲ್ಲಿ ಒಕ್ಕರಿಸಿದ್ದಾರೆ.

ಕನಕ ದಾಸರು ಅತಿ ಹೆಚ್ಚು ಇಷ್ಟಪಟ್ಟ ಊರು ಕಾಗಿನೆಲೆ. ಇಲ್ಲಿಯ ಬ್ರಾಹ್ಮಣರು ಚನ್ನಕೇಶವನನ್ನು ಗರ್ಭಗುಡಿಗೆ ಸೀಮಿತವಾಗಿರಿಸಲು ಪ್ರಯತ್ನಿಸಿದಾಗ ಕನಕ ದಾಸರು ಬ್ರಾಹ್ಮಣರ ಕಪಿಮುಷ್ಟಿಯಿಂದ ಚನ್ನಕೇಶವನನ್ನು ಬಿಡುಗಡೆಗೊಳಿಸಲು ಹರಸಾಹಸಪಟ್ಟರು. ಕೊನೆಗೆ ಅದರಲ್ಲಿ ಯಶಸ್ಸನ್ನು ಕೂಡಾ ಕಂಡುಕೊಂಡರು. ಇಂಥ ಐತಿಹಾಸಿಕ ಸಾಮಾಜಿಕ ಸಂಘರ್ಷವನ್ನು ತನ್ನ ಮಡಿಲಲ್ಲಿಟ್ಟುಕೊಂಡಿರುವ ಕಾಗಿನೆಲೆ ಸಾಮಾನ್ಯ ಕ್ಷೇತ್ರವಲ್ಲ. ಆದರೆ ನಮ್ಮನ್ನಾಳುತ್ತಿರುವ ನಾಯಕರಿಗೆ ಕನಕ ದಾಸರ ಬಗ್ಗೆ ಪರಿಜ್ಞಾನ ಇದ್ದಿದ್ದರೆ ಈಗ ಕಾಗಿನೆಲೆ ಈಗಿರುವ ಸ್ಥಿತಿಗಿಂತ ಬೇರೆ ಸ್ಥಿತಿಯಲ್ಲಿರುತ್ತಿತ್ತು.

ಕಾಗಿನೆಲೆ ಅಭಿವೃದ್ಧಿಗಾಗಿ 2006ರಲ್ಲಿ ಅಂದಿನ ರಾಜ್ಯ ಸರ್ಕಾರ ಒಂದು ಪ್ರಾಧಿಕಾರವನ್ನೇನೊ ರಚಿಸಿತು. ಆಗ ಮುಖ್ಯಮಂತ್ರಿ ಆಗಿದ್ದ ಹೆಚ್.ಡಿ.ಕುಮಾರಸ್ವಾಮಿ ಈ ಪ್ರಾಧಿಕಾರಕ್ಕೆ ನಿರಂಜನಾನಂದಪುರಿ ಸ್ವಾಮೀಜಿ, ಕೆ.ಎಸ್.ಈಶ್ವರಪ್ಪ ಮೈಸೂರಿನ ನಿವೃತ್ತ ಮುಖ್ಯ ಅಭಿಯಂತರ ಎಂ.ರಾಮದಾಸ, ಮಾಜಿ ಜಿ.ಪಂ. ಸದಸ್ಯ ಸಿ.ಎನ್. ಶ್ಯಾಗೋಟಿಯವರನ್ನು ನೇಮಿಸಿತ್ತು. ಆಗ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆಯನ್ನು ಈ ಸದಸ್ಯರೇ ನೋಡಿಕೊಳ್ಳುತ್ತಿದ್ದರು. ಆದರೆ ಯಾವಾಗ ಯಡ್ಡಿಯ ಚಡ್ಡಿ ಸರ್ಕಾರ ಅಸ್ತಿತ್ವಕ್ಕೆ ಬಂತೋ ಮರುಕ್ಷಣದಿಂದಲೇ ಪ್ರಾಧಿಕಾರದ ಎಲ್ಲ ಸದಸ್ಯರನ್ನು ಕಿತ್ತುಹಾಕಿತು. ಪ್ರಾಧಿಕಾರದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಿತು.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಶ್ಚಿತ ಗುರಿಯಿಲ್ಲ, ಇಲ್ಲಿಯತನಕ ಕಾಗಿನೆಲೆ ಅಭಿವೃದ್ಧಿ ಕುರಿತಂತೆ ಪ್ರಾಧಿಕಾರದಿಂದ ಒಂದೇ ಒಂದು ಸಭೆ ನಡೆದಿದೆ. ಕೆ.ರೇವಣಪ್ಪ ಆಯುಕ್ತರಾದನಂತರ ಕಾಗಿನೆಲೆ ಅಭಿವೃದ್ಧಿಯಾಗುವ ಬದಲು ಅವರು ಅಭಿವೃದ್ಧಿಯಾಗುತ್ತಿದ್ದಾರೆ. ಪ್ರಾಧಿಕಾರದಿ[ಂದ] ನಡೆಯುತ್ತಿರುವ ಎಲ್ಲಾ ಕಾಮಗಾರಿಗಳ ಗುತ್ತಿಗೆಗಳನ್ನು ಕಂಟ್ರಾಕ್ಟರುಗಳಾದ ಪರಮೇಶರಪ್ಪ, ಕೆ. ಎಲ್. ... ಬೆಟ್ಟಸ್ವಾಮಿ ತರಹದವರಿಗೆ ನೀಡಲಾಗಿದೆ. ಇ... ಕಾಮಗಾರಿಗಳು ಯಾವ ಮಟ್ಟದ್ದೆಂದರೆ ಈ ಹಿ... ಸಭಾಭವನದ ಮೇಲ್ಛಾವಣಿ ಕುಸಿದು ಬಿದ್ದಾಗಲೇ ಇವ... ಕಂಬಿ ಎಣಿಸಬೇಕಿತ್ತು.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಿಂದಿ... ಕುಮಾರಸ್ವಾಮಿ ಸರ್ಕಾರ 21 ಕೋಟಿ ರೂಪಾಯಿ ನೀಡಿ... ಬಿಜೆಪಿ ಸರ್ಕಾರ ಇಲ್ಲಿಯವರೆಗೆ 45 ಕೋಟಿ ರೂ... ಮಂಜೂರು ಮಾಡಿದೆ. ಅದರಲ್ಲಿ 37.42 ಕೋಟಿ ಬಿಡು... ಮಾಡಿದೆ. ಇದರಲ್ಲಿ 24.19 ಕೋಟಿ ರ... ಕಾಮಗಾರಿಯನ್ನು ಮುಗಿಸಿದ್ದಾಗಿ ಜಿಲ್ಲಾ ಮಂತ್ರಿ ಉದ... ಒದರಾಡುತ್ತಾನೆ. ಹಾಗೆಯೇ ಜಲಸಂಪನ್ಮೂಲ ಸಚಿ... ಬಸವರಾಜ ಬೊಮ್ಮಾಯಿ ಕನಕದಾಸರ ಜನ್ಮಸ್ಥಳವಾ... ಬಾಡದ ಅಭಿವೃದ್ಧಿಗೆ 15 ಕೋಟಿ ಖರ್ಚು ಮಾಡಿದ್ದ... ಅಂತ ಹೇಳುತ್ತಾ ಅಲ್ಲೊಂದು ಇಲ್ಲೊಂದು ಕಮಾ... ರಿಬ್ಬನ್ ಕಟ್ ಮಾಡಿ ಫೋಟೋಗೆ ಪೋಜು ಕೊಡು... ಅಲೆದಾಡುತ್ತಿದ್ದಾನೆ.

ಒಂದು ಚೀಲ ಸಿಮೆಂಟ್‌ಗೆ 8 ಚೀಲ ಉಸು... ಬೆರೆಸಿ ಇಲ್ಲಿ ಕಾಮಗಾರಿಗಳನ್ನು ನಿರ್ಮಿಸಲಾಗುತ್ತಿದೆ ಎಂ... ಪ್ರಾಧಿಕಾರದಲ್ಲಿರುವ ಜನರ ಹಸಿವಾದರೂ ಯಾ... ಪ್ರಮಾಣದಲ್ಲಿದೆ ಎಂಬುದು ಗೊತ್ತಾಗುತ್ತದೆ.

ಚಡ್ಡಿಗಳಿಗೆ ಚನ್ನಕೇಶವ ಬೇಕು, ಕನಕ ಬೇ...

ಚನ್ನಕೇಶವ ದೇವಸ್ಥಾನದ ಅಭಿವೃದ್ಧಿಯೊಂದೇ ... ಬಿಜೆಪಿ ಸರ್ಕಾರದ ಧ್ಯೇಯವಾಗಿದೆ. ಕನಕದಾಸರ ಇತಿಹಾ... ವನ್ನು ಸೈಡಿಗಿಟ್ಟು ಚನ್ನಕೇಶವನನ್ನು ಉತ್ಸವ ಮೂ... ಯನ್ನಾಗಿಸಲಾಗುತ್ತಿದೆ. ಇದೂ ಪುರೋಹಿ... ಶಾಹಿಯ ಕುತಂತ್ರಗಳ ಫಲ. ಬ್ರಾಹ್ಮ... ಧರ್ಮವನ್ನು ಕಾಗಿನೆಲೆಯಲ್ಲಷ್ಟೇ ಅಲ... ಕನಕದಾಸರ ಕುಲಬಾಂಧವರ ಎದೆಯಾಳ... ಸಾರ್ವತ್ರೀಕರಣಗೊಳಿಸಲು ತಯಾರಿ ನ... ಲಾಗುತ್ತಿದೆ. ಅದರ ಭಾಗವಾಗಿಯೇ ಕ... ಮಂದಿರ ಸಂಪೂರ್ಣ ನಿರ್ಮಾಣವಾಗಿದ್ದ... ಅದನ್ನು ಲೋಕಾರ್ಪಣೆ ಮಾಡುತ್ತಿಲ್ಲ.







ನಾಳೆ ದಿನ ಚನ್ನಕೇಶವ ದೇವಸ್ಥಾ... ಅಭಿವೃದ್ಧಿ ಕಾಮಗಾರಿ ಮುಗಿದ ಮೇ... ಎಲ್ಲರನ್ನು ಚನ್ನಕೇಶವನತ್ತ ಎಳೆದುತಂ... ಕನಕದಾಸರ ಅಸ್ತಿತ್ವವನ್ನು ಅಸ್ಥಿರಗೊಳಿಸ... ಕಾರ್ಯತಂತ್ರ ರೂಪಿಸಲಾಗಿದೆ.

ಅಂದರೆ ಬಿಜೆಪಿ ಸರ್ಕಾರ ಚನ್ನಕೇಶ... ಗುಡಿಗೆ ಚೆನ್ನೆ ಕನಕದಾಸರ ಸಮಾಧಿಗೆ ... ಬಳಿಯುತ್ತಿದೆ. ಇದನ್ನು ಖಂಡಿಸಿ ನಿರಂಜ... ನಂದಪುರಿ ಸ್ವಾಮೀಜಿ ಬೀದಿಗಿಳಿದು ತ... ಕುಲಬಾಂಧವರೊಂದಿಗೆ ಹೋರಾಟಕ್ಕಿಳಿ... ವುದು ಅವಶ್ಯಕವಾಗಿದೆ. ಆದರೆ ಸ್ವಾಮಿ... ಇದಕ್ಕೆಲ್ಲಾ ತಿಲಾಂಜಲಿ ಬಿಟ್ಟು ತಮ್ಮ ಶಿಷ್ಯ... ಮಂತ್ರಿ ಸ್ಥಾನ ಕೊಡಿಸಲು ಕುರುಬರೊಂದಿ... ಬೀದಿಗಿಳಿಯುತ್ತೇನೆ ಎಂದು ಹೇಳಿಕೊಂಡು ತಿರುಗುತ್ತಿ... ವುದು ಎಷ್ಟು ಸರಿ?

• ಹುರುಳಿಕೊಪ್ಪ ವಿನ...

ಹುಬ್ಬಳ್ಳಿ ವಕೀಲ ನಡಗಡ್ಡಿ ಸಾವಿನ ಹಿಂದೆ...

ಹುಬ್ಬಳ್ಳಿ ವಕೀಲರ ಸಂಘದ ಅಧ್ಯಕ್ಷ ಹಾಗೂ ವಾಯುವ್ಯ ಸಾರಿಗೆ ಸಂಸ್ಥೆಯ ಕಾನೂನು ಸಲಹೆಗಾರ ವಿ.ಬಿ. ನಡಗಡ್ಡಿ ನಿಧನ ಹೊಂದಿದ್ದಾರೆ. ಐವತ್ತೆರಡು ವರ್ಷ ವಯಸ್ಸಾಗಿದ್ದ ನಡಗಡ್ಡಿ ಸಂಘ ಪರಿವಾರದ ನಂಟು ಹೊಂದಿದ್ದರೂ ಎಲ್ಲರೊಂದಿಗೂ ಬೆರೆಯುತ್ತಿದ್ದ, ಕಷ್ಟಗಳಿಗೆ ಮಿಡಿಯುತ್ತಿದ್ದ ಸಹೃದಯಿ. ಪಾರ್ಶ್ವವಾಯು ಕಾಯಿಲೆ ಇವರನ್ನು ಬಲಿತೆಗೆದುಕೊಂಡಿದೆಯೆಂದು ಸುದ್ದಿ ಹರಡಿದೆಯಾದರೂ ಹುಬ್ಬಳ್ಳಿ ಸೀಮೆಯಲ್ಲಿ 'ಇದು ಕೊಲೆ' ಅಂತೊಂದು ಗುಮಾನಿ ವ್ಯಾಪಕವಾಗಿದೆ.

ಆರಾಮಾಗಿ ಓಡಾಡಿಕೊಂಡಿದ್ದ ನಡಗಡ್ಡಿ ಕಳೆದ ತಿಂಗಳು ಮಿದುಳಿನ ಪಾರ್ಶ್ವವಾಯು ಕಾಯಿಲೆಗೆ ತುತ್ತಾಗಿದ್ದರು. ತಕ್ಷಣ ಇವರ ಕುಟುಂಬದವರು ಹುಬ್ಬಳ್ಳಿಯ ಶುಶ್ರುತಾ ನರ್ಸಿಂಗ್ ಹೋಂಗೆ ದಾಖಲಿಸಿದ್ದರು. ಈ ಶುಶ್ರುತಾ ನರ್ಸಿಂಗ್ ಹೋಂ ನರರೋಗ ತಜ್ಞರೆಂದೇ ಖ್ಯಾತಿ ಹೊಂದಿರುವ ಡಾ. ಸತ್ತೂರರದ್ದು. ಈತನ ಮಗ ಡಾ. ಮಿಥುನ್ ಇಲ್ಲಿನ ಮೇಲ್ವಿಚಾರಕನಾಗಿದ್ದಾನೆ. ಮಿಥುನ್ ಸ್ವತಃ ನಡಗಡ್ಡಿಯವರ ಮಿದುಳು ಶಸ್ತ್ರ ಚಿಕಿತ್ಸೆಯನ್ನೂ ನಡೆಸಿದ್ದಾನೆ. ಆದರೆ ಮಾರನೆ ದಿನವೇ ನಡಗಡ್ಡಿ ಕೊನೆಯುಸಿರೆಳೆದಿದ್ದಾರೆ.

ಅಷ್ಟಕ್ಕೂ ಮಿದುಳಿಗೆ ಬಾಧಿಸುವ ಪಾರ್ಶ್ವವಾಯು ಕಾಯಿಲೆಯನ್ನು ಶಸ್ತ್ರಚಿಕಿತ್ಸೆಯ ಹೊರತಾಗಿಯೂ ಗುಣಪಡಿಸಿದ ಉದಾಹರಣೆಗಳು ಸಾಕಷ್ಟಿವೆ. ಏಕಾಏಕಿ ಮಿದುಳಿನ ಶಸ್ತ್ರಚಿಕಿತ್ಸೆಗೆ ಕೈಹಾಕುವಂತೆಯೂ ಇಲ್ಲ, ಆದರೆ ಅನುಭವಿ ವೈದ್ಯ ಸತ್ತೂರ ನಡಗಡ್ಡಿಯ ನಿತ್ರಾಣ ದೇಹವನ್ನು ನಿನ್ನೆಮೊನ್ನೆ ಕಲಿತುಬಂದ ಅನನುಭವಿ ಮಗ ಡಾ. ಮಿಥುನ್ ಕೈಗೊಪ್ಪಿಸಿದ್ದಾರೆ. ಅಷ್ಟಕ್ಕೂ ಮಿದುಳಿಗೆ ಪಾರ್ಶ್ವವಾಯು ತಗುಲಿದಾಗ ಮಿದುಳು ನಿಷ್ಕ್ರಿಯವಾಗುತ್ತದೆ. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ ಬ್ರೈನ್ ಹ್ಯಾಮರೇಜ್ ಅಂತ ಗುರುತಿಸಲಾಗುತ್ತದೆ. ಇಂಥಾ ಸಂದರ್ಭದಲ್ಲಿ ಮಿದುಳಿನ ಶಸ್ತ್ರಚಿಕಿತ್ಸೆ ನಡೆಸುವುದು ಸೂಕ್ತವಲ್ಲ ಎಂಬುದು ತಜ್ಞ ವೈದ್ಯರ ಅಭಿಪ್ರಾಯ. ಇಷ್ಟೆಲ್ಲಾ ವಿಚಾರ ಪ್ರಸಿದ್ಧ ನರತಜ್ಞರಾದ ಸತ್ತೂರರಿಗೆ ಗೊತ್ತಿಲ್ಲದಿರಲು ಸಾಧ್ಯವಿಲ್ಲ.

ಆದರೂ ಈ ಆಸಾಮಿ ನಡಗಡ್ಡಿಯವರ ಶಸ್ತ್ರಚಿಕಿತ್ಸೆಯ ಜವಾಬ್ದಾರಿಯನ್ನು ಅನನುಭವಿ ಮಗನಿಗೊಪ್ಪಿಸಿದ್ದಾರೆ. ಒಂದು ಮೂಲದ ಪ್ರಕಾರ ಮಿಥುನ್ ಕತ್ತರಿಯಾಡಿಸುತ್ತಲೇ ನಡಗಡ್ಡಿಯ ದೇಹ ನಿಶ್ಚಲವಾಗಿದೆ. ಆದರೆ ಬೇಕಂತಲೇ ಕೃತಕ ಉಸಿರಾಟ ನೀಡಿ ಹಲವಾರು ಗಂಟೆಗಳವರೆಗೆ ನಡಗಡ್ಡಿ ಬದುಕಿದ್ದಾರೆಂದು ಬಿಂಬಿಸಲಾಗಿದೆ. ಈ ಬಗ್ಗೆ ಶಸ್ತ್ರಚಿಕಿತ್ಸೆ ಮುಗಿಯುವ ಹೊತ್ತಿಗಾಗಲೇ ನಡಗಡ್ಡಿಯವರ ಆಪ್ತರಿಗೆ ಸಂಶಯ ಬಂದಿತ್ತು. ಆದುದರಿಂದಲೇ ನಗರದ ಮತ್ತೋರ್ವ ಜನಪ್ರಿಯ ನರರೋಗ ತಜ್ಞ ಡಾ. ಕ್ರಾಂತಿ ಕಿರಣ್‌ರನ್ನು ಕರೆತಂದು ಪರೀಕ್ಷಿಸುವಂತೆ ಒತ್ತಾಯಿಸಿದರು. ಆದರೆ ಡಾ. ಸತ್ತೂರ ಕಿರಣ್‌ರನ್ನು ಒಳ ಹೋಗಲು ಬಿಡಲಿಲ್ಲ, ಇದರಿಂದ ಮತ್ತಷ್ಟು ಸಂಶಯಗೊಂಡ ವಕೀಲರು ಅಲ್ಲೇ ಪ್ರತಿಭಟಿಸಿದಾಗ ನಿರ್ವಾಹವಿಲ್ಲದೆ ಕಿರಣ್ ಪ್ರವೇಶಕ್ಕೆ ಅನುಮತಿ ನೀಡಿದರು. ನಡಗಡ್ಡಿಯವರ ದೇಹ ತಪಾಸಣೆ ನಡೆಸಿ ಹೊರಬಂದ ಕಿರಣ್ ಸತ್ತು ಹಲವು ಗಂಟೆಗಳಾಗಿವೆ ಎಂದು ಘೋಷಿಸಿದರು. ಆಗಿನ್ನೂ ಶಸ್ತ್ರಚಿಕಿತ್ಸೆ ನಡೆದು ತುಂಬಾ ಸಮಯವಾಗಿರಲಿಲ್ಲ. ಹಾಗಾದರೆ ಸತ್ತೂರ ನಡಗಡ್ಡಿ ಸತ್ತ ವಿಚಾರವನ್ನು ಯಾಕೆ ತಿಳಿಸಲಿಲ್ಲ? ಯಾಕೆ ನಡಗಡ್ಡಿಯ ಮೃತದೇಹಕ್ಕೆ ಕೃತಕ ಉಸಿರಾಟ ನೀಡಿ ಯಾಮಾರಿಸಲು ನೋಡಿದರು? ಯಾಕೆ ಆತ ಡಾ. ಕಿರಣ್‌ಗೆ ತಪಾಸಣೆ ನಡೆಸುವುದಕ್ಕೆ ಅವಕಾಶ ಕೊಡಲು ಹಿಂದೇಟು ಹಾಕಿದರು?


ಸದ್ಯ ಒಳಗಿಂದೊಳಗೆ ಏನೇನೋ ಮಸಲತ್ತುಗಳು ನಡೆದು ನಡಗಡ್ಡಿಯ ಸಾವಿನ ವಿಚಾರ ತಣ್ಣಗಾದಂತಿದೆ. ಅವರ ಕುಟುಂಬದವರೂ ಈ ಬಗ್ಗೆ ಮಾತಾಡುತ್ತಿಲ್ಲ, ಆದರೆ ವಕೀಲರ ನಡುವೆ ಆ ಗುಮಾನಿ ಇನ್ನೂ ಜೀವಂತವಿರುವುದು ಸತ್ಯ. ಈ ರೀತಿ ಗುಮಾನಿಗಳ ಕೇಂದ್ರಬಿಂದುವಾಗಿರುವ ಡಾ. ಸತ್ತೂರ ಹುಬ್ಬಳ್ಳಿ ಕಿಮ್ಸ್‌ನಲ್ಲಿ ನರರೋಗ ತಜ್ಞರಾಗಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಖಾ... ನರ್ಸಿಂಗ್ ಹೋಂ ನಡೆಸುವಂತಿಲ್ಲ ಅಂತೊಂ... ನಿಯಮವಿದೆ. ಆದರೂ ಕೂಡಾ ಹಲವರು ಎರಡೆ... ಕಡೆಯ ಕಮಾಯಿಯ ಆಸೆಯಿಂದ ಖಾಸಗಿ ನರ್ಸಿ... ಹೋಂ ಹೊಂದಿರುವುದು ಗುಟ್ಟಿನ ವಿಚಾರವ... ಅಂಥವರಲ್ಲಿ ಡಾ. ಸತ್ತೂರ ಕೂಡಾ ಒಬ್ಬರು.

ಈತ ಕಿಮ್ಸ್‌ನಲ್ಲಿ ತನ್ನನ್ನು ಸಂಪರ್ಕಿಸು... ರೋಗಿಗಳನ್ನು ಆರ್ಥಿಕ ಸಾಮರ್ಥ್ಯದ ಆಧಾರ... ತನ್ನ ನರ್ಸಿಂಗ್ ಹೋಂಗೆ ದಾಖಲಿಸಿಕೊಳ್ಳುತ್ತ... ಅದಿಲ್ಲವಾದರೆ ರಾಷ್ಟ್ರಭಕ್ತರ ಮಾಲೀಕತ್ವದ ವಿವೇಕಾನ... ಆಸ್ಪತ್ರೆಗೆ ಸಾಗಹಾಕುವ ಕೆಲಸವನ್ನು ಲಾಗಾಯ್ತಿನಿಂದ... ನಡೆಸಿಕೊಂಡು ಬದುಕುತ್ತಿದ್ದಾರೆ. ವಿವೇಕಾನಂದ ಆ... ಯಲ್ಲೂ ಕಾರ್ಯನಿರ್ವಹಿಸುವ ಸತ್ತೂರ ಅಲ್ಲಿಂದ... ಗೌರವಧನದ ರೂಪದಲ್ಲಿ ಹಣ ಪೀಕುತ್ತಿದ್ದಾರೆ.

ಈ ಬಗ್ಗೆ ಹಲವರು ಸಂಬಂಧಿಸಿದವರಿಗೆ ದೂ... ನೀಡಿದ್ದೂ ಇದೆ. ಮುಂದೊಂದು ದಿನ ತಗುಲಿಕೊಳ್... ಭವಿಷ್ಯ ಅರಿತ ಸತ್ತೂರ ತನ್ನಿಬ್ಬರು ಮಕ್ಕಳನ್ನು ವೈದ್ಯ ವೃತ್ತಿಗೆ ಅಣಿಗೊಳಿಸಿದ... ಬಳಿಕ ತಮ್ಮ ಶುಶ್ರುತಾ ನರ್ಸಿಂಗ್ ಹೋಂ ಅನ್ನು ಅವರ ಸುಪರ್ದಿಗೊಪ್ಪಿಸಿದ... ಇದೀಗ ಮೇಲ್ನೋಟಕ್ಕೆ ಶುಶ್ರುತಾ ಸತ್ತೂರರ ಮಕ್ಕಳ ಆಸ್ಪತ್ರೆ. ಆದರೆ ಇ... ಮಿಕಗಳು ಪೂರೈಕೆಯಾಗುವುದು ಕಿಮ್ಸ್‌ನಿಂದಲೇ. ಸತ್ತೂರ ನಡಗಡ್ಡಿ... ದೇಹವನ್ನು ಅನನುಭವಿ ಮಗನ ಪ್ರಯೋಗಕ್ಕೆ ಒಪ್ಪಿಸಿದರೆ? ಇದರ ಹಿ... ದುಡ್ಡಿನ ದಾಹವಿತ್ತೇ? ಈ ಘಟನಾವಳಿಯ ಹಿಂದೆ ದುಷ್ಟ ಶಕ್ತಿ... ಕೈವಾಡವಿದೆಯೇ? ಈ ಪ್ರಶ್ನೆಗಳು ಹುಬ್ಬಳ್ಳಿಗರನ್ನು ಕಾಡುತ್ತಿದೆ.

ಸಣ್ಣದೊಂದು ತನಿಖೆ ನಡೆದರೆ ಎಲ್ಲವೂ ಗೊತ್ತಾಗಲಿದೆ.

• ಹುಬ್ಬಳ್ಳಿಯಾ...



ಈ ಬಾರಿಯದು ಒಂದು ಪ್ರಹಸನ

ಷ್ಟಾಚಾರ ನಿರ್ಮೂಲನೆಗಾಗಿ ತಾವು ಸುವ ಜನಲೋಕಪಾಲ ಮಸೂದೆ ಒಪ್ಪಿಕೊಳ್ಳಬೇಕೆಂದು ಒತ್ತಾಯಿಸುತ್ತಾ ಅಣ್ಣಾ" ನೇತೃತ್ವದಲ್ಲಿ ಚಳವಳಿ ನಡೆಯಿ ಎಹುತೇಕವಾಗಿ ಮಧ್ಯಮವರ್ಗದ ಗಗೇ ಭಾಗವಹಿಸಿರುವ ಈ ಚಳವಳಿ ಮು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಪ್ರತಿಭಟನೆಗಳ ವ್ಯಾಪ್ತಿ ನ್ಯಾಯಸಮ್ಮ ಶ್ವಾಸಾರ್ಹತೆ ಮತ್ತು ಇವುಗಳನ್ನು ಮುಂದುವರಿಸಿಕೊಂಡು ಹೋಗುವುದರ ಪ್ರಶ್ನೆಗಳು ಎದ್ದಿವೆ. ಕೆಲವರಂತೂ ಇದನ್ನು ಭಾರಿ ಶಕ್ತಿಯುತ ಚಳವಳಿಗಳಿಗೆ ಹೋಲಿಸುವ ದ ತೀರ್ಮಾನಗಳನ್ನೂ ಮಾಡಿದ್ದಾರೆ. ಭಾರತದ ಚಳವಳಿಯನ್ನು ಇಂದಿಗೂ ಜಗತ್ತಿನ ಇತಿಹಾಸದಲ್ಲೇ ದೊಡ್ಡದಾದ ಸಾಮೂಹಿಕ ಚಳವಳಿಯೆಂದು ಸಾಧ್ಯ. ಇಂತಹ ಒಂದು ಅಪರೂಪದ ಚಳವಳಿಗೆ ತಿಭಟನೆಯನ್ನು ಹೋಲಿಸಿರುವುದನ್ನಂತೂ ನಂಬಲೇ

ಈ "ಟೀಂ ಅಣ್ಣಾ" ಚಳವಳಿಯಲ್ಲಿ ಮಹಾತ್ಮಾ ಹೆಸರನ್ನೂ ಎಳೆದುತಂದಿರುವುದು ತೀರಾ, ತೀರಾ ವಾಗಿದೆ. ಖಾದಿ ಬಟ್ಟೆ ತೊಟ್ಟು, ಗಾಂಧಿ ಟೋಪಿ ಸತ್ಯಾಗ್ರಹ, ಅಹಿಂಸೆಯ ಹುರುಳನ್ನೊಪ್ಪಿಕೊಳ್ಳದೆ ಅವುಗಳ ಬಗ್ಗೆ ಮಾತನಾಡುತ್ತಾ ಜನರನ್ನು ಗುಂಪು ವುದು ಇವಿಷ್ಟೇ ಗಾಂಧಿ ಜೊತೆ ಹೋಲಿಸಲು ಅರ್ಹತೆಗಳೆಂದಾದರೆ ವಿಶ್ವಾದ್ಯಂತ ರಾಶಿರಾಶಿ ರುಗಳು ತಲೆಯೆತ್ತಲಿದ್ದಾರೆ. (ನನಗೆ ತಿಳಿದಿರುವ ಗಾಂಧಿ ಜೊತೆ ಹೋಲಿಸುವ ಕೆಲಸವನ್ನು ವಾಗಿ ಆರೆಸ್ಸೆಸ್/ಬಿಜೆಪಿ ನಾಯಕರು ಮಾಡಿಲ್ಲ). ಪ್ರತಿಭಟನೆಗಳಿಗೆ ಇಂದಿನ ಸರಕಾರ ತೋರಿದ ಗಳನ್ನು ಹಿಂದಿನ ಸರಕಾರಗಳು ಪ್ರತಿಕ್ರಿಯಿಸಿದ ದಿಗೆ ಹೋಲಿಕೆ ಮಾಡಲಾಗುತ್ತಿದೆ.

ಕ್ತ ಸನ್ನಿವೇಶಕ್ಕೂ ಜೆಪಿ ಚಳವಳಿ ಹಾಗೂ ತುರ್ತು ಘೋಷಣೆಯ ಸನ್ನಿವೇಶಕ್ಕೂ ಸಾಮ್ಯಗಳಿವೆಯೆಂದು ಅತ್ಯಂತ ಹಿರಿಯ ನಾಯಕ ಅಡ್ವಾನಿ ಮತ್ತಿತರ ಮುಖಂಡರುಗಳು ಮತ್ತೆ ಮತ್ತೆ ಹೇಳಿದ್ದಾರೆ. ಹಂತಕನ ರಾಜಕೀಯ ಉತ್ತರಾಧಿಕಾರಿಗಳು ಎಷ್ಟೇ ವಾದಿಗಳಾದರೂ ಅವರು ಗಾಂಧಿಯ ಹೆಸರೇಳಿ ಮ್ಮತತೆ ದೊರಕಿಸಿಕೊಳ್ಳುವುದು ದುಸ್ತರವಿದೆ. ಸ್ವಾತಂತ್ರ್ಯ ಚಳವಳಿಯಲ್ಲೆಂದೂ ಭಾಗವಹಿಸದ ಅದನ್ನು ಬಳಸಿಕೊಳ್ಳುವುದೂ ಕಷ್ಟವಿದೆ.) ಈ ಹೋಲಿಕೆಗಳು ಸಮಂಜಸವಲ್ಲವೆನ್ನಲು ಹಲವು ಗನ್ನು ನೀಡಬಹುದು.

ಜಾರೆಯವರ ಚಳವಳಿ ಒಂದೇ ವಿಷಯಕ್ಕೆ ಸೀಮಿತ ಘೋಷಿತ ಉದ್ದೇಶಗಳ ವಿಷಯವನ್ನು ಅಥವಾ ಮತ್ತು ರಾಷ್ಟ್ರವ್ಯಾಪಿ ಜನಬೆಂಬಲದ ಸ್ವರೂಪವನ್ನು ಂಡರೆ ಹಜಾರೆಯವರ ಚಳವಳಿ ಸ್ವಾತಂತ್ರ್ಯ ಚಳವಳಿ ಪಿ ಚಳವಳಿಯಂತೆಯೂ ಇಲ್ಲ. ಇಂದಿರಾ ಗಾಂಧಿ ಾಂಡಿದ್ದ ರಾಜಕೀಯವಾಗಿ ನಿರ್ಧಾರಾತ್ಮಕವಾದ ಲ್ಲಿ ದೋಷಗಳಿದ್ದವು ನಿಜ. ಆದರೆ ಅದಕ್ಕೂ ನಾಯಕತ್ವದ ಪೊಳ್ಳುಹರಟೆಗಳಿಗೂ ಹೋಲಿಕೆಯೇ ಇಂದಿನದು ಇತಿಹಾಸದ ಪುನರಾವರ್ತನೆ ಅಲ್ಲ, ಣಕ ಎನ್ನುವುದಂತೂ ಖಚಿತ.

ಆದರೆ ಕೆಲವು ವಿಷಯಗಳಲ್ಲಿ ಸ್ವಲ್ಪ ಹೋಲಿಕೆಯಿರುವುದನ್ನು ನಿರ್ಲಕ್ಷಿಸಲಾಗುವುದಿಲ್ಲ. ಆ ಕೆಲವು ವಿಷಯಗಳನ್ನಿಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಪ್ರಸಕ್ತ ಚಳವಳಿಗೂ ಜೆಪಿ ಚಳವಳಿಯ ನಂತರದ ಹಂತಗಳಿಗೂ ಸಾಮ್ಯಗಳಿರುವುದನ್ನು ಗಮನಿಸಬಹುದು. ಒಂದು, ಪದೇ ಪದೇ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಉಪೇಕ್ಷಿಸುವುದು. ಎರಡು, ಸರಕಾರ ಪದತ್ಯಾಗ ಮಾಡಬೇಕೆಂದು ಚುನಾವಣಾ ವಿಜಯಗಳಿಂದಲ್ಲ, ಬೀದಿಗಳಲ್ಲಿನ "ಜನ ಬೆಂಬಲ"ದ ಮೂಲಕ ಕಟ್ಟಕಡೆಯ ಎಚ್ಚರಿಕೆ ನೀಡುವುದು. ಜೆಪಿ ಚಳವಳಿಗೆ ಆರಂಭಿಕ ಹಂತದಲ್ಲಿ "ಜನ ಬೆಂಬಲ" ದೊರೆತದ್ದೇ ಭ್ರಷ್ಟಾಚಾರ, ದುರಾಡಳಿತ, ಹಣ ದುಬ್ಬರಗಳ ಬಗೆಗೆ ಜನರಿಗಿದ್ದ ನೈಜ ಅಸಮಾಧಾನದ ಆಧಾರದಲ್ಲಿ, ಕಾಲಾಂತರದಲ್ಲಿ ಜೆಪಿ ಚಳವಳಿಯನ್ನು ಜನಸಂಘ ಮತ್ತು ಆರೆಸ್ಸೆಸ್‌ನ ಕೂಟ ಹೈಜಾಕ್ ಮಾಡಿತು. ಅವೆರಡರ ಏಕಾಂಶ ಕಾರ್ಯಸೂಚಿ ಆಗಿದ್ದುದು ಇಂದಿರಾಗಾಂಧಿಯ ಪದಚ್ಯುತಿ. ಹೀಗೆ ಜೆಪಿ ಚಳವಳಿಯ ಮುಂದಿನ ಹಂತಗಳ ಈ "ಜನ ಬೆಂಬಲ"ದ ಹಿಂದೆ ಆರೆಸ್ಸೆಸ್ ಕೈವಾಡವಿದ್ದ ನಿಜಾಂಶ ಹಲವಾರು ವಿದ್ವಾಂಸರುಗಳ ಸಂಶೋಧನೆಗಳಿಂದ ನಿರ್ಧಾರಾತ್ಮಕವಾಗಿ ಸಾಬೀತುಪಟ್ಟಿದೆ.

ಇಂದು ಹಜಾರೆ ಚಳವಳಿಗೆ ಐಷಾರಾಮಿ ಮೇಲ್ವರ್ಗಗಳನ್ನೂ ಒಳಗೊಂಡಂತೆ, ಭ್ರಷ್ಟಾಚಾರದೆದುರು ಸಂಪೂರ್ಣ ಅಸಹಾಯಕರಾಗಿ ನಿಂತಿರುವ ಎಲ್ಲಾ ವರ್ಗಗಳ ಜನರ ಸ್ವಯಂಪ್ರೇರಿತ ಬೆಂಬಲವಿದೆ. ಈ ಅಂಶವನ್ನು ಕಡೆಗಣಿಸುವುದು ಮೂರ್ಖತನವಾಗುತ್ತದೆ. ಆದರೆ ಈ ಚಳವಳಿಯ ಹಿಂದೆಯೂ ಆರೆಸ್ಸೆಸ್ ಇರುವ ಕುರಿತಂತೆ ಅಶುಭಸೂಚಕ ವರದಿಗಳು ಬರುತ್ತಿವೆ. ಸಂಘ ಪರಿವಾರದ ಒಂದು ಅಂಗಸಂಸ್ಥೆಯಾಗಿ ರುವ ಎಬಿವಿಪಿ ರಾಷ್ಟ್ರಾದ್ಯಂತ ಶಾಲೆ ಕಾಲೇಜು ಬಂದ್‌ಗೆ ಕರೆ ನೀಡಿತು. ಕಾಂಗ್ರೆಸ್ ನೇತೃತ್ವದ ಆಡಳಿತವನ್ನು ಕೊನೆಗಾಣಿಸಲು "ಸಂಘಟಿತ ಕ್ರಮ"ಗಳಾಗಬೇಕೆಂದು (ಬಹುಶಃ ಭಾರತ್ ಬಂದ್ ಎಂದಾಗಿರ ಬಹುದು) ಅಡ್ವಾನಿ ಕರೆ ಕೊಟ್ಟರು. ಕಾಂಗ್ರೆಸ್ ಸರಕಾರ ಜನಾದೇಶವನ್ನು ಎಂದೋ ಕಳೆದುಕೊಂಡಿದೆ ಎನ್ನುತ್ತಿರು ವವರು ಇವರುಗಳೇ ಹೊರತು ಮತದಾರ ರಲ್ಲ. ಭ್ರಷ್ಟಾಚಾರ ಎನ್ನುವುದು ವ್ಯವಸ್ಥೆಯ ಜಾಡ್ಯವಾಗಿದ್ದು ಅದು ಎಲ್ಲಾ ರಾಜಕೀಯ ಪಕ್ಷಗಳನ್ನೂ ಒಳಗೊಂಡಿದೆ. ಭ್ರಷ್ಟಾಚಾರ ವಿರುದ್ಧದ ಹೋರಾಟದಿಂದ ಆರಂಭವಾದ "ಟೀಂ ಅಣ್ಣಾ" ಆಗ್ರಹಗಳು ಮತ್ತು ಉದ್ದೇಶಗಳು ಬಹುಬೇಗನೆ ಬದಲಾಗಿ ಈಗ ಕಾಂಗ್ರೆಸ್‌ಅನ್ನು ಕಿತ್ತೊಗೆಯುವ ವಿಷಯಕ್ಕೆ ಬಂದು ನಿಂತಿವೆ. "ಅಣ್ಣಾ ಟೀಂ"ನ ಜನ ಲೋಕಪಾಲ ಮಸೂದೆಯ ಕರಡನ್ನು ಬಿಜೆಪಿ ಸೇರಿದಂತೆ ವಿಎಕ್ಕೆಲ್ಲ ಪ್ರತಿಪಕ್ಷಗಳು ಬೆಂಬಲಿಸದಿರುವುದು ಗಮನಾರ್ಹವಿದೆ. ಯಾವ ಅಸಮಾಧಾನಕ್ಕೆ ಹಜಾರೆ ಧ್ವನಿ ಕೊಟ್ಟರು ವರೋ ಆ ಅಸಮಾಧಾನದ ಉರಿಯಲ್ಲಿ ಅವೆಲ್ಲವೂ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಕನಿಷ್ಠ ಎಡಪಕ್ಷಗಳು ಈ ಅಣ್ಣಾ ಹಜಾರೆ ಬಂಡಿಯನ್ನೇರಲು ಹಿಂದೇಟು ಹಾಕುತ್ತಿರುವಂತೆ ತೋರುವು ದನ್ನು ನಮ್ಮ ಅದೃಷ್ಟವೆನ್ನಬೇಕು.

ಜನರ ನೈಜ ಅಸಮಾಧಾನವನ್ನು ಒಂದು ಸ್ಪಷ್ಟ ಸೈದ್ಧಾಂತಿಕ ನೋಟವುಳ್ಳ, ಸುಸಂಘಟಿತ ಚಳವಳಿಯ ಅಡಿಯಲ್ಲಿ ನಿಗ್ರಹಿಸದೆ ಹೋದರೆ ಸುಸ್ಪಷ್ಟ ಅಜೆಂಡಾಗಳಿರುವ ಸುಸಂಘಟಿತ ರಾಜಕೀಯ ಶಕ್ತಿಗಳು ಅದನ್ನು ಹೈಜಾಕ್ ಮಾಡಿಕೊಳ್ಳುವ ಅಪಾಯವಿದೆ. (ಅಣ್ಣಾರ ನೋಟ ಭ್ರಷ್ಟಾಚಾರ ವಿರುದ್ಧದ ಹೋರಾಟಕ್ಕೆ ಸೀಮಿತವಾಗಿದೆ. ಭ್ರಷ್ಟಾ ಚಾರದಿಂದ ಆಗುವ ಹಣದುಬ್ಬರ ಮಹಿಳೆಯರ ಆತಂಕಕ್ಕೆ ಕಾರಣವಾಗಿದೆ ಎನ್ನುತ್ತಿದ್ದಾರೆ ಅಣ್ಣಾ!). ಚಾರಿತ್ರಿಕವಾಗಿ ನೋಡಿದರೆ ಬಲಪಂಥೀಯರು ಅಧಿಕಾರಕ್ಕೇರಿರುವುದೇ ಅವ್ಯವಸ್ಥೆ ಮತ್ತು ಅಸಮಾಧಾನಗಳಿರುವ ಕಾಲಾವಧಿಗಳಲ್ಲಿ, ಅಸ್ತಿತ್ವದಲ್ಲಿರುವ ಸಂಸ್ಥೆಗಳು ಸರಿಯಾಗಿ ಕಾರ್ಯಾಚರಿಸುತ್ತಿಲ್ಲವೆಂಬ ನೆಪವೊಡ್ಡಿ ಅವನ್ನು ನಾಶಗೊಳಿಸಿದ ಬಲಪಂಥೀಯರು ವ್ಯವಸ್ಥೆಯ ಭ್ರಷ್ಟಾಚಾರ ಮತ್ತು ಅವ್ಯವಸ್ಥೆಯನ್ನು ತೊಡೆದು ಹಾಕುವುದಾಗಿ ಭರವಸೆ ನೀಡಿ ಅಧಿಕಾರದ ಗದ್ದುಗೆ ಹಿಡಿದಿದ್ದರು. ಈ ಸಂದರ್ಭದಲ್ಲಿ, 1920ರ ದಶಕಗಳಲ್ಲಿ ಇಟಲಿಯಲ್ಲಿ ಫ್ಯಾಶಿಸಂ ಮತ್ತು 1930ರ ದಶಕಗಳಲ್ಲಿ ಜರ್ಮನಿಯಲ್ಲಿ ನಾಜಿಸಂನ ಉಚ್ಛ್ರಾಯವನ್ನು ಆಳವಾಗಿ ಅಭ್ಯಸಿಸಬೇಕಾಗಿದೆ. ಭಾರತದ ಬಲಪಂಥೀಯರು ಯುರೋಪಿನ ಫ್ಯಾಶಿಸಂ ಅನುಭವಗಳಿಂದ ಅಗತ್ಯಕ್ಕೂ ಸ್ವಲ್ಪ ಜಾಸ್ತಿಯೇ ಕಲಿತುಕೊಂಡಿದ್ದಾರೆ. (ಭಾರತದ ಮಟ್ಟಿಗೆ ಫ್ಯಾಶಿಸಂ ಬಹುಸಂಖ್ಯಾತರ ಕೋಮುವಾದದ ರೂಪವನ್ನು ತಳೆಯಲಿದೆ ಎಂದು ಜವಹರಲಾಲ್ ನೆಹರೂ ಭವಿಷ್ಯ ನುಡಿದಿದ್ದರು). ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವವರೆಲ್ಲ ಚರಿತ್ರೆಯಿಂದ ಪಾಠ ಕಲಿಯಬೇಕಾಗಿದೆ. ನಮ್ಮ ಪ್ರಜಾಸತ್ತೆಯನ್ನು ಪೋಷಿಸುವ ಸಂಸ್ಥೆಗಳ ಅಧಿಕಾರವನ್ನು ಮೊಟಕುಗೊಳಿಸುವುದರ ವಿರುದ್ಧ ಅವರೆಲ್ಲರೂ ಐಕ್ಯಮತದಿಂದ ಕಾರ್ಯಾಚರಿಸದಿದ್ದರೆ ಮುಂದೊಂದು ದಿನ ಅಗಾಧ ಬೆಲೆ ತೆರಬೇಕಾಗಿ ಬರಬಹುದು.

"ಅಣ್ಣಾ ಟೀಂ"ನ ಬೇಡಿ, ಕೇಜ್ರಿವಾಲ್, ಭೂಷಣ್‌ಗಳು ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ವಿಧ್ಯುಕ್ತ ಪ್ರಕ್ರಿಯೆಗಳಿಗೆ ನಿರೀಕ್ಷಿತ ಮಟ್ಟದ ಗೌರವವನ್ನು ತೋರಿಸಿಲ್ಲ. ಅವರು ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ತಮ್ಮ ಹೇಳಿಕೆಯೇ ಅಂತಿಮ ಎಂದು ನಿರ್ಧರಿಸಿಬಿಟ್ಟಿದ್ದಾರೆ. ಸರಕಾರ ಕೇವಲ ತಮ್ಮ ಆವೃತ್ತಿಯನ್ನೇ ಸಂಸತ್ತಿನಲ್ಲಿ ಮಂಡಿಸಬೇಕೆಂದು ಆಗ್ರಹಿಸುತ್ತಾರೆ. ಅಲ್ಲವಾದರೆ ಸರಕಾರ "ಭ್ರಷ್ಟ" ಎನ್ನುತ್ತಾರೆ. ಸಂಸತ್ತಿನಲ್ಲಿ ಖಾಸಗಿ ಮಸೂದೆಯೊಂದನ್ನು ಮಂಡಿಸುವಂತೆ ಯಾವುದೇ ರಾಜಕೀಯ ಪಕ್ಷದ ಅಥವಾ ಯಾವನೇ ವ್ಯಕ್ತಿಯ ಮನವೊಲಿಸುವುದು ಇವರ ಅಜೆಂಡಾದಲ್ಲಿ ಇಲ್ಲ. ಯಾಕೆಂದರೆ ಇವರ ದೃಷ್ಟಿಯಲ್ಲಿ ಪ್ರಾಯಶಃ ಎಲ್ಲಾ ರಾಜಕಾರಣಿಗಳೂ ಭ್ರಷ್ಟರು, ಸಂಸತ್ತಿನ ಆಗುಹೋಗುಗಳನ್ನು ನಿರ್ಧರಿಸುವವರು ತಾವೇ ಖುದ್ದು ನಿರೂಪಿಸುವ "ನಾಗರಿಕ ಸಮಾಜ" ಎಂದಿರಬಹುದು. ಎನ್‌ಸಿಪಿಆರ್‌ಐ ಸಂಸ್ಥೆಯ ಖ್ಯಾತ ಧುರೀಣರು ಹಾಗೂ ಬೆಂಬಲಿಗರಾದ ಅರುಣಾ ರಾಯ್, ಶೇಖರ್ ಸಿಂಗ್, ನಿಖಿಲ್ ಡೇ, ನ್ಯಾ! ಎ.ಪಿ. ಶಾ ರಂತಹವರು ಲೋಕಪಾಲಕ್ಕಾಗಿ ಮೊದಲು ಹೋರಾಟ ಮಾಡಿದವರು. ನಿನ್ನೆ ತನಕ ಅವರ ಜೊತೆಯಲ್ಲೇ ಕೆಲಸ ಮಾಡಿದ ಇವರು ಇಂದು ಅವರೆಲ್ಲರ ಮಾತು ಕೇಳಲೂ ಸಿದ್ಧರಿಲ್ಲ.

ಇವರ ಕ್ರಮಗಳೆಲ್ಲವೂ ಗಾಂಧಿ ಮಾರ್ಗಕ್ಕಿಂತ ಹರದಾರಿ ದೂರವಾಗಿವೆ. ಪ್ರಜಾತಂತ್ರದ ಮೂಲಮಂತ್ರವೇ ಪರ್ಯಾಲೋಚನೆ, ಚರ್ಚೆ ಮತ್ತು ಮನವೊಲಿಸುವಿಕೆಯೇ ಹೊರತು ಸತ್ಯದ ಮೇಲೆ ಸ್ವಾಮ್ಯವನ್ನು ಹೊಂದಿದವರು ತಾವು ಮಾತ್ರ ಎನ್ನುವುದಲ್ಲ. 'ಇತರರ ಅಭಿಪ್ರಾಯಗಳನ್ನು ಒಪ್ಪದೆ ಎಷ್ಟೇ ದೃಢವಾಗಿ ವಿರೋಧಿಸಿದರೂ ಅವರನ್ನು ಗೌರವದಿಂದ ಕಾಣಬೇಕು' – ಗಾಂಧಿಯ ಅಹಿಂಸಾ ಮಾರ್ಗದ ಕಲ್ಪನೆ ಭಾಗಶಃ ಇದೇ ಭಾವನೆಯಿಂದ ಜನಿಸಿದೆ. ಅಂದಿನ ಗಾಂಧಿ ಮಾರ್ಗದ ಸತ್ಯಾಗ್ರಹಿಯೊಬ್ಬ ದೈನ್ಯತೆಯಿಂದ ಕೂಡಿರಬೇಕಿತ್ತು; ಕಲಿಯಲು ಸಿದ್ಧನಿರಬೇಕಿತ್ತು; ಮತ್ತು ಸಂಧಾನದ ಮೂಲಕ ತೀರ್ಮಾನಕ್ಕೆ ಬರಲು ಸಿದ್ಧನಿರಬೇಕಿತ್ತು. ಮೌಲ್ಯಗಳಿಗಾಗಿ ಹೋರಾಡುತ್ತಿದ್ದ ಸತ್ಯಾಗ್ರಹಿಗಳು ಖುದ್ದು ತಾವೇ ಶುದ್ಧರಾಗಿದ್ದುಕೊಂಡು ಅದೇ ಮೌಲ್ಯಗಳನ್ನು ತಾವೂ ಅನುಸರಿಸಬೇಕಿತ್ತು. ಜಾತ್ಯತೀತತೆ ಮತ್ತು ಹಿಂದೂ ಮುಸ್ಲಿಂ ಐಕ್ಯತೆಯಲ್ಲಿ ನಂಬಿಕೆ ಇಲ್ಲದವರನ್ನು ಸತ್ಯಾಗ್ರಹಿಗಳಾಗಲು ಗಾಂಧೀಜಿ ಕನಸಿನಲ್ಲೂ ಅನುಮತಿಸುತ್ತಿರಲಿಲ್ಲ. ಗಾಂಧಿಯ ಉತ್ತರಾಧಿಕಾರಿಗಳೆಂದು ಎಣಿಸಲ್ಪಟ್ಟಿರುವ ಅನೇಕ ಮಂದಿ ಜನಸಮೂಹವನ್ನು ಒಟ್ಟು ಸೇರಿಸುವ ಹಂಬಲದ ಮಧ್ಯೆ ಇದನ್ನೆಲ್ಲ ಮರೆತುಬಿಟ್ಟಿದ್ದಾರೆ.

ಆದಿತ್ಯ ಮುಖರ್ಜಿ

(ಸಮಕಾಲೀನ ಇತಿಹಾಸದ ಪ್ರಾಧ್ಯಾಪಕರು, ಜವಹರ್‌ಲಾಲ್ ನೆಹರೂ ವಿವಿ)

ಕನ್ನಡಕ್ಕೆ: **ಸುರೇಶ್ ಭಟ್**

ಕೃಪೆ: express@expressindia.com


ಹೃದಯ ತಟ್ಟಿದ ಶಿವ

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ನ್ನಡವೆಂದರೆ ಸುಗಮ ಸಂಗೀತವಲ್ಲ; ಕನ್ನಡವೆಂದರೆ ಚಲನಚಿತ್ರವಲ್ಲ, ದರೆ ರಾಜ್ಯೋತ್ಸವ ಸಂಭ್ರಮವೂ ಅಲ್ಲ.' ಈಚೆಗೆ ಬೆಂಗಳೂರಿನಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ ಹಿರಿಯ ರೊಬ್ಬರು ಹೇಳಿದರು. ಕನ್ನಡ ಸಾಹಿತ್ಯದಲ್ಲಿ ಬರೆಯುವವರನ್ನು, ಕನ್ನಡ ಸಿನಿಮಾಗಳಿಗೆ ಪರಬರಾಜು ಮಾಡಿ ಗೀತೆ ಕವರನ್ನು ನಮ್ಮಲ್ಲಿ ಏಕಕಾಲಕ್ಕೆ ಗಳೆಂದೇ ಕರೆಯಲಾಗುತ್ತದೆ. ಜಾವೇದ್ ಗುಲ್ಜಾರ್ ತರಹದ ಕವಿಗಳು ಸಿನಿಮಾ ಸಾಹಿತ್ಯ ಎರಡರಲ್ಲೂ ತಮ್ಮ ಪ್ರತಿಭೆ ಸಬುದಾರಿಕೆಯಿಂದ ಖ್ಯಾತರಾಗಿದ್ದಾರೆ. ಸಿನಿಮಾರಂಗದ ದಿಗ್ಗಜ ಗೀತ ರರಾದ ವಾಲಿ, ವೈರಮುತ್ತು ನಲ್ಲಿ ಎಷ್ಟೇ ಖ್ಯಾತನಾಮರಾಗಿದ್ದರೂ ತಮಿಳು ಸಾಹಿತ್ಯದಲ್ಲಿ ಸಾಹಿತಿಗಳೆಂದು ಸಿಯೇ ಇಲ್ಲ, ಜಯಂತ ನಿಯವರ ಸಾಹಿತ್ಯ ಕೃತಿಗಳಂತೆ ದೊಡ್ಡ



ಅವರು ಸಿನಿಮಾಗಳಿಗೆಂದು ಬರೆದ ಹಾಡುಗಳ ಸಂಕಲನವೊಂದು ಹೊರಬಂತು. ಇಡೀ ಪುಸ್ತಕದ ತುಂಬಾ ಬರೀ ಹಾಡುಗಳಿದ್ದರೂ ಓದುಗರು ಅವನ್ನು ಸಂಗೀತ ಬೆರೆಸಿಯೇ ಓದಿಕೊಂಡರು. ಕನ್ನಡದ ಎರಡು, ಮೂರು, ನಾಲ್ಕು ಮತ್ತು ನಲವತ್ತನೇ ದರ್ಜೆ ಸಿನಿಮಾದ ಹಾಡುಗಳು ಹೇಗೆ ಹುಟ್ಟಿಕೊಂಡವು ಎಂಬುದನ್ನು ದಿನಪತ್ರಿಕೆಯೊಂದರ 'ಹಾಡು ಹುಟ್ಟಿದ ಸಮಯ' ಎಂಬ ಅಂಕಣದಲ್ಲಿ ಲೇಖಕರೊಬ್ಬರು ಜಗತ್ತಿನ ನೂರಾ ಎಂಬತ್ತನೇ ಅದ್ಭುತ ಕಂಡವರಂತೆ ಬರೆಯುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ.

ಸಿನಿಮಾಗಳಿಗೆ ಹಾಡು ಬರೆದು ಒಂದಿಷ್ಟು ಹೆಸರು ಮಾಡಿರುವ ಹೃದಯ ಶಿವ ಕನ್ನಡ ಸಾಹಿತ್ಯದಲ್ಲಿ ಅದೃಷ್ಟ ಪರೀಕ್ಷೆಗೆ ಹೊರಟವರಂತೆ 'ಮೂಕ ಮೈಲಿಗಲ್ಲು' ಕಾವ್ಯ ಸಂಕಲನವನ್ನು ಹೊರತಂದಿದ್ದಾರೆ. ತಮ್ಮ 'ಒಂದಿಷ್ಟು ಮಾತು'ವಿನಲ್ಲಿ 'ಸರ್ವಜ್ಞನ ತ್ರಿಪದಿಗಳು, ಶರಣರ ವಚನಗಳು, ದಾಸರ ಕೀರ್ತನೆಗಳು, ಸಂತರ ತತ್ವ ಪದಗಳು, ಕುವೆಂಪು, ದ.ರಾ.ಬೇಂದ್ರೆ, ಅಡಿಗ, ಡಿ.ವಿ.ಜಿ., ರಾಜರತ್ನಂ, ಶಿವಪ್ರಕಾಶ್, ಪಿ.ಲಂಕೇಶ್, ಪಿ.ಬಿ.ಶೆಲ್ಲಿ, ಯೇಟ್ಸ್, ವರ್ಡ್ಸ್‌ವರ್ತ್ ರಚನೆಗಳು ಹಾಗೂ ಹಳೆಯ ಮೈಸೂರು ಪ್ರಾಂತ್ಯದ ಜಾನಪದ ಗೀತೆಗಳು ಮತ್ತು ಸೋಬಾನೆ ಪದಗಳು ನನ್ನ ಕಾವ್ಯ ರಚನೆಗೆ ಸ್ಫೂರ್ತಿ ನೀಡಿವೆ' ಎಂದು ಹೇಳಿ ಓದುಗರು ಕಕ್ಕಾಬಿಕ್ಕಿಯಾಗುವಂತೆ ಮಾಡುತ್ತಾರೆ. ಈ ಮೇಲಿನ ಯಾರೊಬ್ಬರನ್ನಾದರೂ ಕವಿ ಹೃದಯ ಶಿವ ಗಂಭೀರವಾಗಿ ಓದಿಕೊಂಡಿರುವ ಯಾವ ಕುರುಹುಗಳು ಈ ಸಂಕಲನದ ಯಾವ ಪದ್ಯದಲ್ಲೂ ಕಾಣುವುದಿಲ್ಲ. ಅವರು ಕವಿಯಾಗಲೇಬೇಕೆಂಬ ಹಟತೊಟ್ಟಂತಿದೆ. ಈ ಹಟದಲ್ಲಿಯೇ ಅವರು ಕವಿತೆಗಳು ಕಾವ್ಯದ ದಿರಸು ತೊಡುವ ಮುನ್ನವೇ ವಾಚ್ಯಗೊಂಡು ಪೇಲವ ಅನ್ನಿಸತೊಡಗುತ್ತವೆ. ಇದ್ದುದ್ದರಲ್ಲಿ ಅವರ 'ಶಿವ ಪುರಾಣ'ದ ಮಾತುಗಳು ಕೊಂಚ ಖುಷಿಕೊಡುತ್ತವೆ. ಗಂಭೀರ ಸಾಹಿತ್ಯ ಓದಿನ ಕೊರತೆ ಇದ್ದಾಗ ಮಾತ್ರ ಇಲ್ಲಿನ ಅಯೋಧ್ಯ, ಒಡೆದ ಗಾಜು, ರಶ್ಮಿಯ ಮುತ್ತು, ಪ್ರೇಮ ಜಗಳ, ಪ್ರಶ್ನೋತ್ತರ, ಆಲೆಮಾರಿ ಮನಸು, ಹೋಗಲಿಬಿಡು, ನಿನ್ನ ತುಟಿಗೇಕೆ ಮೌನವ್ರತ, ಬದಲಾಗಿ ನೀನು ಸಿಕ್ಕಿದೆ, ಕನ್ನಡಿ ಮತ್ತು ಹುಡುಗಿ... ತರಹದ ಬಾಲಿಶ ಪದ್ಯಗಳು ದಂಡಿಯಾಗಿ ಹುಟ್ಟಿಕೊಳ್ಳಬಲ್ಲವು. ಹೃದಯ ಶಿವ ತಮ್ಮ ಕಾವ್ಯಸುಧಾರಣೆಯ ಸಲುವಾಗಿಯಾದರೂ ತಮಗೆ ಸ್ಫೂರ್ತಿ ನೀಡಿದ ಕವಿಗಳನ್ನು ಮತ್ತೆ ಎಂಟ್ಹತ್ತು ಸಲ ಗಂಭೀರವಾಗಿ ಓದಿಕೊಳ್ಳಬೇಕಾದ ತುರ್ತಿದೆ.

ಮೂಕ ಮೈಲಿಗಲ್ಲು

ಹೃದಯ ಶಿವ

ಪ್ರಕಾಶಕರು: ಕಣ್ವ ಪ್ರಕಾಶನ, ನಂ.11/26, 10ನೇ 'ಎ' ಕ್ರಾಸ್, 2ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು-86

ಪುಟಗಳು: 108, ಬೆಲೆ: ರೂ.65, ಪ್ರಕಟಣೆ: 2011

ಪಾಕ ಚಾಲನೆ...

'ತಿನುವವರ ಎಡಕ್ಕೂ ಹೊಲಿಯುವವರ ಬಲಕ್ಕೂ ಕೂರಬಾರದು' ಎಂಬುದು ನಾನು ಚಿಕ್ಕಂದಿನಲ್ಲಿ ಕೇಳಿದ ಗಾದೆ. ಅದರ ಅರ್ಥ ಮಾತ್ರ ಅನಂತರದ ವರ್ಷಗಳಲ್ಲಿ ನನಗೆ ಸರಿಯಾಗಿ ಆಯಿತು. ಅದೇ ಗಾದೆಯನ್ನು ಸ್ವಲ್ಪ ಅನುಸರಿಸಿ 'ಡ್ರೈವಿಂಗ್ ಬಲ್ಲವರು ಮುಂದಿನ ಸೀಟಲ್ಲೂ ಅಳ್ಳೆದೆಯವರು ಹಿಂದಿನ ಸೀಟಲ್ಲೂ ಕೂರಬಾರದು' ಎಂದು ಹೇಳಬೇಕು. ಯಾಕೆಂದರೆ, ಸರಿಯಾಗಿ ಡ್ರೈವಿಂಗ್ ಬಲ್ಲವರು ಚಾಲಕರ ಎಡಭಾಗದಲ್ಲಿ ಕೂತರೆ, ಅವರೂ ಡ್ರೈವರ್‌ನ ಟೆನ್‌ಶನ್ ಅನುಭವಿಸುತ್ತಿರುತ್ತಾರೆ. ಕೈಕಾಲುಗಳು ಸುಮ್ಮನಿದ್ದರೂ ಅವರ ಮಿದುಳಿನಲ್ಲಿ ಡ್ರೈವಿಂಗ್ ಕ್ರಿಯೆ ನಿರಂತರ ನಡೆಯುತ್ತಿರುತ್ತದೆ. ಹೀಗಾಗಿ ರಸ್ತೆಯಲ್ಲಿ ಗುಂಡಿ ಕಂಡಾಗ, ಎದುರಿನ ಗಾಡಿಗೆ ತೀರ ಹತ್ತಿರವಾದಾಗ ಬ್ರೇಕ್ ಒತ್ತುವಂತಾಗುತ್ತಿರುತ್ತದೆ. ಇನ್ನು ಚಾಲಕರು ಹೊಸಬರು, ಅನುಭವಿಗಳಲ್ಲ ಎಂದು ಗೊತ್ತಿದ್ದಾಗ ಈ ಕ್ರಿಯೆ ಇನ್ನಷ್ಟು ಚುರುಕುಗೊಂಡು "ವೇಗ ಜಾಸ್ತಿ ಆಯ್ತು ಕಡಿಮೆ ಮಾಡು; ಆ ಗುಂಡಿ ತಪ್ಪಿಸ್‌ಬಹುದಿತ್ತು; ಈಗ ಓವರ್ ಟೇಕ್ ಮಾಡ್‌ಬೇಡ; ಎಡಕ್ಕೆ ಹೋದದ್ದು ಜಾಸ್ತಿ ಆಯ್ತು..." ಹೀಗೆ ಪುಕ್ಕಟೆ ಸಲಹೆಯನ್ನು ಕೊಡುತ್ತಿರುತ್ತಾರೆ. ಚಾಲಕರು ಮುಂಗೋಪಿ ಆಗಿದ್ದರಂತೂ ಕೂತಿದ್ದ ಯಾರಿಗೂ ಸಮಾಧಾನವೇ ಇರುವುದಿಲ್ಲ. ಡ್ರೈವರ್ ಜಾಗದಲ್ಲಿ ಹೆಂಡತಿ ಅಥವಾ ಮಗಳಿದ್ದರಂತೂ ಬಿಟ್ಟಿ ಸಲಹೆಗೆ ಕೊನೆಯೇ ಇರುವುದಿಲ್ಲ. ಒಂದು ಕಾಲಕ್ಕೆ ಈ ಕಿರುಕುಳ ಅನುಭವಿಸಿದ ಬಳಿಕ ಈ ಒಟ್ಟು ಪ್ರತಿ ಕ್ರಿಯೆಯ ಬಗ್ಗೆ ನನಗೆ ನನ್ನದೇ ಆದ ನಿಲುವುಗಳಿವೆ.

ಡ್ರೈವಿಂಗ್‌ಗೂ ಒಂದು ವ್ಯಾಕರಣವಿದೆ. ಇದೊಂದು ಭಾಷೆ ಇದ್ದಂತೆ. ಭಾಷೆಯನ್ನು ಪ್ರಜ್ಞಾಪೂರ್ವಕವಾಗಿ ಕಲಿಕೆಯಿಂದ ಮೈಗೂಡಿಸಿಕೊಂಡಂತೆ ಡ್ರೈವಿಂಗ್ ಕೂಡ ನಮಗೆ ಲಭಿಸುತ್ತದೆ. ತೊದಲು ಮಾತು ಕಲಿತೇ ಪುಟ್ಟ ರಚನೆ, ವಾಕ್ಯಗಳನ್ನು ನಾವು ಬಳಸಲು ಕಲಿಯುವಂತೆ ಡ್ರೈವಿಂಗ್‌ನಲ್ಲಿ ತೊದಲು ಹೆಜ್ಜೆ ಇಟ್ಟೇ, ಅವರವರ ಕಲಿಕೆಯ ವೇಗವನ್ನು ಅನುಸರಿಸಿ ಪ್ರಮಾದಗಳನ್ನು ಮಾಡಿ, ಅದರಿಂದಲೇ ಪಾಠದ ಕಲಿಕೆಯಾಗುತ್ತದೆ. ಅದೇ ರೀತಿಯಲ್ಲಿ ಭಾಷೆಗೆ ಉಪಭಾಷೆಗಳನ್ನು ನಾವು ಹಿರಿಯ-ಕಿರಿಯ ವಯಸ್ಸಿನವರ ಚಾಲನೆಯಲ್ಲಿ, ಹೊಸಬರ-ಹಳಬರ ಮತ್ತು ಪುರುಷರ-ಮಹಿಳೆಯರ ಚಾಲನೆಯಲ್ಲಿ ಕಾಣಲು ಸಾಧ್ಯವಿದೆ. ಡ್ರೈವಿಂಗ್‌ನ ಮೂಲ ವ್ಯಾಕರಣವನ್ನು ಎಲ್ಲರೂ ಒಪ್ಪಿಕೊಂಡರೂ ಅವರವರ ಸ್ವಭಾವ, ವಯಸ್ಸು, ಧೈರ್ಯ, ಛಾತಿ, ಪ್ರದೇಶ ಇವುಗಳಿಗನುಸಾರವಾಗಿ, ಅಲ್ಪಸ್ವಲ್ಪ ಭಿನ್ನತೆಗಳು ಇರುತ್ತವೆ ಮತ್ತು ಆ ಕಾರಣಕ್ಕಾಗಿ ಅವು ಉಪಭಾಷೆಗಳು ಎನಿಸಿಕೊಳ್ಳುತ್ತವೆ. ಇವುಗಳ ಜೊತೆಗೆ ವರ್ಗಾಧಾರಿತ ಉಪಭಾಷೆಗಳೂ (ಸಾಮಾಜಿಕ ಉಪಭಾಷೆ ಎನ್ನೋಣವೇ?) ಇರುತ್ತವೆ. ಲಾರಿ ಡ್ರೈವರ್‌ಗಳ ಭಾಷೆ ಕಾರು ಡ್ರೈವರ್‌ಗಳದ್ದಲ್ಲ, ಕೆಲವು ಊರುಗಳಲ್ಲಿ ಆಟೋರಿಕ್ಷಾ ಡ್ರೈವರ್‌ಗಳ ಭಾಷೆ ಭಯ ತರಿಸುವಂತಿರುತ್ತದೆ. ಕೆಎಸ್ಸಾರ್ಟಿಸಿ ಬಸ್ ಡ್ರೈವರ್‌ಗಳ ಭಾಷೆ ಮಗದೊಂದು ರೀತಿ. ರಸ್ತೆಯಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಮರ್ಯಾದೆ ನೀಡಬೇಕೆಂಬ ಅಘೋಷಿತ ನಿಯಮ ಆಯಾ ಊರಲ್ಲಿ ಚಾಲ್ತಿಯಲ್ಲಿರುತ್ತದೆ. ಅದಕ್ಕೆ ಭಂಗ ಬಂದಾಗ, ಪ್ರತಿಷ್ಠೆಗೆ ಪೆಟ್ಟು ಬಿದ್ದಿತೆಂದು ಅವರು ತೀಕ್ಷ್ಣ ಪ್ರತಿಕ್ರಿಯೆ ತೋರುವುದೂ ಇರುತ್ತದೆ. ಇರಲಿ, ಒಟ್ಟಿನಲ್ಲಿ ಇವೆಲ್ಲವೂ ಡ್ರೈವಿಂಗ್ ಎಂಬ ಮೂಲಭಾಷೆಯ ಉಪಭಾಷೆಗಳು ಎನ್ನಲು ಅಡ್ಡಿಯಿಲ್ಲ. ಹೀಗಾಗಿ ಪ್ರತಿ ಉಪಭಾಷೆಗೂ ಅದರದೇ ಆದ ಸ್ವಾಯತ್ತತೆ ಇರುತ್ತದೆ. ಅದನ್ನು ಪಳಗಿದ ಚಾಲಕರು ಎಳೆಯ ಚಾಲಕರ ಸಂದರ್ಭದಲ್ಲಿ, ಪುರುಷರು ಮಹಿಳೆಯರ ಸಂದರ್ಭದಲ್ಲಿ ಮಾನ್ಯ ಮಾಡುವುದೇ ವಿರಳ. ಭಾಷಾ ದಾದಾಗಿರಿಯಂತೆ ಇದು ಚಾಲನಾ ದಾದಾಗಿರಿ! ನಿಲ್ಲಿ ಒಂದ್ ನಿಮಿಷ. ಭಾಷೆ-ಉಪಭಾಷೆ-ಭಾಷಾದಾದಾಗಿರಿ ಡ್ರೈವಿಂಗ್‌ಗೆ ಮಾತ್ರವಲ್ಲ; ಪಾಕಗೃಹದೊಳಗೂ ಸ್ಥಾನ ಪಡೆದಿದೆ. ಪ್ರತಿಯೊಬ್ಬರಿಗೂ ಅವರದೇ ಆದ ವ್ಯಾಕರಣಗಳಿವೆ. ಉಳಿದವರಿಗೆ ಗೋಜಲೆನಿಸುವ ನಿಯಮಗಳು. ಅದನ್ನು ನಿತ್ಯ ಅನುಸರಿಸುವವರಿಗೆ ಲೀಲಾಜಾಲ ಎನಿಸುತ್ತವೆ. ಹೌದೇ?

ಇಂತಹ ಅಪೂರ್ವ ಹೊಳಹು ನನಗೆ ಮೂಡಿದ್ದೂ ಅಡುಗೆಮನೆಯಲ್ಲಿ. "ಕ್ಲಚ್ಚು ಗೇರು, ಬ್ರೇಕು ಅಂದ್ರೆ ನನಗೆ ಏನೂ ಗೊತ್ತಿಲ್ಲ" ಅಂತ ನನ್ನ ಡ್ರೈವಿಂಗ್ ಗುರುವಿನ ಬಳಿ ಆತಂಕದಿಂದ ಹೇಳಿದ್ದೆ. ಅದಕ್ಕವರು ಡ್ರೈವಿಂಗ್ ಕಲಿಯಲು ಇದೇ ಅತ್ಯಂತ ಒಳ್ಳೆಯ ಪರಿಸರ ಎಂದಿದ್ದರು. ಅಚ್ಚರಿಯಿಂದ ಅವರತ್ತ ನೋಡಿದಾಗ "ಅರೆಬರೆ ತಿಳಿವಳಿಕೆ ಇರುವವರು ಅಥವಾ ನನಗೆಲ್ಲ ಗೊತ್ತು ಎನ್ನುವವರಿಗೆ ಡ್ರೈವಿಂಗ್ ಕಲಿಸೋದು ಕಷ್ಟ. ಅವರು ಕಲಿಸುವುದನ್ನು ಅರ್ಥ ಮಾಡಿಕೊಳ್ಳುವುದಕ್ಕೂ ಮೊದಲು ತಮ್ಮ ವಿಚಾರಗಳನ್ನು ಪ್ರಯೋಗ ಮಾಡಲು ಹೋಗ್ತಾರೆ. ನಿಮ್ಮಂಥವರಿಗೆ ಕಲಿಸೋದು ಸುಲಭ" ಎಂದಿದ್ದರು. ಅದೇ ರೀತಿ ಎಲ್ಲರಿಗೂ ಅಡುಗೆ ಕಲಿಸೋದು ಅಷ್ಟು ಸುಲಭವಲ್ಲ, ಇದು ಮಗಳಿಗೆ ಅಡುಗೆ ಕಲಿಸುವ ಹೊತ್ತಲ್ಲಿ ನನ್ನ ಅರಿವಿಗೆ ಬಂದಿತು. ಅವಳೋ ವಿಧೇಯ ವಿದ್ಯಾರ್ಥಿನಿ. ಅವಳ ಜಾಗದಲ್ಲಿ ಅವಳಪ್ಪ ಬಂದಾಗಲೇ ನಮ್ಮಲ್ಲಿ ಜಗಳ ಹುಟ್ಟೋದು. "ಅದ್ಯಾಕೆ ಅಷ್ಟು ನೀರುಳ್ಳಿ? ಟೊಮೆಟೋ ಹಾಕ್ದದ್ರೆ ಆಗಲ್ವ? ಇಷ್ಟ್ ಎಣ್ಣೆ ಹಾಕ್ತೀಯಾ? ಇದ್ಕೆ ಬೆಲ್ಲ ಬೇರೆ ಹಾಕ್ತೀಯಾ?" ಎಂದೆಲ್ಲ ತಕರಾರು ಆರಂಭವಾಗಿ "ನೀನು ಹೇಳಿದ ಹಾಗೇ ಮಾಡ್ಬೇಕಂತ ಏನು? ಹೀಗೆ ಮಾಡಿದ್ರೇನ್ ಆಗತ್ತೆ" ಎಂದು ಆತ ಪ್ರಯೋಗಕ್ಕೆ ನಿಂತು ಬಿಡುತ್ತಾನೆ. ನಿರುಪಾಯಳಾಗಿ ನಾನು "ಮಾಡ್‌ಬಹುದು; ಜೊತೆಗ್ ರಿಸಲ್ಟ್ ಕೂಡಾ ಬದಲಾಗಬಹುದು" ಎಂದಂದು ಸಿಟ್ಟನ್ನು ನುಂಗಿಕೊಳ್ಳುತ್ತೇನೆ. ಕೆಲವೊಮ್ಮೆ ಆತನ ಪಾಕ ನನಗಿಂತ ಚೆನ್ನಾಗಿ ಆದಂತೆ; ಕಳಪೆಯಾಗಿ ಮೂಲೆ ಸೇರಿದ್ದೂ ಇದೆ.

ಅಡುಗೆ ಮನೆಯಲ್ಲಿ ನೆರವಿಗೆ ಇರುವವರು ನಮ್ಮ ಆಲೋಚನೆಯ ಜೊತೆ ಹೆಜ್ಜೆ ಹಾಕುವವರಾದಾಗ ಅಡುಗೆ ಕೆಲಸ ಎಷ್ಟೇ ಇದ್ದರೂ ಬೇಸರ ಬಾರದು. ಹೀಗೆ ಸಮಾನ ಚಿಂತನಾಕ್ರಮ ಇರುವುದು ಅವರು ನಿರಂತರ ನಮ್ಮ ಜೊತೆ ನೆರವಿಗೆ ಬರುವ ಮೂಲಕ, ಇಲ್ಲವೆ ಅವರಿಗೂ ಅಡುಗೆ ಗೊತ್ತಿದ್ದಾಗ. ಅನನುಭವಿಗಳು ಹೆಚ್ಚುಗಟ್ಟಲೆ ಅಡುಗೆ ಕೆಲಸದಲ್ಲಿ ನೆರವಿಗೆ ಇದ್ದರೆ ನಮ್ಮ ಶ್ರಮ ದುಪ್ಪಟ್ಟು ಆದಂತೆನಿಸುತ್ತದೆ. "ಅದು ತಾ, ಇದು ತಾ" ಅಂದರೆ, ವಸ್ತುವಿನ ಹೆಸರು ನಮ್ಮ ಬಾಯಿಂದ ಉದುರುವವರೆಗೆ ಅವರು ಕಾದು ನಿಂತಾರು; ಪಾಕ ಬಲ್ಲವರು ಹೇಳುವ ಮೊದಲು ಒದಗಿಸಿಯಾರು.. ಇದೇ ಮುಖ್ಯ ವ್ಯತ್ಯಾಸ. ಇವನು ಗಾಡಿಯ ರಿಪೇರಿಗೋ, ಗಾಡಿ ತೊಳೆಯಲೋ ನಿಂತಾಗ ಇದೇ ಕರಕರೆ. ನಟ್ಟು, ಬೋಲ್ಟು, ಸ್ಪಾನರು ಅಂತ ಅವನು ಹೇಳಿದ ತಕ್ಷಣ ನೀಡುವವರು ಇದ್ದಾಗ ಅವನು ಅನುಭವಿಸುವ ನೆಮ್ಮದಿ, ಅನನುಭವಿಗಳಿದ್ದಾಗ ನಡೆಯುವ ಜಗಳ ಅಡುಗೆಮನೆಗಿಂತ ಭಿನ್ನ ಅಂತ ನನಗನ್ನಿಸಿಲ್ಲ. ದೂರದೂರದ ಊರಿಗೆ ಹೋಗುವಾಗ ಡ್ರೈವಿಂಗ್ ಮತ್ತು ಗಾಡಿ ರಿಪೇರಿ ಬಲ್ಲ ಒಬ್ಬ ಗಂಡಸು ಜೊತೆಗಿರಬೇಕೆಂದು ಅವನು ಬಯಸುವಂತೆ, ಅತಿಥಿಗಳು ಬಂದಾಗ ಹೆಚ್ಚುಗಟ್ಟಲೆ ಅಡುಗೆ ಇದ್ದಾಗ, ಅಡುಗೆ ಬಲ್ಲವರು ಜೊತೆಗಿರಬೇಕೆಂದು ನಾನು ಬಯಸುತ್ತೇನೆ.

"ನೆನಪಿದೆಯೇ ಮೊದಲ ನೋಟ, ನೆನಪಿದೆಯೇ ಮೊದಲ ಸ್ಪರ್ಶ, ನೆನಪಿದೆಯೇ ಮೊದಲ...." ಎಂಬ ಸಿನಿಮಾ ಗೀತೆಯಂತೆ ಮೊದಮೊದಲ ಅನುಭವಗಳ ಸವಿಯೇ ಬೇರೆ. ದ್ವಿಚಕ್ರ ವಾಹನ ಚಾಲನೆಗೆ ಹೊರಟಾಗ, ನಾನು ಪಡೆದ ಪುಳಕ ಇಂದಿಗೂ ನನ್ನಲ್ಲಿ ಹಸಿರಾಗಿದೆ. ಸದಾ ಇವನ ಹಿಂದಿನ ಸೀಟಿನಲ್ಲಿ ಕುಳಿತ ನನಗೆ ಗಾಡಿಯ ಮುಂಭಾಗದಲ್ಲಿ ಕೂತರೆ ರಸ್ತೆ ಹೇಗೆ ಕಂಡೀತು ಎಂದು ಕಲ್ಪಿಸಿಕೊಳ್ಳಲು ಆಗಿರಲಿಲ್ಲ. ಅದಕ್ಕಿಂತಲೂ ನನ್ನ ಹಿಂದೆ ಆತ ಕೂತು, ನನ್ನ ಸುತ್ತ ತನ್ನ ತೋಳು ಬಳಸಿ ಸ್ಕೂಟರ್‌ನ್ನು ಸ್ಟಾರ್ಟ್ ಮಾಡಿ ಹೊರಟಾಗ ಆದ ಸಂಭ್ರಮ, ಪುಳಕ, ಸಂತೋಷ ಅವರ್ಣನೀಯ. ಪುಷ್ಪಕ ವಿಮಾನದಲ್ಲಿ ಕೂತು ಹೊರಟಂತೆ....ಉಹೂಂ... ಏನೇ ಹೋಲಿಕೆ ಕೊಟ್ಟರೂ ಅಪೂರ್ಣವೇ ಸರಿ. ಚಿಟಿಕೆ ಹೊಡೆಯುವಷ್ಟರಲ್ಲಿ ಪಟಪಟ ರೊಟ್ಟಿ ಬಡಿದು, ಬಿಸಿಬಿಸಿ ರೊಟ್ಟಿ ಉಣಬಡಿಸುವ ನನ್ನ ಗೆಳತಿಗೆ ಅವಳು ರೊಟ್ಟಿ ಮಾಡಲು ಕಲಿತ ದಿನ ಮರೆಯಲಾಗದ್ದಂತೆ. ಪ್ರತೀದಿನ ಹಿರಿಯರು ರೊಟ್ಟಿ ತಟ್ಟುವಾಗ ಕಾಡಿಬೇಡಿ ಹಿಟ್ಟು ಪಡೆದು 'ಹಲಚಿ' (ಚಿಕ್ಕ ರೊಟ್ಟಿ) ಮಾಡುತ್ತಿದ್ದವಳಿಗೆ, ಒಂದು ದಿನ 'ಕೊಣಮಿಗೆ' (ರೊಟ್ಟಿ ತಟ್ಟುವ ಸಾಧನ) ಕೊಟ್ಟು ಅದರಲ್ಲೇ ಮಾಡು ಎಂದಾಗ ಉಂಟಾದ ಸಂಭ್ರಮ; ಹಾಗೆ ಆಕೆ ಮಾಡಿದ ಪುಟ್ಟ ರೊಟ್ಟಿಯನ್ನು ಬೇಯಿಸಿದಾಗ ಅಪ್ಪನಾದಿಯಾಗಿ ಎಲ್ಲರೂ ಇಷ್ಟಿಷ್ಟು ಮುರಿದು ಬಾಯಿಗಿಟ್ಟುಕೊಂಡು ಶಹಭಾಸ್ ಹೇಳಿದ ಗಳಿಗೆ ಆಕೆಗೆ ಮರೆಯಲಾಗದ ಅನುಭವವಂತೆ.

****

"ನಿಮ್ಮಮ್ಮ ನಿಂಗೆ ಹೀಗೇ ಅಡಿಗೆ ಕಲ್ಸಿಕೊಟ್ಟಿದ್ರಾ?" ಮಗಳ ಪ್ರಶ್ನೆಗೆ "ಇರ್ಬೇಕು ಅನ್ಸುತ್ತೆ, ಈಗ ಅದೆಲ್ಲ ನೆನಪಿಲ್ಲ. ಆದ್ರೆ ನಿನ್ನ ಹಾಗೆ ಪ್ರೊಬೇಷನರಿ ಪೀರಿಯಡ್ ನನ್ನು ತಡಾ ಆಗಿರ್ಲಿಲ್ಲ, ಹೈಸ್ಕೂಲ್ಗೆ ಸೇರೋ ಮೊದ್ಲೇ ನಾನು ಚಪಾತಿ, ರೊಟ್ಟಿ, ಅನ್ನ, ಸಾರು ಎಲ್ಲ ಮಾಡೋದ್ ಕಲ್ತಿದ್ದೆ. ಆವಾಗೆಲ್ಲ ಲಟ್ಸೋರು ಒಬ್ರು, ಸುಡೋರು ಒಬ್ರು ಅಂತ ಕೆಲ್ಸ ಹಂಚಿಕೊಳ್ಳೋ ಪ್ರಸಂಗನೇ ಇರ್ಲಿಲ್ಲ, ಹಾಗೆ ಮಾಡ್ತೀವಿ ಅಂದ್ರೆ ಕೈಗೆ ಏಟು ಹಾಕೋರು. ಅಷ್ಟೇ ಯಾಕೆ, ಹೂರಣದ ಹೋಳಿಗೆ ಮಾಡ್ಬೇಕಾದ್ರೂ ಒಬ್ರೇ ಹೂರಣ ತುಂಬಿಕೊಂಡು, ಲಟ್ಸಿಸಿ, ಅವರೇ ಸುಡ್‌ಬೇಕಿತ್ತು, ಹಾಗೆ ಮಾಡಿದ್ರನೇ ಅವ್ರಿಗೆ ಅಡಿಗೆ ಬಂದಿದೆ ಅಂತ ಸರ್ಟಿಫಿಕೇಟ್ ಸಿಗ್ತಿತ್ತು."

"ನಂಗೆ ಅಂಥಾ ಸರ್ಟಿಫಿಕೇಟೂ ಬೇಡ, ಅಡಿಗೆ ಮಾಡೋ ರಗಳೇನೂ ಬೇಡ. ಹಾಯಾಗಿ ಹೋಟೆಲ್ ಊಟ ಮಾಡ್ಕೊಂಡು ಇರ್ಬಹುದು. ಇಲ್ಲಂದ್ರೆ ದುಡ್ಡ್ ಕೊಟ್ರೆ ಯಾರಾದ್ರೂ ಬಂದು ಬೇಯ್ಸಿ ಹಾಕ್ತಾರೆ" ಅವಳ ಮಾತು ಮುಗಿಯುವಷ್ಟರಲ್ಲಿ ಬಂದ ಆತ, ನಗುತ್ತಾ "ಹೂಂ... ಈಗ ರಗಳೆ ಅನ್ಸುತ್ತೆ, ಎರಡ್ ದಿವ್ಸ ಹೋಟೆಲ್ ಊಟ ಉಂಡ್ರೆ ಆಗ ಗೊತ್ತಾಗತ್ತೆ, ಹೆಚ್ಗೆ ಬೇಡ. ಎಷ್ಟ್ ಬೇಕೋ ಅಷ್ಟನ್ನಾದ್ರೂ ನೀನು ಕಲೀಬೇಕು. ಇಲ್ಲಂದ್ರೆ ಅಷ್ಟೆ..." ಎಂದ.


ನನಗೆ ಡ್ರೈವಿಂಗ್ ಕಲಿಯಲು ಒತ್ತಾಯಿಸುವಾಗಲೂ ಇವನು ಇಂಥದ್ದೇ ಮಾತನ್ನ ಹೇಳಿದ್ದ! "ಎಂಥಾ ಒಳ್ಳೇ ಡ್ರೈವರ್ರೇ ಆದ್ರೂ, ಯಾವಾಗ್ಲೂ ಒಬ್ರನ್ನ ನಂಬಿಕೊಂಡು, ಅವಲಂಬಿಸಿಕೊಂಡು ಇರಬಾರ್ದು. ಕನಿಷ್ಠಮಟ್ಟದ ಜ್ಞಾನ ನಿನಗೂ ಇರ್ಬೇಕು. ದೂರಕ್ಕೆ ಅಲ್ಲದಿದ್ರೂ ಹತ್ರಕ್ಕಾದ್ರೂ ನೀನೇ ಕಾರ್ ತಗೊಂಡು ಹೋಗುವ ಹಾಗೆ ಇರ್ಬೇಕು. ಅದರಲ್ಲಿ ಇರೋ ಸುಖ ಅಷ್ಟಿಷ್ಟಲ್ಲ" ಎಂದು ಒತ್ತಿ ಒತ್ತಿ ಹೇಳಿದ್ದ.

ಆತನಿಗೆ ತಾಳ್ಮೆಯೇ ಇಲ್ಲ ಎಂದುಕೊಂಡಿದ್ದೆ. ಯಾರಾದ್ರೂ ಮಾತಾಡ್ತಿದ್ರೆ ಅವರ ಮಾತು ಪೂರ್ಣ ಆಗೋತನ್ಕ ಆತ ಕಾಯಲಾರ. ನಡುನಡುವಲ್ಲಿ ತನ್ನ ಮಾತನ್ನು ಬಿಡದೆ ಜೋಡಿಸುವಾತ. ಎಂಥ ಭಾವನಾತ್ಮಕ ಸಂಗತಿಯನ್ನು ಎದುರಿನವರು ಹಂಚಿಕೊಳ್ಳುತ್ತಿದ್ದರೂ ಪೂರ್ಣ ಕಿವಿಗೊಡುವ ಬದಲು ಮೊದಲೇ ಟೀಕೆಗೆ, ವಿಮರ್ಶೆಗೆ ತೊಡಗುವಾತ. ಯಾವುದಾದರೂ ಮನಸ್ಸಿಗೆ ಬಂತೆಂದರೆ ಅದು ಮಾಡಿಯೇ ಸಿದ್ಧ ಎಂದು ನಿಂತಕಾಲಮೇಲೆ ಹೊರಡುವಾತ. ಹೀಗಾಗಿ ಸದಾ ಆತುರಗಾರ ಎಂದು ಟೀಕಿಸಿಕೊಳ್ಳುವ ಆತನೊಳಗೂ ತಾಳ್ಮೆಯ ಪ್ರಮಾಣ ಎಷ್ಟಿದೆ ಎಂದು ಗೊತ್ತಾದುದೇ ಟ್ರಾಫಿಕ್ ಜಾಮ್ ಸಂದರ್ಭದಲ್ಲಿ. ಅದೊಂದು ದಿನ ಹೆದ್ದಾರಿಯಲ್ಲಿ ಎಂಥದ್ದೋ ಅಪಘಾತ ಸಂಭವಿಸಿ ಮೈಲುಗಟ್ಟಲೆ ದೂರದವರೆಗೆ ವಾಹನಗಳು ನಿಂತಿದ್ದವು. ಎಲ್ಲರಿಗೂ ಅವಸರ. ಸಾಲಾಗಿ ನಿಂತಿದ್ದ ಒಂದು-ಇನ್ನೊಂದು ಗಾಡಿಯ ನಡುವಿನ ಅಂತರ ಕೆಲವು ಇಂಚುಗಳು ಮಾತ್ರ. ಹಿಂದಿನವರ ಹಾರ್ನ್, ದ್ವಿಚಕ್ರಗಳ ಯದ್ವಾತದ್ವ ಮುನ್ನುಗ್ಗುವಿಕೆ, ಆಮೆ ವೇಗದಲ್ಲಿ ಸಾಗುವ, ಸಾಗಿಯೂ ಸ್ಥಗಿತವಾದಂತೆ ಅನಿಸುವ ಟ್ರಾಫಿಕ್‌ನಲ್ಲಿ ಸಿಲುಕಿದ್ದೆವು. ಹತ್ತು ನಿಮಿಷದ ಹಾದಿ ಕ್ರಮಿಸಲು ಒಂದೂವರೆ ಗಂಟೆಯೇ ಬೇಕಾಗಿತ್ತು. ಆವತ್ತು ಅವನ ಸಹನೆಯ ಎಲ್ಲೆ ಎಷ್ಟು ಅಗಾಧವಾದುದು ಎಂಬುದು ಮೊದಲ ಬಾರಿಗೆ ಅರಿವಿಗೆ ಬಂದಿತು. ಆತ ಒಂದಿಷ್ಟೂ ಸಿಡುಕಲಿಲ್ಲ; ಗದರಲಿಲ್ಲ, ದಿವ್ಯ ನಿರ್ಲಿಪ್ತನಂತೆ ಡ್ರೈವಿಂಗ್ ಸೀಟಲ್ಲಿ ಕೂತಿದ್ದ! ಕುತೂಹಲ ತಡೆಯದೆ "ಇಷ್ಟೊಂದು ಸಹನೆ ನಿನ್ನಲ್ಲಿ ಎಲ್ಲಿತ್ತು?" ಎಂದೆ. "ಬೇರೆ ವಿಧಿಯೇ ಇಲ್ಲ ಅಂತ ತಿಳಿದಾಗ ಎಂಥವರಿಗೂ ಸಹನೆ ಬಂದೇಬರುತ್ತೆ, ಅದರಲ್ಲಿ ಆಶ್ಚರ್ಯ ಪಡುವಂಥದ್ದು ಏನೂ ಇಲ್ಲ" ಎಂದ. ನನಗೆ ಹೊಗೆಗೂಡಲ್ಲಿ ನಿತ್ಯವೂ ತಾವು ಬೆಂದು ಎಲ್ಲರ ಹೊಟ್ಟೆ ತಂಪಾಗಿಸುವವರು ಥಟ್ಟನೆ ನೆನಪಿಗೆ ಬಂದರು.

ಹೌದಲ್ಲ, ಪಾಕ ಮಾಡುವುದಕ್ಕೂ ವಾಹನ ಚಾಲನೆಗೂ ಎಷ್ಟು ಹತ್ತಿರದ ಸಂಬಂಧವಿದೆಯಲ್ಲ ಎನ್ನಿಸಿತು. ಅನಿಸಿಕೆಯನ್ನು ಇವರ ಜೊತೆ ಹಂಚಿಕೊಳ್ಳುತ್ತ ಸಾಗುತ್ತಿದ್ದೆ. ಮನೆ ಇನ್ನೇನು ಹತ್ತಿರವಾಗುತ್ತಿತ್ತು. ಕಾರಿನ ವೇಗ ಇನ್ನಿಲ್ಲದಂತೆ ಏರಿತು. "ಯಾಕಪ್ಪಾ ಈ ಸ್ಪೀಡು? ಮನೆ ಬಂದೇ ಬಿಡ್ತಲ್ಲ, ಡ್ರೈವ್ ಮಾಡಿ ಸಾಕಾಯ್ತಾ" ಎಂದಳು ಮಗಳು. ಚಪಾತೀನೋ ಹೋಳಿಗೇನೋ ಗಂಟೆಗಟ್ಟಲೆ ಒತ್ತಿ ಕೊನೆಯಾಗುತ್ತ ಬಂದಂತೆ ಅವುಗಳ ಗಾತ್ರವನ್ನು ಹಿಗ್ಗಿಸುವ ನನಗೆ ಮಾತ್ರ ಅವನು ಕೊಡಬಹುದಾದ ಉತ್ತರ ತಿಳಿದಿತ್ತು.

• ಸಬಿಹಾ ಭೂಮಿಗೌಡ

> ಅಡುಗೆ ಮನೆಯಲ್ಲಿ ನೆರವಿಗೆ ಇರುವವರು ನಮ್ಮ ಆಲೋಚನೆಯ ಜೊತೆ ಹೆಜ್ಜೆ ಹಾಕುವವರಾದಾಗ ಅಡುಗೆ ಕೆಲಸ ಎಷ್ಟೇ ಇದ್ದರೂ ಬೇಸರ ಬಾರದು. ಹೀಗೆ ಸಮಾನ ಚಿಂತನಾಕ್ರಮ ಇರುವುದು ಅವರು ನಿರಂತರ ನಮ್ಮ ಜೊತೆ ನೆರವಿಗೆ ಬರುವ ಮೂಲಕ, ಇಲ್ಲವೆ ಅವರಿಗೂ ಅಡುಗೆ ಗೊತ್ತಿದ್ದಾಗ. ಅನನುಭವಿಗಳು ಹೆಚ್ಚುಗಟ್ಟಲೆ ಅಡುಗೆ ಕೆಲಸದಲ್ಲಿ ನೆರವಿಗೆ ಇದ್ದರೆ ನಮ್ಮ ಶ್ರಮ ದುಪ್ಪಟ್ಟು ಆದಂತೆನಿಸುತ್ತದೆ.



ಹೊಲಗೇರಿ ಎಂಬ University

ಅಲ್ಲಿ ಪ್ರಾಯೋಜಿತ ಶಾಲೆ ಕಾಲೇಜುಗಳಿಲ್ಲ
ಕೋಟ್ಯಾಂತರ ಬಂಡವಾಳದ ಪ್ರಯೋಗಶಾಲೆಗಳ
ತರಗತಿಗಳು ಮೊದಲೇ ಇಲ್ಲ
ಶಾಸ್ತ್ರಗಳ ಗೊಂದಲವಿಲ್ಲ, ಸಿದ್ಧಾಂತದ ಹಂಗು
ಬೋಳು ತಲೆಯ ಹಿಪಕ್ರಟಿಕ್ ಪ್ರಾಧ್ಯಾಪಕರಿಲ್ಲ
ಆದರೂ, ಹಗಲು ರಾತ್ರಿಯೆನ್ನದೆ
ಬದುಕು ಅರಳುತ್ತದೆ ನಿರಂತರ ಬೆಳಗುವ ಹಣ
ಹಾಗೆ
ನನ್ನ ಕೇರಿಯ ಲೋಕಾನುಭವವೇ ಡೆಮಾಕ್ರಟಿಕ
ಈ ನೆಲದ ವಿವೇಕದ ಹಾಗೆ

ಅಲ್ಲಿ, ಮುಖನೋಡಿ ಮನವರಿವ ನೆರಳ ನೋ
ಗುಣ ತಿಳಿವ ಮನೋವೈದ್ಯರಿದ್ದಾರೆ
ಗರಿಕೆಯಿಂದ ಆಲದವರೆಗೆ ಸ್ಪರ್ಶ ಮಾತ್ರದಲ್ಲಿ
ಗುರುತಚ್ಚುವ ಮಂದಣ್ಣರಿದ್ದಾರೆ
ಈಲಿ ತೊಳ್ಳೆ ಬಿಕ್ಕೆಮ್ಯಾತೆ ಬೋಟಿ ಕೈಗಳ
ಲೀಲಾಜಾಲವಾಗಿ ಬೇರ್ಪಡಿಸೊ ಸರ್ಜನ್ನರಿದ್ದಾರ
ವಿಧಿವಿಧಾನಗಳಿಲ್ಲದ ಪರಿಣಿತ ಪಂಡಿತರು
ಜಗದ ಭಾರವ ಹೊತ್ತು ಹಸಿರುಟ್ಟ ಹೊಲವಾಗ
ಕಣ್ಣ ತುಂಬ ಕನಸೊತ್ತ ಸ್ವಾಭಿಮಾನಿ ಸೂರ್ಯರ
ಸಾಗರದ ಶಾಂತತೆಯ ಹಾಗೆ.

ಅಲ್ಲಿ ಎದೆಯೊಳಗೆ ಭಾವನದಿಯ ತಂಬಿಕೊಂಡ
ಮನದೊಳಗೆ ಮನುಕುಲದ ಸಂಕಥನದ ಹ
ಬಂದವರು
ಈ ನೆಲವನ್ನು ಹೊಲ ಮಾಡಿ ಹಸಿರ ಹ
ಕಲೆಗಾರರು
ಜಾತಿ ಅಸಮತೆಯ ಆದಿವ್ಯಾಧಿಯ ನೆಲದೊಳಗ
ತಗಲ ಕೌರ್ಯವ ಮರೆತು
ಕನಸಲ್ಲೂ ಸಂಬಂಜ ಅನ್ನೋದು ದೊಡ್ಡದೆನ್ನುವ
ಮನುಕುಲ ಮಮತೆಯಮಾಲಿಗಳಿದ್ದಾರೆ
ನೆಲದ ಮರೆಯನಿಧಾನದಂತೆ ನನ್ನ ಕೇರಿಯ ಸಿ
ವೈಭವವೇ ಹಾಗೆ

ಅಲ್ಲಿ, ಹಸಿದವರಿಗೆ ಅಂಬಲಿಯನ್ನಿಕ್ಕಿ
ಬೆಂದವರಿಗೆ ನೆರಳಾಗಿ
ದಿಕ್ಕುತಪ್ಪಿ ದೆಸೆಗಾಣದವರಿಗೆ ತೊಟ್ಟಿಲಾಗಿ
ಮಡಿಲ ತುಂಬ ಮಮತೆ ಬಸಿದು
ಚುಕ್ಕಿ ಚಂದ್ರಮರ ಕಥೆ ಪಾಡುತ್ತಾ
ನೋವ ಮರೆಸೋ ಊಟದಮ್ಮರಿದ್ದಾರೆ
ಪಾಪ ತೊಳೆವ ಗಂಗೆಯ ಹಾಗೆ

ಯಾವತ್ತೊ ಬರಬೇಕಿತ್ತು
ನನ್ನ ಕೇರಿಗೆ ಜ್ಞಾನಪೀಠ ಅದ್ಯಾವುದೋ ನೋ
ಗೀಬಲ್
ಬರಲಿಲ್ಲ, ಇಲ್ಲ ಇಲ್ಲ ಕೊಡಲಿಲ್ಲ ಬಿಡಿ!
ಯಾವ ಪ್ರಶಸ್ತಿ ತೂಗೀತು ಸಮ
ನನ್ನ ಕೇರಿಯ ಧನ್ಯತೆಯ ಬಾಳಿಗೆ
ಅದ್ಯಾವ ಪುರಸ್ಕಾರದ ಪದವಿ ಪದಕ
ನನ್ನ ಜನರ ಬದುಕ ಹದಕ್ಕೆ
ಬಂದರೂ ತಿಪ್ಪೆಗೆಸೆವ ಬರಿಕಾಲ ಸಂತರು
ನಿರುಮ್ಮಳವಾಗಿ ಬದುಕುತ್ತಾರೆ
ಈ ನೆಲದ ಪುಣ್ಯದ ಹಾಗೆ.

• ಎಸ್. ಚಂದ್ರಕಿರಣ್ ಕುಳವ

...ಲಿಂಗಪ್ಪ ಅಧಿಕಾರದಿಂದ ಇಳದಾಗ ಅವ್ರುರಕೌಂಟಲ್ಲಿ ಹತ್ತು ಸವ್ರುರ ಇತ್ತಂತೆ

...ಡೂರಪ್ಪ ಮಕ್ಕಳ ಸಮೇತ ಕೋರ್ಟಿಗೆ ಹೋಗಿ ...ಟಲ್ಲಿ ನಿಂತಿದ್ದ ಎಂಬ ಸುದ್ದಿಯಿಂದ ಕಾಳಮಾವನಿಗೆ ...ಾಯಿತು. ಆದರೆ ಸೀರನಿಗೆ ಇನ್ನೊಂದು ಬೇಡಿ ...ಷ್ಟು ಖುಷಿಯಾಗಿತ್ತು, ಆದ್ದರಿಂದ,

...ನೇ ಆಗ್ಲಿ ಅವುನ್ನ ಜೈಲಿಗಾಕಬೇಕಾಗಿತ್ತು ಕಂಡ್ರ ...ಎಂದ.

...ೀಟ್ಯಾಂತ್ರಪಾಯಿ ಕೊಟ್ಟು ವಳ್ಳೆ ಲಾಯರ್

...ಲು ಸೀ ಮೆ

ಕಪ್ಪೆಪುರಾಣ

▶ಬಿ. ಚಂದ್ರೇಗೌಡ

...ನಂತೆ ಕಣೊ. ಅದ್ಯಂಗೆ ಜೈಲಿಗೋಯ್ತನೇಳು."

...ಟ್ಟ ಕ್ಯಲಸ ಮಾಡಿದೋರು ವಳ್ಳೆ ಲಾಯರ್‌ನೆ ...ಬವೇನ್ಲ?" ಎಂದ ಕಾಳಮಾವ.

...ಕಣಮಾವ. ಹಿಂದೆ ಶಿವರಾಮೇಗೌಡ ತನ್ನ ...ದ ಮಾಡಕ್ಕೆ ಹನುಮಂತರಾಯರ ಮಡಗಿದ್ದನಲ್ಲ ...ದ್ರು ಹನುಮಂತರಾಯರು ಅವುನ್ನ ಕೈಬುಟ್ರಪ್ಪ"

...ಾಕ್ ಬುಟ್ರುಲಾ?"

...ಾಕೆ ಅಂದ್ರೆ, ಶಿವರಾಮೇಗೌಡನ್ನ ಅಂಗೇ ...ದರಂತೆ. ಇವುನು ನಂಬಿಕಳಕ್ಕೆ ಯೋಗ್ಯ ಅಲ್ಲಾ ...ನಬ್ಬಿಗಂಡು ಕೇಸ ನ್ಯಡಸದಲ್ಲ ಅನ್ನುಸ್ತು, ಬುಟ್ರು ...ದೇ ಹನುಮಂತರಾಯರೆ ಎಡೂರಪ್ಪನ್ನ ಯಳದು ...ನಿಲ್ಲಿಸಿದರು."

...ೂರೊರ್ಸ ಮುಖ್ಯಮಂತ್ರಿಯಾಗಿದ್ದೊನು ...ಾಗದ್ರಲ್ಲಿ ಕೋರ್ಟಿಗೋಗಿ ನಿಂತಗತ್ತನೆ ಅಂದ್ರೆ, ...ಥಾ ಮೂರ್ಖನನ್ನಮಗಿದ್ದನು" ಎಂದ ಕಾಳಮಾವ.

...ಬ್ರು ಒಂದೇ ದಿನ ಕೋರ್ಟಿಗೋದ್ರಲ್ಲ ಮಾವ. ...ಸ್ವಾಮಿನೂ ಎಡೂರಪ್ಪನೂ ಜೊತೆಗೆ ವಿಧಾನಸೌಧದ ...ನಿಂತಗಂಡು ಅವುನು ಮುಖ್ಯಮಂತ್ರಿ ಇವುನು ...ಖ್ಯಮಂತ್ರಿ ಅಂತ ಪ್ರಮಾಣವಚನ ತಗಂಡಿದ್ರು. ...ಬ್ಬರೂ ಕೋರ್ಟು ಮುಂದೆ ನಿಂತಗಂಡ್ರಲ್ಲ ...ಳ್ತಿ."

...ೋಡು ಮತ್ತೆ. ಕೊರಟೆ ಇಲ್ದೆಯಿದ್ರೆ ಇವುರ ...ಕ್ಕಾಯಿತ್ತೆ?"

...ೋರ್ಟಲ್ಲ ಕಣಮಾವ, ಸಂತೋಷ್ಯಗಡೆ ಇಲ್ದೆಯಿದ್ರೆ, ...ಭಾಳ ಸಂತೋಷವಾಗಿರತಿದ್ರು, ಗೊತ್ತೆ?"

...ಮಾರಸ್ವಾಮಿ ಸಂತೋಷ್ಯಗಡೆ ಬೋದವುನಂತಲ್ಲಾ ...ಎಂದಳು ಜುಮ್ಮಿ.

...ಕಣೆ. ಗಣಿ ವ್ಯವಾರದಲ್ಲಿ ನನ್ನ ಹೆಸರು ...ರಲ್ಲಾ, ನಾವು ಇವರನ್ನು ಲೋಕಾಯುಕ್ತರ ಮಾಡಿದ್ದ ...ತಗಳ್ಳಿಲವಲ್ಲಾ ಅಂತ ಸಿಟ್ಟು ಬಂತು ಕುಮಾರನಿಗೆ. ...ತೋಷ್ಯಗಡೆ ರಾತ್ರಿವೊತ್ತು ಎಷ್ಟು ಖರ್ಚು ಮಾಡ್ತರೆ ...ಮುಂದೇಳ್ತಿನಿ ಅಂದವುನೆ."

...ಗ್ಗೆ ಹೇಳಕ್ಕೇನಾಗ್ಯದ್ಲ, ಮುಂದೇಳ್ತಿನಿ, ಸರಿಯಾದ ಟೈಮು ನೋಡೇಳ್ತಿನಿ ಅನ್ನೊ ಮನಸನ ಮಾತ ನಂಬಕ್ಯಾದತೆ?"

"ಅದ್ಕೆ ಸಂತೋಷ್ಯಗಡೆ ಏನಂದವುರೆ ಗೊತ್ತೆ ಮಾವ? ನನಿಗೆ ಇರದು ಒಂದೇ ಮನೆ, ಒಂದೇ ಹೆಡತಿ. ರಾತ್ರಿ ಕರಟ್ಯಾಗಿ ಮನಿಗೋಯ್ತಿನಿ ಅಂದವುರೆ."

"ಸರಿ ಬುಡು. ಮೆಟ್ಟಲ್ಲಿ ವಡಿಬೇಕೆ. ಇಂತ ಮಾತಂದ್ರು ಸಾಕಪ್ಪ, ನೀತಿ ಹೇಳಕ್ಕೆ ಆತನ ಕರಸಿ ಅಂದ್ರೆ ಆತ ಹೆಡತಿ ಬುಟ್ಟು ಆರು ತಿಂಗಳಾಯ್ತು, ಈಗ ಬ್ಯಾರೆ ಯಾವಳ ಜ್ವತೆಲೊ ಇದ್ದನಂತೆ ಅನ್ನಂಗೆ ತಾವೇನು ಅನ್ನದ ಬಗ್ಗಿ ನೋಡಕಳದೆ ಮಾತಾಡಿದ್ರೆ, ಹಿಂಗೆ ಅನ್ನಿಸಿಗಳದು."

"ಮುಂದುವರದು ಇನ್ನು ಏನಂದವುನೆ ಗೊತ್ತೆ ಮಾವ? ಸಂತೋಷ್ ಹೆಗ್ಡೆ ಯಲೆಕ್ಷನ್ನಿಗೆ ನಿಂತ್ರೆ ಗೊತ್ತಾಯ್ತದೆ. ಜನ ಓಟುಕೇಳಕ್ಕೋದ್ರೆ ಏನು ತಂದಿದ್ದಿರಿ ಅಂತ ಕೈ ನೋಡ್ತರೆ ಅಂದವುನೆ."

"ಏನು ತಂದಿದ್ದಿರಿ ಅನ್ನದ ಕಳಿಸಿದೋರ್ಯಾರ್ಲ ಜನ ಸುಮ್ಮಸುಮ್ಮನೆ ಕೇಳ್ಯರೆ. ಕೊಟ್ಟು ಕೊಟ್ಟು ರೂಢಿ ಮಾಡಿದೋರ್ಯಾರು. ನಾನು ಏನೂ ಕೊಡೊದಿಲ್ಲ, ಕೊಡಕ್ಕೆ ನಂತಾವೇನೂ ಇಲ್ಲ, ಓಟುಕೊಡಿ ಅಂತ ಕೈಮುಕ್ಕಂಡೋಗಿದ್ರೆ ಯಂತ ಚನ್ನಾಗಿ ರದು. ಮುಂದವರುದು ಕೊಟ್ರು ಕೊಡಿ ಬುಟ್ರು ಬುಡಿ ಅಂದ್ರಾಯ್ತು."

"ಕುಣಗಲ ರಾಮಯ್ಯ ಅಂಗೆ ಅಲವೆ ಓಟು ಕೇಳತಿದ್ದು?" ಎಂದ ಸೀರ.

"ಕುಣಗಲ ರಾಮಯ್ಯಂದಿರ್ಲಿ ಚಿಗಪ್ಪ, ನಮ್ಮ ಬಂಗಾರಪ್ಪ ಏನೇನೂ ಖರ್ಚು ಮಾಡದಂಗೆ ಗೆದ್ದು ಬರೋರು. ಓಟಿಗೆ ಸಾವುರಾರುಪಾಯಿ ಕೊಡದ ರೂಢಿ ಮಾಡಿದೊರ್ಯಾರಪ್ಪಾ ಅಂದ್ರೆ ಯಡ್ಡಿ ಅಂಡ್ ಸನ್, ದೇವ್ರೂ ಅಂಡ್ ಸನ್, ರೆಡ್ಡಿ ಅಂಡ್ ಬ್ರದರ್ಸ್ ಗೊತ್ತ?" ಎಂದುಕೊಂಡು ವಾಟಿಸ್ಸೆ ಬಂದ.

"ಅಂಗರೆ ಬಂಗಾರಪ್ಪ ಯಲಕ್ಷನ್ನಿಗೆ ದುಡ್ಡು ಖರ್ಚು ಮಾಡ್ತಿರಲಿಲವೇನ್ಲ?"

"ಇಲ್ಲ ಕಣಕ್ಕ, ಅವುನು ಒಂದು ಸತಿ ಕ್ಷೇತ್ರಕೆ ಹೋಗದಂಗೆ ಗೆದ್ದಿದ್ದ, ಇನ್ನೊಂದು ಸತಿ ಕ್ಯಾನುವಾಸು ಮಾಡದಂಗೆ ಕುಂತಿರತಾವುಲೇ ಇದ್ದು ಗೆದ್ದಿದ್ದ, ಅಂಥೋನ ಸೋಲಸಕ್ಕೆ ಎಡೂರಪ್ಪ ಯಪ್ಪತ್ತು ಕೋಟಿ ಸುರದನಂತೆ. ಅಂತ ಅಪವಾದಗಳ್ನೆಲ್ಲ ಸೇರಿಕೊಂಡು ಇವತ್ತು ಇಡೀ ಜೀವಮಾನ ಎಡೂರಪ್ಪ ಅವುಮಾನದಿಂದ ಕಾಲಹಾಕಂಗೆ ಮಾಡ್ಯವೆ ಕಣಕ್ಕ."


"ಅವುನಿಗ್ಯಾವ ಅವುಮಾನನೊ ವಾಟಿಸ್ಸೆ? ಕೋರ್ಟಾವರಣಕ್ಕೆ ಬಂದಾಗ್ಲೆ ಯರಡೂ ಬೆಳ್ಳೆತ್ತಿ ಕೈಯಲ್ಯಾಡಿಸಿದ ಗೊತ್ತೆ?"

"ಊ ಕಣೊ ಉಗ್ರಿ. ನಾನು ನೋಡಿದೆ. ಕೋರ್ಟಿಗೆ ಬರೊ ಮುನ್ನ ವಿಕ್ಟರಿ ಬೆಳು ತೋರ್‍ತನೆ ಅಂದ್ರೆ ನಾನು ಅರೆಸ್ಟಾಗದಿಲ್ಲ ಅಂತ ತಾನೆಯ. ಅಂಗಾದ್ರವುನಿಗೆ ಮದ್ಲೆ ಗೊತ್ತಿತ್ತು ಅನ್ನಂಗಾಯ್ತು."

"ಅಂಗ್ಯಲ್ಲ ಮಾತಾಡಬ್ಯಾಡ. ಕಂಟೆಪ್ಟಾಫ್ ಕೋರ್ಟಾಯ್ತದೆ. ಇವತ್ತು ಕೋರ್ಟುಗಳು ತುಂಬಾ ಸ್ಟ್ರಾಂಗಾಗ್ಯವೆ."

"ಊ ಕಣೊ ಉಗ್ರೀ. ನೋಡು ಆ ಕಟ್ಟಾ ಮುಂಡೆಮಗನಿಗೆ ನಿಜವಾದ ಕಾಯ್ಲ ಇಲ್ಲ, ಸುಳ್ಳು ಹೇಳತ ಇದ್ದನೊ ವಾಚ್ ಮಾಡಿ ಅಂತ ಕೋರ್ಟು ಹೇಳಿದ್ದತಂತೆ. ಇದು ಗೊತ್ತಾಗಿ ಕಟ್ಟಾ ಹೊಟ್ಟೆನೋವು ಮೋಶನ್ನಲ್ಲಿ ಬ್ಲಡ್ಡೋಯ್ತದೆ ಅಂದನಂತೆ. ಅದ ಕೇಳಿ ದಾಗುಟ್ರು ಅದ್ನೆ ಹೇಳ್ಯನಂತೆ."

"ತಪ್ಪಿಸಿಗಳಕ್ಕೆ ವಟ್ಟೆನವಿನಂತ ಕಾಯ್ಲನೆ ಇಲ್ಲ ಕಣೊ. ಆದ್ರೆ ಮೋಶನ್ನಲ್ಲಿ ರಕ್ತಾ ಹೋಯ್ತದೆ ಅಂದ್ರೆ ಚೆಕಪ್



ಮಾಡ್ಬೇಕು."

"ಮಾಡಬೇಕು ಅಂದ್ರೆ ಕೋರ್ಟಿಗೆ ತಂದು ಲ್ಯಟ್ರಿನ್ ಮಾಡಸಬೇಕಾಯ್ತದೆ. ಆದ ಮಾಡಕ್ಯಾಯ್ತದಾ? ಅದರಲ್ಲೂ ಕಟ್ಟಾ ಬಂದು ಮಾಡಿದಾ ಅಂದ್ರೆ ವಸಿ ಮಾಡ್ತನಾ? ಆ ದಿನ ಕೋರ್ಟಿಗೆ ರಜಾ ಕೊಡಬೇಕಾಯ್ತದೆ" ಎಂದು ವಾಟಿಸ್ಸೆ ಹೇಳುವಾಗ ನಗು ತಡೆಯದಾದ ಜುಮ್ಮಿ ಬಿದ್ದುಬಿದ್ದು ನಗುತ್ತಾ,

"ಇದ್ಯಾವ ಸೀಮೆ ಮಾತಾಡ್ತಿಲ ನೀನು. ಅವುನ್ನ ಕೋರ್ಟಿಗೆ ಕರಕಂಡು ಬಂದು ಯರಡ ಮಾಡುಸ್ತರೇನ್ಲ?"

"ನೋಡಕ್ಕ, ಇವುನು ಗಂಡಸಲ್ಲ ಅಂತ ಹೇಳಿದ್ರೆ ಕೋರ್ಟಲ್ಲಿ ಬಟ್ಟೆ ಬಿಚ್ಚಿಸಿ ಜಡಜಗೆ ತೋರುಸ್ತರೆ. ಇಂಗಿರುವಾಗ ಕಟ್ಟಾಸುಬ್ಬನ ಮೋಶನ್ನಲ್ಲಿ ರಕ್ತ ಹುಡುಕಬೇಕಾದ್ರೆ ಅಂಗೂ ಮಾಡಬೇಕಾಯ್ತದೆ. ಕೋಟಂದ್ರೆ ಏನು ತಿಳಕಂಡಿದ್ದೀನೀನು? ಯಲ್ಲಾನು ಪ್ರೂ ಮಾಡಿದ ಮ್ಯಾಲೆ ತೀರ್ಪು."

"ಅಂಗರೀಕಾಲಿಕೆ ಎಡೂರಪ್ಪಂದು ಮುಗಿಯದಿಲ್ಲ ಬುಡು" ಎಂದ ಕಾಳಮಾವ.

"ಅದ್ಯಂಗೆ ಮುಗೀಬೇಕು ದೊಡಪ್ಪ? ಅವುನೇನು ಒಂದು ಕ್ಯಲಸ ಮಾಡಿದ್ದನೇ? ಇಡೀ ಕರ್ನಾಟಕವೇ ರಾಡಿ ಎಬ್ಬಿಸಿರದೂ ಅಲ್ದೆ ಕೋರ್ಟಿಗೂ ಆಲಿಯಂಗೆ ಮಾಡಿಕಂಡವ್ರುನೆ. ಇಂಥೋನ್ನ ಕರ್ನಾಟಕ ಇಲ್ಲಿಗಂಟ ನೋಡಿರಲಿಲ್ಲ."

"ಕಟಕಟೆಲಿ ನಿಂತ ಮುಖ್ಯಮಂತ್ರಿ ಪೈಕಿ ಇವುನೆ ಮೊದಲಂತಲೊ?"

"ಊ ಕಣೊ ಉಗ್ರಿ. ಆದ್ರೆ ಯಡ್ಡಿಯ ನಂತರ ಕುಮಾರಸ್ವಾಮಿ ನಿಲ್ತನೆ. ಪಾಪ ಯಾವ ತಪ್ಪನೂ ಮಾಡದ ಅನಿತಕ್ಕ ಕೋರ್ಟಿಗೋಗಿ ನಿಂತಗಳಂಗೆ ಮಾಡಿರೊ ಕುಮಾರಣ್ಣ ರಾಧಿಕನ್ನ ಮಾತ್ರ ಸುಖವಾಗಿ ಮಡಿಗ್ಯವುನೆ."

"ಅವುಳದ್ಯಾವ ಸುಖನ್ಲ? ಜನ ಒಸಿ ಮಾತಾಡಿಕಂಡರೆ?"

"ಜನ ಮಾತಾಡಿಕಂಡ್ರೆ ಅವುರ ಸುಖಕ್ಕೇನು ತೊಂದ್ರೆನಕ್ಕ, ಜಾತಿ ಕೆಟ್ರು ಸುಖ ಪಡಬೇಕು ಅನ್ನೊ ಜನ ಅವುರು. ಇದೇ ಎಡೂರಪ್ಪ ಕೋರ್ಟು ಮುಗಿಸಿಗಂಡು ನೇರ ಸಿನುಮಾ ಟಾಕೀಸಿಗೋಗಿ ಸಿನುಮಾ ನೋಡಿದನಂತೆ. ಇದಕೇನೇಳ್ತಿ?"

"ಇಂಗೂ ಸುಳ್ಳೆಳ್ತರೇನ್ಲ?"

"ನಿನ್ನಾಣೆ ನಿಜಕಣಕ್ಕ, ಈ ಭೂಗತ ಲೋಕದ ಜನ ಏನಾದ್ರು ಅಪರಾಧ ಮಾಡಿದಾಗ ಅಥವಾ ಪೊಲೀಸರ ಕೈಗೆ ಸಿಕ್ಕಿ ಗೂಸಾ ತಿಂದು ಬಿಡುಗಡೆಯಾದಾಗ ಹೋಗಿ ಬಿರಿಯಾನಿ ತಿಂದು ಕಾರ್ಡ್‌ಸ್ಯಾಡ್ತರೆ. ಆ ತರ ನಮ್ಮ ಎಡೂರಪ್ಪ ಕೋರ್ಟಾವರಣದಿಂದ ಎಂಟರ್‌ಟೈನ್‌ಮೆಂಟ್ ಜಾಗಕ್ಕೆ ಹೋಗಿ ಎಂಜಾಯ್ ಮಾಡಿದನಂತೆ."

"ಅಂಗರಿಂಥೋನು ಇಲ್ಲಿಗಂಟ ಬಂದಿರಲಿಲ್ಲ ಬುಡು" ಎಂದ ಕಾಳಮಾವ.


"ರಿಯಲಿ ದೊಡಪ್ಪ ಎಡೂರಪ್ಪ ದರೋಡೆ ಮಾಡದಕ್ಕಿಂತ ಮೊದ್ಲು ಕರ್ನಾಟಕ ಆಳಿದ ಮುಖ್ಯಮಂತ್ರಿಗಳ ನ್ಯನಿಸಿಗಬೇಕಿತ್ತು, ಆಗ ಇಂತ ಅಪರಾಧ ಮಾಡಕ್ಕೋಯಿತ್ರಲಿಲ್ಲ."

"ಅವುನಿಗಿಂತ ಮದ್ಲಿದ್ದೋನು ಕುಮಾರಸ್ವಾಮಿ ಅಲವೇನೊ. ಅವುನ್ನ ನ್ಯನಿಸಿಗಂಡು ಹಿಂಗಾದ ಬುಡತ್ತಗೆ."

"ದೊಡಪ್ಪ ಒಂದು ಸೀಕ್ರೇ ಟೇಳ್ತಿನಿ ಕೇಳು. ಎರಡೊರ್ಸ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನೋರು, ಅಧಿಕಾರದಿಂದ ಕ್ಯಳಗಿಳಿದಾಗ ಅವುರಕೌಂಟಲ್ಲಿ ಹತ್ತು ಸಾವುರುಪಾಯಿ ಇತ್ತಂತೆ. ಬೆಂಗಳೂರು ಖಾಲಿ ಮಾಡಿಕಂಡು ಚಿತ್ರದುರ್ಗಕ್ಕೆ ಬರೋವತ್ತಿಗೆ ಯರಡು ಸವ್ರುರ ಖರ್ಚಾಗೋಯ್ತಂತೆ. ಅಷ್ಟ ರಾಜಕಾರಣ ದಲ್ಲಿದ್ದು ಹಣಕ್ಯಾಗಿ ಪರದಾಡದ ನೋಡಿದ ಮಕ್ಕಳ್ಯಾರೂ ರಾಜಕೀಯಕ್ಕೆ ಬರದೆ ಕ್ಯಲಸ ಹುಡಿಕ್ಯಂಡ್ರಂತೆ. ಈ ಎಡೂರಪ್ಪ ಆಗಾಗ್ಗೆ ನಿಜಲಿಂಗಪ್ಪಾರ್‍ನ ನ್ಯನಿಸಿಗಂಡಿದ್ರೆ ಜಡಜಿಗೆ ಕೈ ಮುಗಿಯೋ ಸ್ಥಿತಿ ಬತ್ತಿರಲಿಲ್ಲ ದ್ವಡಪ್ಪ."

✽

ಪ್ರಶ್ನೆ-ಉತ್ತರ



...ಶ್ನೆ: ನೀವು ನಿಮ್ಮ ನಾಟಕಗಳಲ್ಲಿ ಜಾನಪದದ ಹೆಸರಿನಲ್ಲಿ ಉಳುವವನೇ ...ಒಡೆಯ ಎಂದು ಹೇಳುತ್ತ ಅದನ್ನು ಹೆಣ್ಣಿಗೆ ನೇರವಾಗಿ ಅನ್ವಯಿಸಿದ್ದೀರಿ. ...ಭೋಗದ ವಸ್ತು ಎಂಬಂತೆ ಚಿತ್ರಿಸಿದ್ದೀರಿ.

...ತ್ತರ: ಹೌದು, ಹೆಣ್ಣು ಭೋಗದ ವಸ್ತು ಎಂದು ಹೇಳಲು ನನಗೆ ...ವಾಗ್ತಿದೆ. (ಈ ನೇರ ಉತ್ತರದಿಂದ ತಬ್ಬಿಬ್ಬಾದ ಹೆಂಗಸರು ಗಪ್‌ಚುಪ್. ...ಸಿಕೊಂಡು ಒಬ್ಬಳು ಹೆಣ್ಣುಮಗಳು ಕೇಳುತ್ತಾಳೆ)-

...: ಹೆಣ್ಣಿನ ಬಗ್ಗೆ ನಿಮಗೆ ಗೌರವವಿಲ್ಲ ಅಲ್ಲವೆ?'

...ತ್ತರ: ಛೆಛೆ! ಇಲ್ಲಿರುವ ಎಲ್ಲರಿಗಿಂತ, ಬೆಂಗಳೂರಿನ ಎಲ್ಲರಿಗಿಂತ, ಪ್ರಪಂಚದ ...ಂತ ಹೆಚ್ಚಿಗೆ ನನಗೆ ಹೆಣ್ಣಿನ ಬಗ್ಗೆ ಗೌರವವಿದೆ (ಚಪ್ಪಾಳೆ).

...ನ ಮೊನ್ನೆ ಬೆಂಗಳೂರಿನ ಒಂದು ಚರ್ಚೆಯಲ್ಲಿ ಚಂದ್ರಶೇಖರ ಕಂಬಾರರಿಗೆ ...ತ್ತು ಆತ ಕೊಟ್ಟ ಉತ್ತರ. ವೈಭವ, ಭೋಗ, ಆನಂದ ಮುಂತಾದವೆಲ್ಲ ...ರ ಜಗತ್ತಿನಲ್ಲಿ **positive** ಪದಗಳು; **negative** ಮಾತುಗಳೇ ಕಮ್ಮಿ ಇರುವ ಇದರಲ್ಲಿ ನಾರ್ಸಿಸಸ್ ಕೂಡ ...ಪಾದಕ್ಕಿಳಿವವರು ಹುಷಾರಾಗಿರಬೇಕು!

...ೀಳೇಶಂಕರನಿಗೆ ರೋಗ, ಯೋಗ, ಭೋಗ ಒಂದೇ ಅಲ್ಲವೆ?

...ೋಡುವ ಕಣ್ಣು


...ಗೆ ಯೋಚಿಸುತ್ತಾ ಕೂತಿದ್ದೇನೆ.

...ಲ್ಲಿ ಸಾಹಿತಿಗಳು ಬತ್ತಿಹೋದಂತೆ ಕಾಣುತ್ತಿದ್ದಾರೆ. 'ಭವ' ತರಹದ್ದನ್ನು ಬರೆಯುವವರು ಒಂದು ಕಡೆ ಇದ್ದರೆ ...ರುದವರು ಮನಸ್ಸಿಗೆ ಬಂದಂತೆ ಬರೆಯುತ್ತಿದ್ದಾರೆ. ಮೊನ್ನೆ ಯಾವುದೋ ಪತ್ರಿಕೆಯನ್ನು ನಮ್ಮ ಹುಡುಗರು ...ದರು. ಒಂದು ಲೇಖನದ ಶೀರ್ಷಿಕೆ ಮಾತ್ರ ಕಾಣಿಸಿತು 'ಅಡಿಗರು ತೆಗೆಸಿದ್ದು ಲಂಕೇಶಣ್ಣನ ಒಂದೇ ಕಣ್ಣೆ?' ...ನಾನು ನಕ್ಕೆ, ಅದನ್ನು ಯಾರು ಬರೆದಿದ್ದಾರೆ ಎಂದು ಕೇಳಿ ಇನ್ನಷ್ಟು ನಗುವಂತಾಯಿತು. ದಿನಗಳೆದಂತೆ ಎಲ್ಲವೂ ಕಹಿಯಾಗಿ ಇಲ್ಲವೇ ತಮಾಷೆಯಾಗಿ ಕಾಣಿಸುತ್ತದೆ.

ನಿನ್ನೆ ಓದಿದ ಒಂದು ವರದಿ ನೆನಪಾಗುತ್ತಿದೆ. ಪಶ್ಚಿಮ ದೇಶದ ಒಬ್ಬಳು ಹುಡುಗಿ ಗರ್ಭಿಣಿಯಾಗಿದ್ದಾಳೆ. ಅವಳ ಸ್ಥಿತಿಯ ಬಗ್ಗೆ ಅನೇಕ ಪುಸ್ತಕಗಳಿವೆ. ಬಸಿರಾದವಳಿಗೆ ಹಿತವಚನ ಹೇಳುವ ನರ್ಸ್‌ಗಳು, ಮಿಡ್‌ವೈಫ್‌ಗಳು ಬೇಕಾದಷ್ಟು ಜನರಿದ್ದಾರೆ. ಆದರೆ ಅದು ಅವಳ ಸ್ಥಿತಿ, ಗರ್ಭಿಣಿ ಸ್ಥಿತಿ. ಅದರ ಬಗ್ಗೆ ಹೇಳಬೇಕಾದವಳು, ತನ್ನೆಲ್ಲ ಭಾವನೆಗಳನ್ನು, ಆತಂಕಗಳನ್ನು ವರ್ಣಿಸಬೇಕಾದವಳು ಆಕೆ. ಗರ್ಭ ಧರಿಸಿದರೆ ಎಲ್ಲೆಲ್ಲೊ ಮಾಂಸ ಕೂಡಿಕೊಳ್ಳುತ್ತದೆ. ನಡು ದಪ್ಪವಾಗುತ್ತದೆ, ಎದೆ ಬಿಸಿಯಾಗುತ್ತದೆ, ಬಣ್ಣ ಬದಲಾಗುತ್ತದೆ, ಒಂದು ಬಗೆಯ ಸಂಭ್ರಮದ ಜೊತೆಗೆ ನಿರೀಕ್ಷೆ ಮತ್ತು ಭಯ ಸೇರಿಕೊಳ್ಳುತ್ತದೆ.

ಅನೇಕರು ಗರ್ಭಿಣಿಯ ಬಗ್ಗೆ ಬರೆಯುವುದು ಅಷ್ಟು ಸರಿ ಇರುವುದಿಲ್ಲ, ಒಂಭತ್ತು ತಿಂಗಳಿಗೆ ಹೆರುವುದಾಗಿ ಹೇಳುತ್ತಾರೆ. ಆದರೆ ವಿಕಿಐವೋನಿ ಎಂಬ ಈ ಹುಡುಗಿ ಕರಾರುವಾಕ್ಕಾಗಿ ಹಾಕಿದ ಲೆಕ್ಕದ ಪ್ರಕಾರ ಹಡೆಯುವುದು ಹತ್ತು ತಿಂಗಳಿಗೆ; ಹಾಗೆಂದು ಏನೇನೋ ಕನಸು ಬೀಳುತ್ತವೆ....

ಕುತೂಹಲ ಮತ್ತು ಆತ್ಮನಿರೀಕ್ಷೆ ಇದ್ದರೆ ಪುಸ್ತಕಗಳನ್ನು ಬರೆಯುವುದು ಕಷ್ಟವಲ್ಲ, ವಿಕಿ ತರಹವೇ ಸೂಕ್ಷ್ಮಜ್ಞತೆ, ಜೀವನಪ್ರೇಮ ಮತ್ತು ನಿಷ್ಠುರತೆ ಇರುವ ನಮ್ಮ ಹೆಣ್ಣುಮಕ್ಕಳು ಬರೆಯಲು ನೂರಾರು ವಿಷಯಗಳಿವೆ. ಅವರು ಬೆಳೆಯುವ ಪ್ರಕ್ರಿಯೆಯೇ ವಸ್ತುವಾಗಬಲ್ಲದು.




ಹೀಗೇ ಯೋಚಿಸುತ್ತಿದ್ದಾಗ 'ಯಶೋಧರ ಚರಿತ್ರೆ'ಯ ಅಮೃತಮತಿಯ ಬಗ್ಗೆ ನಾನು ಓದಿದ ಒಂದೆರಡು ಲೇಖನಗಳು ನನ್ನನ್ನು ಕಾಡುತ್ತಿವೆ. ಮನುಷ್ಯರ ಜೀವನದ ಕಾಮ, ಸಾವು ಮತ್ತು ಹಂಗಾಮಿ ಗುಣ ಬಲ್ಲವರಿಗೆ ಅಮೃತಮತಿಯನ್ನು ಕೂಡಲೇ 'ವಿಕೃತೆ' ಅನ್ನುವುದು ಕಷ್ಟವಾಗುತ್ತದೆ.

ವಿಕೃತಿ ಎಂದರೆ ಏನು? ವಿಕಾರ ಅಂದರೆ ಯಾವುದು? ನಾವೆಲ್ಲ ತಿಳಿದಿರುವುದು ನೋಡಲು ಅಂದವಾಗಿರುವ ಇಬ್ಬರು ಸದಾ ಅನ್ಯೋನ್ಯವಾಗಿದ್ದು ನಾಲ್ಕು ಜನ ಒಪ್ಪುವಂತೆ ಬಾಳಿ ಸಾಯಬೇಕು. ಮನ್ಮಥನಂಥ ಗಂಡನನ್ನ ಬಿಟ್ಟು ಅಷ್ಟಾವಕ್ರನ ಜೊತೆಗೆ ಹೋದ ಅಮೃತಮತಿ **pervert!** ಆದರೆ ಮನುಷ್ಯನ ಮನಸ್ಸು ಎಲ್ಲರೂ ತಿಳಿದಂತೆ ಇರುವುದಿಲ್ಲ, ಅದು ಶೇಕ್ಸ್‌ಪಿಯರ್‌ಗೆ ಮತ್ತು ಪನ್ನನಿಗೆ ಗೊತ್ತಿತ್ತು, ಈ ಅನಿರೀಕ್ಷಿತ, ಆಘಾತದಂತಹ ಕ್ರಿಯೆಯ ಅರ್ಥವನ್ನು ಅವರು ಅರಿತಿದ್ದರು.

ಅಕ್ಟೋಬರ್ 11, 1995

‘ಕೋರ್ಟ್‌ ಜ್ವರ’, ‘ಜೈಲು ಜ್ವರ’ ಇತ್ಯಾದಿ



ಎಚ್.ಎಲ್. ಕೇಶವಮೂರ್ತಿ

ಅಣಕ

ಜ್ವರಗಳಲ್ಲಿ ಎಷ್ಟು ವಿಧ?

ಉತ್ತರ?

ಹೇಳುವವರ ಕ್ಷೇತ್ರ ಅವಲಂಬಿಸಿದೆ.


ವೈದ್ಯರನ್ನು ಕೇಳಿದರೆ ಹಲವಾರು ಹೆಸರುಗಳನ್ನು ಹೇಳಬಹುದು. ಇತ್ತೀಚೆಗೆ ಆ ಪಟ್ಟಿಗೆ ಸೇರ್ಪಡೆ......‘ಕೋರ್ಟು ಜ್ವರ,’ ‘ಜೈಲು ಜ್ವರ.’

ಕಟ್ಟಾ ಸುಬ್ರಹ್ಮಣ್ಯ ನಾಯ್ಡುಗೆ ಬಂದಿರುವುದು ‘ಜೈಲು ಜ್ವರ’. ಇದಕ್ಕೆ ಮೊದಲು ಅವರಿಗೆ ‘ಜೈಲು ಹೃದಯ ಬೇನೆ’ ಬಂದಿತ್ತಂತೆ. ಜಯದೇವ ಹೃದಯರೋಗ ಆಸ್ಪತ್ರೆಯ ವೈದ್ಯರು ತಪಾಸಣೆ ಮಾಡಿದರಂತೆ. ನಂತರ ‘ಅಂತಹ ಯಾವುದೇ ಬೇನೆ ಇವರಿಗೆ ಇಲ್ಲ’ ಎಂದರಂತೆ. ವೈದ್ಯರ ಕಣ್ತಪ್ಪಿಸಿಯೂ ಇದು ಬಂದಿರುವ ಸಾಧ್ಯತೆ ಇದೆ. ಈ ಅಂಶವನ್ನು ವೈದ್ಯರು ಒಪ್ಪಲು ಸಿದ್ಧರಿಲ್ಲ! ‘ಜೈಲು ಹೃದಯ ಬೇನೆ’ ಇಲ್ಲ ಅಂದಮೇಲೆ ಶ್ರೀಯುತರಿಗೆ ‘ಜೈಲುಜ್ವರ’ ಬಂತಂತೆ. ಇದರ ತಪಾಸಣೆ ಮಾಡಿದ ವೈದ್ಯರ ಕೈಗೆ ಇದು ಸಿಕ್ಕಿಬಿದ್ದಿತಂತೆ. ಇಲಾಜು ಮಾಡಲು ಅವರನ್ನು ಆಸ್ಪತ್ರೆಯಲ್ಲೇ ಇರಿಸಿಕೊಂಡರಂತೆ. ಜೈಲಿನಲ್ಲಿಯೇ ಆಸ್ಪತ್ರೆ ಇದೆ ನಿಜ. ಅಲ್ಲೇ ಚಿಕಿತ್ಸೆ ನೀಡಬಹುದಾಗಿತ್ತು. ವಿಕ್ಟೋರಿಯಾ ಆಸ್ಪತ್ರೆ ಬೇಕಿರಲಿಲ್ಲ ಅನ್ನುವವರಿರಬಹುದು. ಸೌಲಭ್ಯಗಳ ಕೊರತೆಯಿಂದ ಹೀಗೆ ಮಾಡಿರಬಹುದು! ರೋಗ ಬೇಗ ಗುಣಮುಖ ಆಗಲಿ ಎಂದು ಹವಾನಿಯಂತ್ರಣ ಕೊಠಡಿಯಲ್ಲೇ ಇರಿಸಿದರಂತೆ. ಮಾನಸಿಕವಾಗಿ ನೋವು ಅನುಭವಿಸದೇ ಇರಲಿ ಎಂದು ಸಕಲ ಸಲವತ್ತುಗಳನ್ನೂ ಒದಗಿಸಿದರಂತೆ!

ಮಾಜಿ ಮುಖ್ಯಮಂತ್ರಿಗಳಿಬ್ಬರಿಗೂ ಈಗ ಬಂದಿರುವುದು ‘ಕೋರ್ಟು ಜ್ವರ’! ಕೋರ್ಟ್‌ಗೆ ಹಾಜರಾಗಲು ವಿನಾಯಿತಿ ಕೋರಲು ಬಂದಿರುವ ಜ್ವರ ಇದು ಎಂದು ಹಲವರು ಅಭಿಪ್ರಾಯಿಸಿದ್ದಾರೆ. ಏನಾದರೂ ಆಗಲಿ ನುರಿತ ವೈದ್ಯರು ನೀಡಿರುವ ಸರ್ಟಿಫಿಕೇಟು ಇರುವುದರಿಂದ ಈ ಜ್ವರ ಬಂದಿರುವುದು ಖಚಿತ ಎಂದಾಯಿತು! ಇವನ್ನೆಲ್ಲ ವಿರೋಧಿ ಪರ ವಕೀಲರು ಅಲ್ಲಗಳೆಯುತ್ತಿದ್ದಾರಂತೆ. ಇಂತಹ ವಾದದಿಂದ ಬೇಸರಗೊಂಡ ಆರೋಪಿಗಳ ಪರ ವಕೀಲರು ‘ಈ ವಕೀಲರುಗಳಿಗೆ ಹೃದಯವಂತಿಕೆಯೇ ಇಲ್ಲ, ರೋಗದಿಂದ ಬಳಲುತ್ತಿರುವವರನ್ನೂ ಎಳೆದುತನ್ನಿ ಎನ್ನುವವರಿಗೆ ಮಾನವೀಯತೆಯೇ ಇಲ್ಲ’ ಎಂದು ಶರಾ ಬರೆಯುತ್ತಿದ್ದಾರಂತೆ. ಇವರಿಗೆಲ್ಲ ಆಯಕಟ್ಟಿನ ಸಮಯದಲ್ಲೇ ಯಾಕೆ ಇಂತಹ ರೋಗಗಳು ಕಾಣಿಸಿಕೊಳ್ಳುತ್ತವೆ ಎನ್ನುವ ಪ್ರಶ್ನೆಗೆ ಮಾನವೀಯ ಮೌಲ್ಯ ಪ್ರತಿಪಾದಕ ವಕೀಲರು ಏನು ಉತ್ತರ ಹೇಳಿದರೋ ತಿಳಿಯದು. ಪ್ರಾಯಶಃ ಜ್ವರ ಎನ್ನುವುದು ಸಮಯ ಸಂದರ್ಭ ನೋಡಿ ಬರುತ್ತಾ? ಯಾವಾಗ ಬೇಕಾದರೂ ಬರಬಹುದು. ಸನ್ಮಾನ್ಯರಿಗೆ ಈಗ ಬಂದಿದೆ ಅಂದಿರಬಹುದೋ ಏನೋ!

ರಾಜಕಾರಣಿಗಳಿಗೆ ಏಳರ ಶನಿ ಕಾಟ

ರಾಜಕಾರಣಿಗಳ ಮನೆ ಅಂದರೆ ಸಂಪತ್ತಿನ ಗಣಿ ಇದ್ದ ಹಾಗೆ. ಸಕಲ ಸೌಕರ್ಯಗಳೂ ದೊರೆಯುವ ಸ್ಥಳ ಎಂಬುದನ್ನು ಅರಿತು ಶನಿಮಹಾರಾಜ ಏನು ಮಾಡಿದ್ದಾನೆ.... ಅವರ ಏಳನೇ ಮನೆಯಲ್ಲಿ ಭದ್ರವಾಗಿ ತಳ ಊರಿ ಬಿಟ್ಟಿದ್ದಾನೆ. ಅಲ್ಲಿಂದ ಸದ್ಯಕ್ಕೆ ಕದಲುವ ಸೂಚನೆಗಳೇ ದೊರೆಯುತ್ತಿಲ್ಲ. ಇದರ ಪರಿಣಾಮದಿಂದಾಗಿ ರಾಜಕಾರಣಿ ಮಾತ್ರ ಅಲ್ಲ, ಸಂಬಂಧಿಕರೂ ಪರಪ್ಪನ ಅಗ್ರಹಾರದ ಅತಿಥಿಗಳಾಗುವ ದೌರ್ಭಾಗ್ಯ ಒದಗಿ ಬಂದಿದೆ. ಶನಿಕಾಟ ಅಂದರೆ ಇದು!



ಹರದನಹಳ್ಳಿ ದೇವೇಗೌಡ ಕುಮಾರಸ್ವಾಮಿಯರ ಪರಿಸ್ಥಿತಿ ಗಮನಿಸಿ. ಹೇಳಿಕೇಳಿ ಮುಖ್ಯಮಂತ್ರಿಯಾಗಿದ್ದವರು. ಯಾರಿಗೂ ಕೇರೇ ಮಾಡದ ಮನುಷ್ಯ. ಎಷ್ಟೇ ದೊಡ್ಡವರಾಗಲಿ ಉಚಾಯಿಸಿ ಮಾತನಾಡುವುದರಲ್ಲಿ ಅಗ್ರಗಣ್ಯರು. ಲೋಕಾಯುಕ್ತ ಗಣಿ ವರದಿ ಸಲ್ಲಿಸುವುದಕ್ಕೆ ನಾನೇ ಕಾರಣ ಅಂತ ಎದೆ ಉಬ್ಬಿಬ್ಬಿಸಿಕೊಂಡು ಹೇಳುತ್ತಿದ್ದರು. ಹಾಳಾದ ಶನಿಕಾಟ ಇತ್ತಲ್ಲ ಅದು ಆ ವರದಿಯಲ್ಲಿ ಇವರ ಹೆಸರೂ ಇರುವಂತೆ ಮಾಡಿದೆ. ಪರಪ್ಪನ ಅಗ್ರಹಾರ ಅತಿಥಿಗೃಹದ(!) ಹಾದಿ ಸುಗಮವಾಗಿ ಇರುವಂತೆ ಎಲ್ಲ ಸಿದ್ಧತೆಗಳನ್ನು ಮಾಡಿರುವಂತಿದೆ. ಅದರಂತೆ (ಯಡ್ಯೂರಪ್ಪ!) ನಾನು ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತರುವವನಲ್ಲ ಎಂದು ಎದೆತಟ್ಟಿ ಹೇಳುತ್ತಿದ್ದ ಕುಮಾರಸ್ವಾಮಿಯಂತಹ ಕುಮಾರಸ್ವಾಮಿಯವರೇ ನಿರೀಕ್ಷಣಾ ಜಾಮೀನಿಗೆ ಪರದಾಡುವಂತಾಗಿದೆ!

ಈ ನಡುವೆ ಇನ್ನೊಂದು ಆಗಿದೆ. ಅರಿಭಯಂಕರ ಕುಮಾರಣ್ಣನವರಿಗೆ ಮಾಜಿ ಲೋಕಾಯುಕ್ತರ ತಡರಾತ್ರಿ ಜೀವನ ನೆನಪಾಗಿದೆ. ಎಂತಹದ್ದೇ ಮನುಷ್ಯ ತನ್ನ ಇಡೀ ಜೀವಮಾನದಲ್ಲಿ ಮಾಡಬಹುದಾದುದಕ್ಕಿಂತ ಹೆಚ್ಚು ತಡರಾತ್ರಿ ವ್ಯವಹಾರಗಳನ್ನು ಈಗಾಗಲೇ ಮಾಡಿ ಮುಗಿಸಿರುವುದರಿಂದಲೋ ಏನೋ. ಸಂತೋಷ್ ಹೆಗ್ಡೆಯವರ ಈ ಜೀವನ ನೆನಪಿಗೆ ಬಂದಿರಬಹುದು. ಖಾಸಗಿ ಟಿವಿ ಚಾನೆಲ್ ಒಂದರಲ್ಲಿ ಇದಕ್ಕೆಲ್ಲ ಅವರಿಗೆ ಹಣ ಎಲ್ಲಿಂದ ಬರುತ್ತೆ ಎಂದು ಧೀರೋದಾತ್ತವಾಗಿ ಪ್ರಶ್ನಿಸಿ, ಅದರ ಮೂಲ ನನಗೆ ತಿಳಿದಿದೆ ಎಂಬ ಸೂಚನೆಯನ್ನೂ ಇತ್ತಿದ್ದಾರೆ. ವೈಯಕ್ತಿಕ ಜೀವನವನ್ನು ಎತ್ತಿ ಹಾಡಿದರಲ್ಲ ಕುಮಾರಣ್ಣ ಅವರ ಏಳನೆ ಮನೆಯಲ್ಲಿ ಕುಳಿತಿದ್ದ ಶನಿ ಏನು ಮಾಡಿದ.... ಹೆಗ್ಡೆಯವರ ಅತಿಸೂಕ್ಷ್ಮ ಗ್ರಂಥಿಗೆ ಈ ಮಾತಿನ ಮೊನಚು ತಾಗುವಂತೆ ಮಾಡಿಬಿಟ್ಟಿದ್ದಾನೆ! ತನ್ನ ಖಾಸಗಿ ಜೀವನವನ್ನೇ ಉಚಾಯಿಸಿ ಮಾತನಾಡುತ್ತಿದ್ದಾನಲ್ಲ ಇವನು ಎಂದು ಸಿಟ್ಟಿಗೆದ್ದ ಅವರು ‘ನನಗಿರೋಳು ಒಬ್ಬಳೇ ಹೆಂಡತಿ, ಒಂದೇ ಸಂಸಾರ. ಆ ಮುಠ್ಠಾಳನ ಹಾಗೆ ಹತ್ತಾರು ಸಂಸಾರಗಳು ಇಲ್ಲ, ಯಾವ ಮನೇಲಿ ಇದಾರೆ ಅಂತ ತಡಕುವ ಹಾಗೆ ಇಲ್ಲ, ಚಟಾನೂ ನಾನು ಅಂಟಿಕೊಂಡಿಲ್ಲ, ಲಂಚದ ಮುಟ್ಟಿಲ್ಲ, ಅವರ ಹಾಗೆ ಸಾರ್ವಜನಿಕ ಗಂಟು ನು... ಎಂಬ ಅರ್ಥದ ಮಾತು ಆಡಿ ಕುಮಾರಣ್ಣನ ಜಾತ... ಬಟಾಬಯಲು ಮಾಡಿದರು. ಅಯ್ಯಯ್ಯೋ ಇ... ಇದು ಇರಲಾರದೆ ಇರುವೆ ಬಿಟ್ಕಂಗಾಗದಲ್ಲ ಅಂತ ತಿ... ತೆಪ್ಪಗಿರಬಹುದಿತ್ತು, ಆದರೆ ಏಳನೆ ಮನೇಲಿದ್ದ... ತೆಪ್ಪಗಿರಲು ಬಿಡಬೇಕಲ್ಲ, ‘ಇಂತಹ ಗೊಡ್ಡು ಮಾತುಗ... ಬಗ್ಗೋನಲ್ಲ ನಾನು. ನನ್ನ ಹತ್ತಿರ ದಾಖಲೆಗಳಿವೆ. ಅ... ಸಮೇತ ಹೆಗ್ಡೆ ರಾತ್ರಿ ಜೀವನದ ರಹಸ್ಯ ಬಯಲು ಮಾ... ಸ್ವಲ್ಪ ಅವಕಾಶ ಕೊಡಿ’ ಎಂದೆಲ್ಲ ಮಾಧ್ಯಮಗಳ ಎ... ತೊಡೆ ತಟ್ಟಿದರು. ಅವರ ತಂದೆಯವರು ‘ಇವೆಲ್ಲ ... ಮಗನೇ. ಇಂತಹವಕ್ಕೆಲ್ಲ ಕೈ ಹಾಕಬೇಡ’ ಅಂತ ... ಹೇಳಿದ ಹಾಗೆ ಹೇಳಿದರೂ ಹಾಳಾದ ... ಸುಮ್ಮನಿರುವುದಕ್ಕೆ ಬಿಡಬೇಕಲ್ಲ... ಹಿಂಗೆಲ್ಲ ಹೇಳ... ಏಳನೆ ಮನೇಲಿ ಕುಂತವ್ನೆ!

ಒಬ್ಬ ಮಾಜಿ ಕತೆ ಹೀಗಾಯಿತಲ್ಲ, ಇನ್ನೊಬ್ಬ ವ... ನೀಡುತ್ತಿರುವ ಕಾಟ ಹೀಗಿದೆ. ಪಾಪ ಯಡ್ಯೂರಪ್ಪ... ಭ್ರಷ್ಟಾಚಾರಿ ವಿರೋಧಿ ಅಣ್ಣಾ ಹಜಾರೆಗೆ ಬೆಂಬಲ ನಿ... ಅಂತ ತುದಿಗಾಲಿನಲ್ಲಿ ನಿಂತಿದ್ದರು. ಅಂತಹವರ ... ಭ್ರಷ್ಟಾಚಾರದ ಆರೋಪ ಬರುವಂತೆ ಮಾಡಿದೆ! ... ಒಂದು ಎರಡು ಅಲ್ಲ, ಹತ್ತೆಂಟು ಹಗರಣ... ಸುತ್ತಿಕೊಳ್ಳುವಂತೆ ಮಾಡಿದೆ. ಒಟ್ಟಿನಲ್ಲಿ ಇ... ನೋಡುತ್ತಿದ್ದರೆ ಏಳನೇ ಮನೇಲಿ ಕುಳಿತಿರೋ... ರಾಜಕಾರಣಿಗಳನ್ನೆಲ್ಲ ಸಂಸಾರ ಸಮೇತ ಪರಪ್ಪನ ಅಗ್ರ... ದೂಡುವ ಸಂಚು ಹೂಡಿರುವಂತೆ ತೋರುತ್ತಿದೆ.

ಇದು ಹೇಗೇ ಇರಲಿ. ಯಡ್ಯೂರಪ್ಪನವರಿಗೆ ದಿ... ಇರುವಂತಿದೆ. ಯಾಕೆಂದರೆ ಬಹಳ ಹಿಂದೆಯೇ ... ಅಗ್ರಹಾರದಲ್ಲಿ ಕುಮಾರಸ್ವಾಮಿ ಮನೆಯವರಿಗಾಗಿ ಸ... ಸೆಲ್‌ಗಳನ್ನು ಕಟ್ಟಿಸುತ್ತೇನೆ ಎಂದಿದ್ದರು. ಆ ದಿವ್ಯದೃಷ್ಟಿ... ಸ್ವಲ್ಪ ಏರುಪೇರಾಗಿರಬಹುದು. ತಾವೂ ಅದರ ಫಲಾ... ಆಗುತ್ತೇನೆ ಎಂಬುದರ ಅರಿವು ಬಂದಿರಲಿಕ್ಕಿಲ್ಲ! ಹೇಗಾ... ಆಗಲಿ. ರಾಜಕಾರಣಿಗಳೆಲ್ಲ ಸಕುಟುಂಬ ಪರಿ... ಸಮೇತರಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ.....!

ಅಧಿಕಾರಿಗಳು, ರಾಜಕಾರಣಿಗಳನ್ನು ಜೈಲಿಗೆ ಕಳುಹಿಸಿದರೆ ಭ್ರಷ್ಟಾಚಾರದ ಬೇರುಗಳು ಕಮರುತ್ತವೆಯೇ

ಕಳೆದ ಎರಡು ಸಂಚಿಕೆಗಳಲ್ಲಿ ಚೆನ್ನಾಗಿದ್ದ ಮತ್ತು ಕೆಟ್ಟದಾಗಿದ್ದ ಲೇಖನಗಳು ಪ್ರಕಟವಾಗಿದ್ದನ್ನು ಗಮನಿಸಿದೆ. ಚೆನ್ನಾಗಿದ್ದ ಲೇಖನಗಳೆಂದರೆ ಗೌರಿ ಲಂಕೇಶ್ ಬರೆದ ‘ಲೋಕಪಾಲ್ V/s ಜನಲೋಕಪಾಲ್’ ಮತ್ತು ಅಣ್ಣಾ ಹಜಾರೆ ಅವರ ರಾಲೆಗಾಂವ್ ಹಳ್ಳಿ ಬಗೆಗಿನ ಲೇಖನಗಳು. ಇಡೀ ದೇಶವೇ ಒಂದು ನಿಟ್ಟಿನಲ್ಲಿ ಮಾತ್ರ ನೋಡುತ್ತಿದ್ದಾಗ ಜನಲೋಕಪಾಲ್ ಬಗ್ಗೆ ಇನ್ನೊಂದು ನಿಟ್ಟಿನಲ್ಲಿ ನೋಡುವಂತೆ ಮಾಡಿತು ಮೊದಲ ಲೇಖನ. ಹಾಗೆಯೇ ಯಾರೂ ಅಣ್ಣಾ ಅವರ ಹಳ್ಳಿಯ ಬಗ್ಗೆಯಾಗಲಿ, ಅಲ್ಲಿ ಅವರು ಮಾಡಿರುವ ಕೆಲಸಗಳ ಬಗ್ಗೆಯಾಗಲಿ ಬರೆದಿರಲಿಲ್ಲ, ಆ ಕೊರತೆಯನ್ನು ಎರಡನೆ ಲೇಖನ ತುಂಬಿತು.

ಇನ್ನು ಪತ್ರಿಕೆಯಲ್ಲಿ ಪ್ರಕಟವಾದ ಕೆಟ್ಟ ಲೇಖನವೆಂದರೆ ರಾ. ಸೋಮನಾಥ್ ಅವರು ಸದಾನಂದ ಗೌಡರ ಮಗನ ಅಕಾಲಿಕ ಸಾವನ್ನು ಕುರಿತು ಬರೆದ ಲೇಖನ. ಓರ್ವ ವ್ಯಕ್ತಿಯ ಖಾಸಗಿ ದುರಂತದ ಬಗ್ಗೆ ಇಂತಹ ಕೆಟ್ಟ ಲೇಖನವನ್ನು ನಾನು ಈ ಹಿಂದೆ ಎಲ್ಲೂ ಓದಿರಲಿಲ್ಲ, ಸಂಘ ಪರಿವಾರವನ್ನು ನೀವು ವಿರೋಧಿಸುತ್ತೀರಿ, ಆದರೆ ಈ ಹಂತಕ್ಕೆ ಇಳಿದದ್ದು ದುರಂತ.

ಅರುಣ್ ಶೌರಿ ಕೂಡ ಬಿಜೆಪಿಯ ಸದಸ್ಯ, ಬಿಜೆಪಿಯನ್ನು ವಿರೋಧಿಸುವ ಗೌರಿ ಶೌರಿ ಅವರ ಅಂಗವಿಕಲ ಮಗನ ಬಗ್ಗೆ ಮನ ಮುಟ್ಟುವಂತೆ ಬರೆದಿದ್ದರು. ಆದರೆ ಸೋಮನಾಥ್ ಯಾಕೆ ಇಂತಹ ಲೇಖನ ಬರೆದರು ಮತ್ತು ಅದನ್ನು ಗೌರಿ ಯಾಕೆ ಪ್ರಕಟಿಸಿದರು ಎಂದು ನನಗೆ ಅರ್ಥವಾಗುತ್ತಿಲ್ಲ.

ಇಂತಹ ಲೇಖನಗಳು ಮತ್ತೆ ಪ್ರಕಟವಾಗದಂತೆ ಎಚ್ಚರ ವಹಿಸಿ.

- ಡಾ. ಅವಿನಾಶ್ ಶೆಟ್ಟಿ, ಉಡುಪಿ.


ಪಾರ್ಲಿಮೆಂಟಿನಲ್ಲಿ ಚರ್ಚೆಗಾಗಿ, ತಿದ್ದುಪಡಿಗೊಂಡು ಅನುಮೋದನೆಗಾಗಿ ಕಾಯುತ್ತಿರುವ ಮೂರು ಪ್ರಮುಖ ಮಸೂದೆಗಳೆಂದರೆ **Food security bill, Land aquisition bill** ಮತ್ತು **Communal voilence bill.** ಈ ಮಸೂದೆಗಳು ಬಡಜನರ, ರೈತರ, ಆದಿವಾಸಿಗಳ, ಮುಸ್ಲಿಮರ ಬದುಕಿನೊಂದಿಗೆ ನೇರವಾಗಿ ಸಂಬಂಧಪಟ್ಟಿವೆ. ಆದರೆ ಈ ಮಸೂದೆಗಳ ಸಾಧಕ ಬಾಧಕಗಳನ್ನು ಆಮೂಲಾಗ್ರವಾಗಿ, ವೈಜ್ಞಾನಿಕವಾಗಿ ಚಿಂತಿಸಿ, ಚರ್ಚಿಸಿ ಈ ಜನರ ಬದುಕು ಸುಧಾರಿಸುವಂತೆ ರೂಪಿಸುವಂತಹ ಸಂಸದೀಯ ಪಟುಗಳಾಗಲಿ, ಸಂಸದರಾಗಲಿ.

ಈಗಿನ ಸಂಸತ್ತಿನಲ್ಲಂತೂ ಇಲ್ಲ.

ಆದ್ದರಿಂದ ಈ ಮಸೂದೆಗಳೇನಾದರೂ ಅನುಮೋದನೆಗೊಂಡರೆ ಆ ಜನರ ಬದುಕಲ್ಲಿ ಕ್ರಾಂತಿಕಾರಿ ಬದಲಾವಣೆಗಳೇನು ದಿಢೀರನೆ ಸಂಭವಿಸುವುದಿಲ್ಲ. ಆದರೆ ಬಹುಶಃ ಈಗಿನ ದುರಂತಮಯ ಸ್ಥಿತಿಯಿಂದ ಜೀವನಮಟ್ಟ ಸುಧಾರಿಸುವ ಸಾಧ್ಯತೆಗಳಿವೆ. ಆದರೆ ಈ ಮಟ್ಟದ ಸಾಮಾಜಿಕ ಜವಾಬ್ದಾರಿ, ಸಾಮಾಜಿಕ ನ್ಯಾಯ, ಅಲ್ಪಸಂಖ್ಯಾತರನ್ನು ಒಳಗೊಳ್ಳುವಿಕೆಯಂತಹ ಪ್ರಕ್ರಿಯೆಗಳು ನಮ್ಮ ಮಧ್ಯಮ ವರ್ಗಕ್ಕಾಗಲಿ, ಮೇಲ್ಜಾತಿಯವರಿಗಾಗಲೇ ಬೇಡ. ಇದು ನಮ್ಮ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೂ ಸುತರಾಂ ಹಿಡಿಸುವುದಿಲ್ಲ.

ಈ ಮಧ್ಯಮ ವರ್ಗ ಮತ್ತು ಮಾಧ್ಯಮಗಳಿಗೆ ಬೇಕಿರುವುದು ಬರೀ ಲೊಳಲೊಟ್ಟೆ ಚಳವಳಿಗಳು. ಆದರೆ ಇನ್ನೂ ಕಾಲ ಮಿಂಚಿಲ್ಲ, ನಮ್ಮ ಯುವ ಜನತೆಯನ್ನು ಪ್ರಗತಿಪರ ಚಿಂತನೆಗಳಿಗೆ, ಹೋರಾಟಗಳಿಗೆ ಬಗ್ಗಿಸುವ ಕೆಲಸವೇ ನಮ್ಮೆಲ್ಲರ ಮೊದಲ ಆದ್ಯತೆಯಾಗಬೇಕು. ಇಲ್ಲದಿದ್ದಲ್ಲಿ ಭವಿಷ್ಯದಲ್ಲಿ ಈ ಎಬಿವಿಪಿಗಳು, ಆರೆಸ್ಸೆಸ್‌ಗಳನ್ನು ಹಳಿಯುತ್ತಾ ಅಯ್ಯೋ ಎಂತ ಪ್ರಮಾದವಾಗುತ್ತಿದೆಯಲ್ಲ ಎನ್ನುವ ಒಂದು ಹಳಹಂಡ ನಮ್ಮೆಲ್ಲರಲ್ಲಿ ಉಳಿದುಕೊಳ್ಳುತ್ತದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



- ಬಿ. ಶ್ರೀಪಾದ್‌ಭಟ್, ಬೆಂಗಳೂರು

“ಭ್ರಷ್ಟಾಚಾರದಲ್ಲಿ ತೊಡಗಿದ ಅಧಿಕಾರಿಗಳು, ರಾಜಕಾರಣಿಗಳನ್ನು ಜೈಲಿಗೆ ಕಳುಹಿಸಿದರೆ ಭ್ರಷ್ಟಾಚಾರದ ಬೇರುಗಳು ಕಮರುತ್ತವೆಯೇ? ಭ್ರಷ್ಟಾಚಾರಕ್ಕೆ ಮೂಲ ಕಾರಣೇಕರ್ತರಾದ ಬೃಹತ್ ಉದ್ದಿಮೆದಾರರಿಗೆ ಯಾವ ಶಿಕ್ಷೆ?” ಎಂದು ಅಣ್ಣಾ ಅವರ ನಿರಶನದ ಕಾವು ಇದ್ದ ದಿನ ಸಿಂಧನೂರಿಗೆ ಆಗಮಿಸಿದ್ದ ಸಾಮಾಜಿಕ ಕಾರ್ಯಕರ್ತ ಶಿವಸುಂದರ್ ಪ್ರಶ್ನಿಸಿದರು.

ಕೇವಲ 11 ಜನರ ಜನಲೋಕಪಾಲ್ ಸಮಿತಿ 70 ಲಕ್ಷ ಉದ್ಯೋಗಿಗಳ ಮೇಲೆ ನಿಗಾಯಿಡುವುದು ಸುಲಭವೇ ಎನ್ನುವುದು ಅವರ ಆಕ್ಷೇಪಣೆ ಆಗಿತ್ತು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಮೇಲೆ ಪರಮಾಧಿಕಾರ ಹೊಂದುವ ಸಮಿತಿಯಲ್ಲಿ ಐದಾರು ಜನ ಭ್ರಷ್ಟರು ಸೇರಿಕೊಂಡರೆ ಅವರನ್ನು ಪ್ರಶ್ನಿಸುವವರು ಯಾರು ಎಂದು ಕಳವಳ ವ್ಯಕ್ತಪಡಿಸಿದರು.

ಜನಲೋಕಪಾಲ್ ಜಾರಿಗೆ ಒತ್ತಾಯಿಸಿ ನಡೆದ ಹೋರಾಟಕ್ಕೆ ಇನ್ನಿ... ಬೆಂಬಲ ವ್ಯಕ್ತವಾಯಿತು. ಆರೆಸ್ಸೆಸ್‌ನವರು ಮತ್ತೆ ‘ಬೋಲೋ ಭಾ... ಮಾತಾಕಿ ಜೈ’ ಎಂದು ಕೂಗಿದರು. ಸಾವಿರಾರು ಕೋಟಿ ತೆರಿಗೆ ಕಳ್ಳ... ವಯ್ಯಾರಿ ಸ್ವಾಮಿಗಳು ಕೋಟಿ ಕೋಟಿ ಕೊಟ್ಟು ರಾಮಲೀಲೆಯಲ್ಲಿ ಹ... ಲೀಲೆಗೆ ಕಾರಣರಾದರು.ಟಿ.ವಿ.ತುಂಬೆಲ್ಲಾ ಅಣ್ಣಾ ತುಂಬಿಕೊಂಡು ನ... ಪಟ್ಟಣಗಳಲ್ಲಿ ಪ್ರೇರಿತ ಬೆಂಬಲದ ಮೆರವಣಿಗೆಗಳೋ ಮೆರವಣಿಗೆ... ಭ್ರಷ್ಟರೇ ಭ್ರಷ್ಟಾಚಾರವನ್ನು ತೊಲಗಿಸುವಂತೆ ಬೀದಿಗಿಳಿದು ಹೋರ... ನಡೆಸಿದ ಅಧಿಕ ಪ್ರಸಂಗಗಳು ನಗೆ ಬರಿಸಿದವು.

ಈ ದೇಶದ ಮತ್ತೊಂದು ದುರಂತ ಆಪ್ಸಾ ಕಾನೂನಿನ ವಿ... ಕಳೆದೊಂದು ದಶಕದಿಂದ ಇರೋಮ್ ಶರ್ಮಿಳಾ ತನ್ನ ಪ್ರಾಣ ಲೆಕ್ಕಿ... ನಡೆಸುತ್ತಿರುವ ಉಪವಾಸ ಹೋರಾಟ ಯಾರಿಗೂ ಗೊತ್ತಾಗದೇ ಇರುವು... ಮನುಷ್ಯ ಪರ ಕಾಳಜಿಯ ಅರುಂಧತಿ ರಾ... ಅವರ ‘ನಾನು ಅಣ್ಣಾ ಆಗಲಾರೆ’ ಲೇಖನ ಚಿಂತ... ಹಚ್ಚಿತು. ಅಣ್ಣಾರ ಹಿಂದಿರುವ ಹಲವು ಬಣ್ಣಗ... ಕಾಣಿಸಿತು.


- ಬಸವರಾಜ, ಹಳ್ಳಿ ಹಸಮಕ...

ಕಳೆದೆರಡು ಸಂಚಿಕೆಗಳಲ್ಲಿ ಪ್ರಕಟವಾಗಿದ್ದ “ಸಿಂಧ... ಲಕ್ಷ್ಮಣ ಮತ್ತು ಬೆಟಗೇರಿ ಸಿದ್ದಪ್ಪಾರ.....” ಲೇಖನ... ಬಗ್ಗೆ.

ನಾನು ಲಕ್ಷ್ಮಣನ ಊರುಗಳಾದ ಸಿಂಧೂರ ವ... ರಡೇರಹಟ್ಟಿಯ ಸರಹದ್ದಿನವನು. ಸಿಂಧೂರು ಇಂದು ಮಹಾರಾಷ್ಟ್ರದಲ್ಲಿ... ರಡೇರಹಟ್ಟಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿದೆ. ಲಕ್ಷ್ಮಣ ನ... ಕಡೆಯ ಜನಪದದ ಹೀರೋ. ಶೌರ್ಯ ಮತ್ತು ಪರಾಕ್ರಮಗ... ಉಪಮೇಯವಾಗಿದ್ದಾನೆ. ನಾವೆಲ್ಲ ಅವನ ಕಥೆಗಳನ್ನು ಕೇಳುತ್ತಾ ಬೆಳೆದ... ಆದರೆ ಅವನ ಸಹಚರರು ರಡೇರಹಟ್ಟಿಯಲ್ಲಿ ಬಡತನದಿಂದ ಬ... ಅಸುನೀಗಿದರು. ಗುಡಗೇರಿ ಬಸವರಾಜ ಮತ್ತು ಚಿತ್ರನಟ ಸುಧಿ... ತಮ್ಮ ನಾಟಕ ಮತ್ತು ಚಲನಚಿತ್ರದಿಂದ ಲಕ್ಷ್ಮಣನನ್ನು ಜೀವಂತವಾಗಿಸಿ...

ಇನ್ನು ಚಂದ್ರೇಗೌಡರ ಬಗ್ಗೆ. ನಾನು ಅವರ ಅಭಿಮಾನಿ. ಪುಂಡ... ಶೇಠರ ನಂತರ ಗ್ರಾಮ್ಯ ಕನ್ನಡದ ಸೊಗಡನ್ನು ಸಮರ್ಥ... ಮುಂದುವರೆಸಿದ್ದಾರೆ. ಅವರ ‘ಬೆಟಗೇರಿ ಸಿದ್ದಪ್ಪಾ....’ ಲೇಖನದಲ್ಲಿ ಹಾ... ಕಡೆಯ ಸರಳ ಆಚರಣೆಗಳನ್ನು ಕೊಂಡಾಡಿದ್ದಾರೆ.

'90' ಹೊಡೆದು ಕಾಸು ಮಾಡಿದ ಸಾಧು




...ಟ, ನಿರ್ದೇಶಕ, ಸಂಗೀತ ನಿರ್ದೇಶಕ ಎಲ್ಲವೂ ಆಗಿರುವ ...ಕೋಕಿಲ ಈಗ ಫುಲ್ ಹ್ಯಾಪಿಯಾಗಿ ಕಿಲಕಿಲಾ ಎನ್ನುತ್ತಿದ್ದಾರೆ! ...ದಕ್ಕೆ ಕಾರಣ ಜಸ್ಟ್ '90'! ಸಾಧು ಬರೀ ನೈಂಟಿ ...ದಿರುವುದು ಮಾತ್ರವಲ್ಲ ಇನ್ನೂ '90' ಆದಾಗಲೇ ಅವರ ...ದೆ!



...ಧು ಕೋಕಿಲಾ ದಶಕದ ಹಿಂದೆ ...ಕುಮಾರ್ ನಟನೆಯ 'ನಂ.1' ಎಂಬ ...ಒಂದನ್ನು ನಿರ್ಮಿಸಿದ್ದರು. ಸಿನಿಮಾ ...ಾಗೇ ಇದ್ದರೂ ಜನ ಮಾತ್ರ ಅದನ್ನು ...ಸುವ ಮನಸ್ಸು ಮಾಡಿರಲಿಲ್ಲ. ...ಲವಾಗಿ ಆ ಕಾಲಕ್ಕೇ ಸಾಧು ...ಬ್ಬರಿ ನಲವತ್ತೈದು ಲಕ್ಷ ...ಯಿಗಳ ಲುಕ್ಸಾನು ಅನುಭವಿಸಿ ಸಾಲಗಾರರಾಗಿದ್ದರು. ಆದರೆ ಈಗ ದೀರ್ಘವಾದ ಗ್ಯಾಪ್ ...ಮತ್ತೊಮ್ಮೆ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಚಿತ್ರದ ಹೆಸರು ...ಈ ಬಾರಿ ಸಾಧು ಮುಂಜಾಗ್ರತೆ ವಹಿಸಿದ್ದರಿಂದಲೋ ಏನೋ ...ಬಿಡುಗಡೆಗೆ ಮುನ್ನವೇ ಭರ್ಜರಿ ಲಾಭದಲ್ಲಿದ್ದಾರೆ. ಕಡಿಮೆ ...ನಲ್ಲಿ ನಿರ್ಮಾಣವಾಗಿರುವ '90' ಚಿತ್ರವನ್ನು ಉದಯ ...ಮವರು ಖರೀದಿಸಿದ್ದಾರೆ. ಅದೂ 90 ಲಕ್ಷ ರೂಪಾಯಿಗಳ ...ಮೊತ್ತಕ್ಕೆ. ಇನ್ನು ಬಿಡುಗಡೆಯಾದ ನಂತರ ಆ ಚಿತ್ರ ಬಿ ಮತ್ತು ...ಟರ್‌ಗಳಲ್ಲಿ ಓಡಿದರೆ ಸಾಧು ಇನ್‌ವೆಸ್ಟ್ ಮಾಡಿರುವ ಡಬಲ್ ಜೇಬು ಸೇರುವುದು ಖಂಡಿತ. ಸಾಧು ಖುಷಿಗೆ ಮತ್ತೊಂದು ...ವೆಂದರೆ ಅವರ '90' ಚಿತ್ರ ಸಂತೋಷ್‌ನಂಥ ಕಮರ್ಷಿಯಲ್ ...ಂದಿರದಲ್ಲಿ ಬಿಡುಗಡೆಯಾಗುತ್ತಿರುವುದು. ಹಿಂದೆ ಅವರೇ ...ನಟರಾಗಿ ನಟಿಸಿದ್ದ 'ತಿಮ್ಮರಾಯಿ', 'ತರಿಕೆರೆ ಏರಿಮೇಲೆ' ತರಹದ ...ಸು ಥಿಯೇಟರಿಗೆ ಬಂದಿದ್ದೂ ಹೋಗಿದ್ದೂ ಯಾರಿಗೂ ...ಗಲಿಲ್ಲ. ಇಂತದ್ದರಲ್ಲಿ ಸಾಧುರಂಥ ಕಾಮಿಡಿ ನಟನ ಸಿನಿಮಾ ...ಷ್ ಸೇರಿದಂತೆ ರಾಜ್ಯಾದ್ಯಂತ ತೆರೆ ಕಾಣುತ್ತಿರುವುದು ಸಹಜವಾಗೇ ...ಹೊಡೆದಿರುವ ಖುಷಿಗೆ ಕಾರಣವಾಗಿದೆ.

...0' ಚಿತ್ರವನ್ನು ನಿರ್ದೇಶಿಸಿರುವ ಲಕ್ಕಿ ಶಂಕರ್ ಸಾಧುಗೆ ಒಗ್ಗುವಂಥ ...ಬಿ' ಮತ್ತು 'ದಶಾವತಾರ' ಎಂಬ ಎರಡು ಸಿನಿಮಾಗಳಿಗೆ ಸ್ಕ್ರಿಪ್ಟ್ ...ಸಿಟ್ಟಿದ್ದಾರಂತೆ. ದಿನಕ್ಕೆ ಒಂದು ಲಕ್ಷ ರೂಪಾಯಿ ಸಂಭಾವನೆ ...ತ್ತಿರುವ ಸಾಧು ಇನ್ನು ಲೋ ಬಜೆಟ್ ಸಿನಿಮಾಗಳನ್ನು ನಿರ್ಮಿಸಿ ತುಂಬಿಸಿಕೊಳ್ಳುವುದು ಗ್ಯಾರೆಂಟಿ!

ಮಹೇಂದರ್ ಮುನಿಸು?




ದ್ವಾರಕೀಶ್ ನೇತೃತ್ವದ ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿ ಸಿನಿಮಾಗಳನ್ನು ವೀಕ್ಷಿಸುತ್ತಿರುವ ಸಂದರ್ಭದಲ್ಲೇ ಆ ಸಮಿತಿಯಲ್ಲಿ ಅಪಸ್ವರ ಎದ್ದಿದೆ. ಒಂದು ಮೂಲದ ಪ್ರಕಾರ ಹಿರಿಯ ನಿರ್ದೇಶಕ ಮಹೇಂದರ್ ಈ ಆಯ್ಕೆ ಸಮಿತಿಯಲ್ಲಿದ್ದರೂ ಕೆಲವು ದಿನಗಳಿಂದ ಸಿನಿಮಾಗಳನ್ನು ವೀಕ್ಷಿಸದೇ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಕೆಲವರು ಹೇಳುವ ಪ್ರಕಾರ ಆಯ್ಕೆ ಸಮಿತಿಯ ಅಧ್ಯಕ್ಷರಾದ ದ್ವಾರಕೀಶ್ ಯಾವುದೇ ವಿಷಯವನ್ನು ತಮ್ಮೊಂದಿಗೆ ಚರ್ಚಿಸುವುದಿಲ್ಲ ಎಂದು ಮಹೇಂದರ್‌ಗೆ ಬೇಸರವಾಗಿದೆಯಂತೆ. ಆದರೆ ಇನ್ನೂ ಕೆಲವರು ಹೇಳುವ ಪ್ರಕಾರ ದಿನಕ್ಕೆ ಮೂರು ಮೂರು ಸಿನಿಮಾ ನೋಡುವುದರಿಂದ ಮಹೇಂದರ್‌ಗೆ ಬೋರಾಗುತ್ತಿದೆಯಂತೆ. ಈ ಕಾರಣಗಳ ಹೊರತಾಗಿ ಮತ್ತೊಂದು ಕುತೂಹಲಕಾರಿ ಕಾರಣವೂ ಕೇಳಿಬರುತ್ತಿದೆ. ಅದೇನೆಂದರೆ ಭಾರತಿ ವಿಷ್ಣುವರ್ಧನ್ ಅವರು ಈ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಒಪ್ಪದ ನಂತರ ತನ್ನನ್ನೇ ಹೊಸ ಅಧ್ಯಕ್ಷನನ್ನಾಗಿ ಆಯ್ಕೆ ಮಾಡುತ್ತಾರೆ ಎಂಬ ನಿರೀಕ್ಷೆಯಲ್ಲಿ ಮಹೇಂದರ್ ಇದ್ದರಂತೆ. ಯಾಕೆಂದರೆ ಮಹೇಂದರ್ ಬರೀ ನಿರ್ದೇಶಕ ಮಾತ್ರವಲ್ಲ, ಆತ ಬಿಜೆಪಿಯ ಕಟ್ಟಾ ಬೆಂಬಲಿಗರು. ಅಷ್ಟೇ ಅಲ್ಲ, ಬಿಜೆಪಿ ಟಿಕೆಟ್‌ನಲ್ಲಿ ವಿಧಾನಸಭೆಗೂ ಸ್ಪರ್ಧಿಸಿದ್ದರು. ಹೀಗಾಗಿ ಬಿಜೆಪಿ ಸದಸ್ಯ ಮತ್ತು ಹಿರಿಯ ನಿರ್ದೇಶಕ ಎಂಬ ಎರಡು ಕಾರಣಕ್ಕಾಗಿ ತನ್ನನ್ನು ಅಧ್ಯಕ್ಷನನ್ನಾಗಿ ಮಾಡುತ್ತಾರೆ ಎಂಬ ಆಸೆ ಅವರಲ್ಲಿತ್ತು. ಆದರೆ ಅದು ಈಡೇರದಿದ್ದರಿಂದ ಈಗ ಬಂಡಾಯವೆದ್ದಿದ್ದಾರಂತೆ!

ಜಾಹೀರಾತಲ್ಲೇ ಸಿನಿಮಾ ತೋರಿಸ್ತಾರೆ!

ನಿರ್ಮಾಪಕ ಮುನಿರತ್ನಂ ನಾಯ್ಡು ಮತ್ತು ನಾಯಕ ನಟ ಉಪೇಂದ್ರ ನಡುವಿನ ಸಂಬಂಧ ಎಷ್ಟು ಗಾಢವಾಗಿದೆಯೋ ಅಷ್ಟೇ ನಿಗೂಢವಾಗಿಯೂ ಇದೆ. ಪ್ರತಿ ಬಾರಿ ಸೆಪ್ಟೆಂಬರ್ 18 -




ಅಂದರೆ ಉಪ್ಪಿಯ ಬರ್ತಡೇ ದಿನದಂದು ಪತ್ರಿಕೆಯಲ್ಲಿ ಶುಭ ಹಾರೈಸಿ ಜಾಹೀರಾತು ನೀಡುವ ಜೊತೆಗೆ ಅವರೊಂದಿಗೆ ಒಂದು ಹೊಸ ಸಿನಿಮಾ ಅನೌನ್ಸ್ ಮಾಡುವುದು ಮುನಿರತ್ನಂ ಅವರ ಹವ್ಯಾಸ. ಹೀಗೆ ಅನೌನ್ಸ್ ಮಾಡಿದ ಹೊಸ ಸಿನಿಮಾ ಆನಂತರ ಸೆಟ್ಟೇರುವುದೇ ಇಲ್ಲ ಎಂಬುದು ಬೇರೆ ಮಾತು.

ಈಗ ಮುನಿರತ್ನಂ ನಾಡಿದ್ದು ಸೆಪ್ಟೆಂಬರ್ 18 ರಂದು ಉಪ್ಪಿ ನಾಯಕನಾಗಿ, ರಮ್ಯ ನಾಯಕಿಯಾಗಿ ನಟಿಸಲಿರುವ, ಸಾಧುಕೋಕಿಲ ನಿರ್ದೇಶಿಸಲಿರುವ ಹೊಸ ಚಿತ್ರ ವೊಂದನ್ನು ಅನೌನ್ಸ್ ಮಾಡುತ್ತಾರಂತೆ. ಈ ಹೊಸ ಚಿತ್ರದ ಜಾಹೀರಾತು ಸೆಪ್ಟೆಂಬರ್ 18 ರಂದು ಎಲ್ಲಾ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲಿದೆ.



ವಾಸ್ತವವಾಗಿ ಇವರು 'ಉದಯರಾಗ' ಎಂಬ ಮಲಯಾಳಂ ಚಿತ್ರವೊಂದರ ರೀಮೇಕ್‌ಅನ್ನು ಉಪ್ಪಿ ಬರ್ತಡೇ ದಿನದಂದು ಆರಂಭಿಸಬೇಕೆಂದು ಪ್ಲ್ಯಾನ್ ಮಾಡಿದ್ದರು. ಆದರೆ ಇತ್ತೀಚಿಗೆ ಬಂದ ಸುದ್ದಿ ಪ್ರಕಾರ ಈಗ ರಿಮೇಕ್ ಬದಲು ಒಂದು ಸ್ವಮೇಕ್ ಚಿತ್ರವನ್ನೇ ಮಾಡಲು ಮುನಿ ನಿರ್ಧರಿಸಿದ್ದಾರಂತೆ. ಹೇಗೂ ಜಾಹೀರಾತು ನೀಡಿದ ನಂತರ ಆ ಚಿತ್ರವೇನು ಆರಂಭವಾಗುವುದಿಲ್ಲ ತಾನೇ? ಹೀಗಾಗಿ ಸ್ವಮೇಕ್ ಆದರೇನು, ರೀಮೇಕ್ ಆದರೇನು ಎಂದು ಗಾಂಧಿ ನಗರದವರು ಕುಹಕವಾಡುತ್ತಿದ್ದಾರೆ!



ಜರಾಸಂಧನ ಗಿಮಿಕ್!


ಇದೊಂದು ತಮಾಷೆಯೋ ಅಥವಾ ಕ್ರಿಯಾಶೀಲತೆಯೋ ಗೊತ್ತಾಗುತ್ತಿಲ್ಲ. ವಿಷಯ ಇಷ್ಟೇ. ನಾಡಿದ್ದು ಗಣೇಶ ಹಬ್ಬದ ದಿನದಂದೇ 'ಜರಾಸಂಧ' ಚಿತ್ರದ ಆಡಿಯೋ ಕ್ಯಾಸೆಟ್ ಅನ್ನು ಬಿಡುಗಡೆ ಮಾಡಲು ನಿರ್ದೇಶಕ ಶಶಾಂಕ್ ನಿರ್ಧರಿಸಿದ್ದಾರೆ. ಆದರೆ ಅವರು ಇದನ್ನು ಬಿಡುಗಡೆ ಮಾಡುತ್ತಿರುವುದು ಎಲ್ಲಿ ಗೊತ್ತಾ? ಚಿತ್ರದ ನಾಯಕ ನಟ ವಿಜಯ್ ಅವರ ಮನೆಯ ಮುಂದೆ ಹಾಕಿರುವ ಗಣೇಶ ಮಂಟಪದಲ್ಲಂತೆ. ಆಗ, ಗಣೇಶನ ಅನುಗ್ರಹವೂ ಸಿಗುತ್ತೆ ಮತ್ತು ಅಭಿಮಾನಿಗಳ ಬೆಂಬಲವೂ ಸಿಗುತ್ತೆ ಎಂಬುದು ಶಶಾಂಕ್ ಅವರ ನಂಬಿಕೆ.

ಅಂದಹಾಗೆ ವಿಜಯ್ ಅವರ ಮನೆಯ ಹೆಸರು 'ದುನಿಯಾ ಋಣ'. ದುನಿಯಾ ಚಿತ್ರದಿಂದ ನಾಯಕ ನಟನಾಗಿ ಬಡ್ತಿ ಪಡೆದ ವಿಜಯ್ ತನ್ನ ಮನೆಗೆ ಇಂತಹ ಹೆಸರಿಟ್ಟದ್ದು ಸಾಂದರ್ಭಿಕವೂ, ಸಹಜವೂ ಆಗಿದೆ. ಈಗ ಈ 'ದುನಿಯಾ ಋಣ'ದ ಅಂಗಳದಲ್ಲಿ ನಡೆಯುವ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ಬಹುತೇಕ ಎಲ್ಲಾ ನಾಯಕನಟರು ಬಂದುಹೋಗುತ್ತಾರಂತೆ. ಅಲ್ಲಿ ಗಣೇಶನ ಭಕ್ತರು ಮತ್ತು ವಿಜಯ್ ಅಭಿಮಾನಿಗಳ ಸಮ್ಮುಖದಲ್ಲಿ ಒಬ್ಬೊಬ್ಬ ನಾಯಕ ನಟ ಒಂದೊಂದು ಹಾಡನ್ನು ಬಿಡುಗಡೆ ಮಾಡುತ್ತಾರಂತೆ. ಇಂತಹ ಒಂದು ಐಡಿಯಾ ನಿರ್ದೇಶಕ ಶಶಾಂಕ್ ಅವರದ್ದು. ಒಂದು ವೇಳೆ ಹಾಡುಗಳು ಹಿಟ್ ಆದರೆ ಮುಂದಿನ ವರ್ಷ ಗಣೇಶ ಹಬ್ಬದ ದಿನದಂದು ಈ ರೀತಿ ಎಲ್ಲಾ ನಾಯಕನಟರ ಮನೆ ಮುಂದೆ ಆಡಿಯೋ ಸಮಾರಂಭ ನಡೆದರೂ ಆಶ್ಚರ್ಯಪಡಬೇಕಾಗಿಲ್ಲ. ಅಂತೂ ಗಣೇಶ ಹಬ್ಬದ ದಿನವನ್ನು ನಮ್ಮ ಸಿನಿಮಾದ ಜನರೂ ತಮ್ಮ ಸ್ವಾರ್ಥ, ಪ್ರಚಾರ ಮತ್ತು ವ್ಯಾಪಾರಕ್ಕಾಗಿ ಬಳಸಿಕೊಳ್ಳುತ್ತಿರುವುದು ನಿಮಗೆ ತಮಾಷೆಯಾಗಿ ಕಾಣಿಸುತ್ತಿಲ್ಲವೇ?

ಭಾನು ಈ ಭೂಮಿ ಒಂದಾಗಿದೆ!

ನಿರ್ದೇಶಕ ಶಶಾಂಕ್ ಅವರಿಗೆ ರೈಟ್ ಹ್ಯಾಂಡ್ ಆಗಿರುವ, ಕಳೆದ ಹದಿನೈದು ವರ್ಷಗಳಿಂದ ಚಿತ್ರರಂಗದಲ್ಲಿ ದುಡಿದಿರುವ ವೇಣುಗೋಪಾಲ್ ಈಗ ಚೊಚ್ಚಲ ಸಿನಿಮಾವನ್ನು ಆರಂಭಿಸಿದ್ದಾರೆ. ಮೊನ್ನೆ ಗೌರಿ ಹಬ್ಬದಂದು ಆ ಚಿತ್ರದ ಮುಹೂರ್ತ ನಡೆಯಿತು. ಕೆ.ಎ.ಎಸ್ ಅಧಿಕಾರಿಯಾಗಿರುವ ಬಿ.ಎಚ್. ಮಲ್ಲಿಕಾರ್ಜುನ್ ಕಥೆ ಚಿತ್ರಕತೆ ಸಂಭಾಷಣೆ ಬರೆದು ನಿರ್ಮಾಣವನ್ನೂ ಮಾಡುತ್ತಿದ್ದಾರೆ. 'ಆ ದಿನಗಳು' ಚಿತ್ರದಲ್ಲಿ ಬಚ್ಚನ್ ಪಾತ್ರದಲ್ಲಿ ನಟಿಸಿದ್ದ ಅರ್ಜುನ್ ನಾಯಕನಾಗಿರುವ ಈ ಚಿತ್ರಕ್ಕೆ ತಮಿಳಿನ ನಟಿ ಶರಣ್ಯಾ ಮೋಹನ್ ನಾಯಕಿಯಾಗಿ ಆಗಮಿಸಿದ್ದಾಳೆ.


ಮೆಟ್ಟಣ್ಣನ 'ತಂತ್ರ'!



ಗಿರೀಶ್ ಮೆಟ್ಟಣ್ಣನವರ್ ಈಗ ಹೊಸ 'ತಂತ್ರ' ಮಾಡಿದ್ದಾರೆ.

ಇದೇನಮ್ಮ ಮತ್ತೇನಾದರೂ ಈತ ಶಾಸಕರ ಭವನಕ್ಕೆ ಬಾಂಬ್ ಇಡಲು ರೆಡಿಯಾಗಿದ್ದಾರಾ? ಎಂದು ಪ್ರಶ್ನಿಸಬೇಡಿ. ಈತ ಈಗ 'ತಂತ್ರ' ಎಂಬ ಚಿತ್ರದಲ್ಲಿ ಹೀರೋ ಆಗಿ ನಟಿಸಿದ್ದಾರೆ. ಬಾಲಾಜಿ ಎಂಬ ಹೊಸಬ ನಿರ್ದೇಶಿಸಿರುವ ಈ ಚಿತ್ರ ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಚಿತ್ರೀಕರಣಗೊಳ್ಳುತ್ತಲೇ ಇತ್ತು. ಕಡೆಗೂ ಈ ಚಿತ್ರಕ್ಕೆ ಬಿಡುಗಡೆಯ ಯೋಗ ಬಂದಿದೆ. ಆದರೆ ಈಗಾಗಲೆ ಹಲವು ಸಿನಿಮಾಗಳಲ್ಲಿ ಮತ್ತು ಟಿವಿ ಧಾರಾವಾಹಿಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಮೆಟ್ಟಣ್ಣನವರ್ ತನಗೆ ನಟನೆ ಗೊತ್ತಿಲ್ಲ ಎಂದು ಸಾಬೀತುಪಡಿಸಿದ್ದಾರೆ. ಹಾಗಿರುವಾಗ ಆತ ಈ ಚಿತ್ರದಲ್ಲಿ ಅದೇನು 'ತಂತ್ರ' ಮಾಡಿದ್ದಾನೋ ಆತನೇ ಬಲ್ಲ!


ಪುಷ್ಪಕ ವಿಮಾನದಲ್ಲಿ ಹೊಗೆಯಾಟ!



ಅದು 1988 ರ ಸುಮಾರು...

ಬೆಂಗಳೂರಿನ ವಿಂಡ್ಸರ್‌ಮ್ಯಾನರ್ ಹೋಟೇಲಿನಲ್ಲಿ ಸಿಂಗೀತಂ ಶ್ರೀನಿವಾಸ್ ನಿರ್ದೇಶನದ, ನಟ ರಾಮ್‌ಕುಮಾರ್ ತಂದೆ ಶೃಂಗಾರ್ ನಾಗರಾಜ್ ನಿರ್ಮಾಣದ 'ಪುಷ್ಪಕ ವಿಮಾನ' ಚಿತ್ರೀಕರಣ ನಡೆಯುತ್ತಿತ್ತು. ಅದೇ ಹೊತ್ತಿಗೆ ಸಾರ್ಕ್ ಸಮ್ಮೇಳನ ಕೂಡ ನಡೆಯುತ್ತಿದ್ದು ಪ್ರಪಂಚದ ನಾನಾ ಮೂಲೆಗಳಿಂದ ಬಂದಿದ್ದ ಪ್ರತಿನಿಧಿಗಳೂ ವಿಂಡ್ಸರ್ ಮ್ಯಾನರ್ ನಲ್ಲೇ ಉಳಿದುಕೊಂಡಿದ್ದರು.

ಹಿಂದೆ ರಾಜೀವ್ ಗಾಂಧಿ ಉಳಿದುಕೊಂಡಿದ್ದ ಕೋಣೆಯಲ್ಲೇ ಚಿತ್ರದ ಹೀರೋ ಕಮಲ್ ಹಾಸನ್ ನಾಯಕಿ ಅಮಲಾಗೆ ಕಾಳು ಹಾಕುವ ದೃಶ್ಯದ ಚಿತ್ರೀಕರಣ ಸಾಗುತ್ತಿತ್ತು. ಹೋಟೆಲಿನ ಯಾವುದೇ ಕೋಣೆಯಲ್ಲಿ ಬೆಂಕಿ ಅಥವಾ ಹೊಗೆ ಕಾಣಿಸಿಕೊಂಡರೆ ಅಲರ್ಟ್ ಆಗಲು ಸೈರನ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಚಿತ್ರೀಕರಣ ನಡೆಯುತ್ತಿದ್ದಾಗ ಲೈಟಿಂಗ್‌ಗೆ ಬಳಸಿದ್ದ ಪೇಪರ್‌ಗೆ ಶಾಖ ಹೆಚ್ಚಾಗಿ ಬೆಂಕಿ ಹೊತ್ತಿಕೊಂಡಿತು. ಇಷ್ಟೇ ಇಷ್ಟು ಹೊಗೆ ತಾಗುತ್ತಿದ್ದಂತೇ ಸೈರನ್ನು ರೊಯ್ಯನೆ ಕೂಗಲು ಶುರು ಮಾಡಿತು. ದೇಶವಿದೇಶಗಳಿಂದ ಬಂದಿದ್ದ ಡೆಲಿಗೇಟುಗಳು ಜೀವಭಯಕ್ಕೆ ಬಿದ್ದು ಹೋಟೆಲಿನಿಂದ ಹೊರ ದೌಡಾಯಿಸಲು ಶುರು ಮಾಡಿದ್ದರು.



ಆಗ ಜಾಗೃತಗೊಂಡಿತು ನೋಡಿ ಛಾಯಾಗ್ರಾಹಕ ಬಿ.ಸಿ.ಗೌರಿಶಂಕರ್ ಅವರ ಕ್ರಿಯಾಶೀಲ ಪ್ರಜ್ಞೆ. ಇದ್ದಬದ್ದವರೆಲ್ಲಾ ಎದ್ನೋ ಬಿದ್ನೋ ಅಂತಾ ಓಡುತ್ತಿದ್ದರೆ, ಗೌರಿಶಂಕರ್ ಮಾತ್ರ ತಣ್ಣಗೆ ಕ್ಯಾಮೆರಾ ಆನ್ ಮಾಡಿಕೊಂಡು ಆ ಚಿತ್ರಣವನ್ನು ಸೆರೆಹಿಡಿಯಲು ನಿಂತರು. ಅಷ್ಟು ಸಣ್ಣ ಹೊಗೆ ಯಾರ ಜೀವವನ್ನೂ ತೆಗೆಯಲಿಲ್ಲ ಅನ್ನೋದು ಬೇರೆ ಮಾತು.

ನಂತರ ಇದೇ ದೃಶ್ಯವನ್ನು 'ಪುಷ್ಪಕ ವಿಮಾನ'ದಲ್ಲಿ ನಟ ಲೋಕನಾಥ್ ತೀರಿಕೊಂಡ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿತ್ತು. ದೃಶ್ಯ ಅಷ್ಟು ನೈಜವಾಗಿ ಬಂದಿತ್ತು.

ಗೌರಿಶಂಕರ್‌ರಂಥ ಕ್ರಿಯಾಶೀಲ ಛಾಯಾಗ್ರಾಹಕನ ಸಮಯಪ್ರಜ್ಞೆ ಮತ್ತು ಸಿನಿಮಾ ಪ್ರೀತಿಗೆ ಈ ಪ್ರಕರಣ ಸಾಕ್ಷಿ...

• ಅರುಣ್

...ಡ್ಡಿ, ಚೆಡ್ಡಿಗಳು ಏನೇ ಲಾಗ ಹಾಕಿದರೂ ಉತ್ತರ ...ಟಕ ಸಂಸ್ಕೃತಿ ಎಂದೂ ಹಿಂದೂತ್ವ ಅಥವಾ ವೈದಿಕ ...ಮ ನೆರಳಾಗಲಾರದು. ಆಧ್ಯಾತ್ಮ ರಂಗದಲ್ಲಿ ಬಸವಣ್ಣ ...ಧಿಸಿದನೋ ಗೊತ್ತಿಲ್ಲ, ಆದರೆ ದೈನಂದಿನ ಬದುಕ್ಕಿನ ...ಆಚರಣೆಗಳನ್ನು ಸರಳಗೊಳಿಸಿದ. ಮದುವೆ ಇರಲಿ, ...ವಿರಲಿ, ಉತ್ತರ ಕನ್ನಡದ ಆಚರಣೆಗಳು ಬಹಳ ...ಮತ್ತು ಯಾರಿಗೂ ಹೊರೆಯಾಗಲಾರವು. ಇವುಗಳ ...ವರವಾಗಿ ಇನ್ನೊಮ್ಮೆ ಬರೆಯುವೆ.

-ಪ್ರಕಾಶ ಬಿಸ್ನಾಗಾರ, ಬೆಂಗಳೂರು

...ಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ...ೋಲನಕ್ಕೆ ವಿದ್ಯಾರ್ಥಿಗಳು, ವಕೀಲರು, ಡಾಕ್ಟರ್‌ಗಳು, ...ಇವರೆಲ್ಲಾ ಬೀದಿಗಿಳಿದು ಬೆಂಬಲ ಸೂಚಿಸಿದ್ದಾರೆ. ...ಇವರಲ್ಲಿ ಆಷಾಢಭೂತಿಗಳು ಎಷ್ಟು ಜನ? ಈ ...ರ್ಗಗಳಲ್ಲಿ ಅದೆಷ್ಟು ಜನರು ಪದವಿ ನಂತರ ಭರ್ಜರಿ ...ಮಿಗೆ ಅವಕಾಶ ಇರುವ ಸರ್ಕಾರಿ ನೌಕರಿಯೇ ...ಎನ್ನುವವರಿಲ್ಲ? ಮುಂಬೈಯ ಘೋರ ಭೂಗತ ...ಸಂತೋಷ್ ಶೆಟ್ಟಿಯನ್ನು ಮುಂಬೈ ಪೊಲೀಸರು ...ಂಡ್‌ನಿಂದ ಹಿಡಿದು ತಂದಾಗ, ಅವನ ಕೇಸ್ ...ಕೊಳ್ಳಲು ಅದೆಷ್ಟು ವಕೀಲರು ಕ್ಯೂ ನಿಂತಿಲ್ಲ, ಅದೆಷ್ಟು ...ಗಳು ಆ ಪಾತಕಿಗೆ ಖೋಟಾ ಅನಾರೋಗ್ಯದ ...ಕೇಟ್ ಕೊಟ್ಟು ಅವನ ಜೈಲುವಾಸ ತಪ್ಪಿಸಲು ...ಸುತ್ತಿಲ್ಲ? ಅದೆಷ್ಟು ಸಿ.ಎ.ಗಳು ಈ ಭೂಗತ ...ಮ ದುಷ್ಟ ಕಮಾಯಿಯನ್ನು ಪ್ರಾಮಾಣಿಕ ವ್ಯಾಪಾರದ ...ಯಿಯೆಂದು ತೋರಿಸಲು ಖೋಟಾ ಅಕೌಂಟ್ಸ್ ...ರಿಸುತ್ತಿಲ್ಲ?

...ಮಾಜದ ಸರ್ವ ಜನರ ಆರೋಗ್ಯದ ಹೊಣೆ ಹೊತ್ತ ...ಗಳು ಯಕಶ್ಚಿತ್ ಹೊಟ್ಟೆನೋವನ್ನು ಕ್ಯಾನ್ಸರ್ ಎಂದು ...ಹೇಳಿ ಲಕ್ಷಗಟ್ಟಲೆ ಹಣ ಪೀಕಿಸುವ ಡಾಕ್ಟರ್‌ಗಳು ... ಸಮಾಜದ ಅತಿದೊಡ್ಡ ಡಕಾಯಿತರು ಎಂದು ...ಮು ಹೊಂದಿರುವಾಗ; ದೇವರು-ಧರ್ಮದ ...ಪುರೋಹಿತರು, ಮಠಾಧೀಶರು ಮುಗ್ಧ ಭಕ್ತರನ್ನು ...ವಾಗಿ ಸುಲಿಯುವಾಗ; ಸಮಾಜದಲ್ಲಿ ಅದ್ಹೇಗೆ ..., ಪ್ರಾಮಾಣಿಕತೆ, ಬೆಳೆಯಲು ಸಾಧ್ಯ? ನಮ್ಮ ಸಮಾಜದಲ್ಲಿ ಒಟ್ಟಾರೆ ಎಲ್ಲೆಡೆ ಅಪ್ರಾಮಾಣಿಕತೆಯೇ ವಿಜೃಂಭಿಸುತ್ತಿರುವಾಗ, ಅಣ್ಣಾ ಹಜಾರೆಯವರ ಜನಲೋಕಪಾಲ ವಿಧೇಯಕ ಅದೆಷ್ಟು ಪರಿಣಾಮ ಬೀರಬಲ್ಲದು ಎಂಬುದು ದೊಡ್ಡ ಪ್ರಶ್ನೆ.


-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಇಂದು ದೇಶಾದ್ಯಂತ ನಡೆಯುತ್ತಿರುವ ಭ್ರಷ್ಟಾಚಾರ ವಿರುದ್ಧದ ಹೋರಾಟ ಸರ್ಕಾರಿ ನೌಕರರು, ಶಾಸಕರು ಮತ್ತು ಮಂತ್ರಿಗಳನ್ನು ಮಾತ್ರ ಜನಲೋಕಪಾಲ್ ಮಸೂದೆಯಲ್ಲಿ ತರಬೇಕೆಂದು ಉದ್ದೇಶಿಸಿದಂತಿದೆ. ಖಾಸಗಿ ಕ್ಷೇತ್ರಗಳಾದ ಕಾರ್ಪೊರೇಟ್ ವಲಯ, ವಿದ್ಯಾಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು ಮತ್ತು ವೃತ್ತಿ ನಿರತದಾರರಾದ ವಕೀಲರು, ಲೆಕ್ಕಪರಿಶೋಧಕರು ಮುಂತಾದವುಗಳನ್ನು ಈ ಮಸೂದೆಯಡಿ ತರಬೇಕಾಗಿದೆ. ಖಾಸಗಿ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಂದ ಪಡೆಯುತ್ತಿರುವ ಮಿತಿಮೀರಿದ ಡೊನೇಷನ್ ಮತ್ತು ಫೀಜುಗಳಿಂದ ತತ್ತರಿಸಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದುಬಾರಿ ಶುಲ್ಕ ವಸೂಲಿಯಿಂದ ಜನ ತೊಂದರೆಗೊಳಗಾಗಿದ್ದಾರೆ. ಇನ್ನು ಲಾಯರ್ಸ್ ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್ ಗಳಂತಹ ವೃತ್ತಿನಿರತದಿಂದ ಪಡೆಯುವ ಸೇವೆಯು, ಕೊಡುವ ಸಂಭಾವನೆಗೆ ತಕ್ಕುದಾಗಿರುವುದಿಲ್ಲವೆಂಬ ಭಾವನೆ ಮೂಡಿದೆ. ಸಮಾನ ಕೆಲಸಕ್ಕೆ ಸಮಾನ ವೇತನವಿಲ್ಲದ್ದು ಮತ್ತು ಕೊಡುವ ಸಂಭಾವನೆಗೆ ಪಡೆಯುವ ಸೇವೆಯು ಸಮಾನವಿಲ್ಲದ್ದು ಸಹ ಭ್ರಷ್ಟಾಚಾರವೇ ಎಂದು ಪರಿಗಣಿಸಬೇಕು.

ಸರಿಯಾಗಿ 20 ವರ್ಷಗಳ ಹಿಂದೆ ದೇಶದಲ್ಲಿ ತಂದ ಉದಾರೀಕರಣ ಮತ್ತು ಖಾಸಗೀಕರಣದ ಅನುಕೂಲಗಳನ್ನು ಪಡೆದ ಕಾರ್ಪೊರೇಟ್ ವಲಯಗಳು ಇಂದು ಅಗಾಧ ಮೊತ್ತದ ಲಾಭ ಗಳಿಸುತ್ತಿದ್ದರೂ ಸಹ ದುರಾಶೆಗೆ ಬಿದ್ದು ಸರ್ಕಾರದ ಮಟ್ಟದಲ್ಲಿ ಭ್ರಷ್ಟಾಚಾರ ತೊಡೆದು ಹಾಕಿ ನಂತರ ಖಾಸಗಿ ಕ್ಷೇತ್ರವನ್ನು ಶುದ್ಧಿಗೊಳಿಸೋಣ ಎನ್ನುವುದಕ್ಕಿಂತ ಜೊತೆಜೊತೆಯಲ್ಲೇ ತಡೆಯುವುದು ಸರಿಯಾದುದು.

-ಎಚ್.ಕೆ. ಈರಪ್ಪ, ಬೆಂಗಳೂರು

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 14-9-2011 RNI No. KARKAN2005/1




ಭದ್ರಗೊಂಡ ಪ್ರಜ್ವಲ್

ಕಡೆಗೂ ಪ್ರಜ್ವಲ್‌ನನ್ನು ಪ್ರೇಕ್ಷಕರು ಕೈ ಹಿಡಿದಿದ್ದಾರೆ. 'ಸಿಕ್ಸರ್' ಚಿತ್ರದಿಂದ ಸಿನಿಮಾ ಜೀವನ ಆರಂಭಿಸಿದ ಪ್ರಜ್ವಲ್ ದೇವರಾಜ್ 'ಗೆಳೆಯ', 'ಮೆರವಣಿಗೆ', 'ಗಂಗೆ ಬಾರ ತುಂಗೆ ಬಾರ' ಹೀಗೆ ಒಂದರಹಿಂದೆ ಒಂದೊಂದಂತೆ ಚಿತ್ರಗಳಲ್ಲಿ ನಟಿಸಿದರೂ ಅವ್ಯಾವುವೂ ಹಿಟ್ ಆಗಲಿಲ್ಲ. ಮೊನ್ನೆ ಮೊನ್ನೆ ಬಂದ 'ಮಿಸ್ಟರ್ ಡೂಪ್ಲಿಕೇಟ್' ಕೂಡಾ ಪ್ರಜ್ವಲ್‌ನ ಕೈ ಹಿಡಿಯಲಿಲ್ಲ.

ಆದರೆ 'ಧಿಮಾಕು' ಖ್ಯಾತಿಯ ಯುವ ನಿರ್ದೇಶಕ ಮಹೇಶ್ ನಿರ್ದೇಶನದ 'ಭದ್ರ' ಈಗ ಥಿಯೇಟರಿನಲ್ಲಿ ಭದ್ರವಾಗಿ ಕುಂತಿದೆ. 'ಜೋಗಯ್ಯನ' ನಿರೀಕ್ಷೆ ಹುಸಿಯಾಗಿದ್ದು 'ಭದ್ರ'ನಿಗೆ ಪ್ಲಸ್ ಪಾಯಿಂಟ್ ಆಗಿದೆ. ಕಳೆದ ಎರಡು ವಾರಗಳಿಂದ 'ಭದ್ರ'ನ ಕಲೆಕ್ಷನ್ ದಿನೇದಿನೇ ಏರುತ್ತಿದೆ.

ಅಪರೂಪಕ್ಕೆ ಪ್ರಜ್ವಲ್ ಸಿನಿಮಾ ಹಿಟ್ ಆಗಿದೆ. ಇಂಥ ಸಂದರ್ಭದಲ್ಲಿ ಪ್ರಜ್ವಲ್ ಹಿಂದಿನಂತೆ ಮತ್ತೆ ಮೈಮರೆಯದಿರಲಿ.



ಅಲ್ಲಿದೆ ನಮ್ಮನೆ ಇಲ್ಲಿರುವುದು ಸುಮ್ಮನೆ ರೀನಾ ಮೆಹ್ತಾ

ಅಡ್ಡದಲ್ಲಿ ಬಿದ್ದ ಪ್ರೇಮ್!

'ಜೋಗಯ್ಯ' ಚಿತ್ರ ಅಬ್ಬರದ ಪ್ರಚಾರ ಪಡೆದರೂ ಬಾಕ್ಸ್ ಆಫೀಸಿನಲ್ಲಿ ಅದನ್ನು ಅಡ್ಡಡ್ಡ ಮಲಗಿಸಿದ ಪ್ರೇಮ್ ಈಗ ಅಡ್ಡದಲ್ಲಿ ಬಿದ್ದಿದ್ದಾರೆ! ಇದ್ಯಾವ ಅಡ್ಡ ಅಂತಾ ತಲೆ ಕೆರೆದುಕೊಳ್ಳಬೇಡಿ. 'ಮೆರವಣಿಗೆ' ಖ್ಯಾತಿಯ ಮಹೇಶ್ ಬಾಬು ನಿರ್ದೇಶಿಸುತ್ತಿರುವ ಹೊಸ ಚಿತ್ರದ ಹೆಸರು 'ಅಡ್ಡ'! ಈ ಚಿತ್ರದಲ್ಲಿ ಗಿಮಿಕ್ ರಾಜ ಪ್ರೇಮ್ ಹೀರೋ!

ತಮಿಳಿನಲ್ಲಿ ಸೂಪರ್ ಹಿಟ್ ಆಗಿದ್ದ 'ಸುಬ್ರಮಣ್ಯ ಪುರಂ' ಚಿತ್ರದ ರಿಮೇಕ್ ಈ 'ಅಡ್ಡ'. 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದಲ್ಲಿ ಹೀರೋ ಆಗಿದ್ದ ಪ್ರೇಮ್ ಪ್ರಥಮ ಚುಂಬನರೆ ದಂತ ಭಗ್ನಂ ಅನ್ನೋ ಹಾಗೆ ಮುಗ್ಗರಿಸಿ ಬಿದ್ದಿದ್ದರು. ಆದರೂ ಆತ ಮತ್ತೊಮ್ಮೆ ಹೀರೋ ಆಗಲು ಹೊರಟಿರುವುದು, ಅದಕ್ಕೆ ಮಹೇಶ್ ಬಾಬು ವೇದಿಕೆ ಒದಗಿಸುತ್ತಿರುವುದನ್ನು ನೋಡಿದರೆ ನಿರ್ಮಾಪಕ ಮೂಕ ಮುರಳಿ ಕೃಷ್ಣರ ಬಗ್ಗೆ 'ಅಯ್ಯೋ ಪಾಪ' ಅನ್ನಿಸುತ್ತದೆ.



'ಅಲ್ಲಿದೆ ನಮ್ಮನೆ ಇಲ್ಲಿರುವುದು ಸುಮ್ಮನೆ' ಎಂಬ ಹೊಸ ಚಿತ್ರ ಈಗ ಬಹುತೇಕ ಸಂಪೂರ್ಣಗೊಂಡಿದ್ದು ಇನ್ನೇನು ಬಿಡುಗಡೆಗೆ ತಯಾರಾಗಿದೆ. ಅಂದಹಾಗೆ ಗೋಪಿ ಪೀಣ್ಯಾ ಎಂಬುವವರು ಈ ಚಿತ್ರದ ಮುಖಾಂತರ ಸ್ವತಂತ್ರ ನಿರ್ದೇಶಕರಾಗಿ ಬಡ್ತಿ ಪಡೆದಿದ್ದಾರೆ. ಕಳೆದ ಹಲವಾರು ದಶಕಗಳಿಂದ ಸಹಾಯಕ ನಿರ್ದೇಶಕರಾಗಿ ಅಪಾರ ಅನುಭವ ಪಡೆದಿರುವ ಗೋಪಿ ಪೀಣ್ಯಾ ಮುಖ್ಯವಾಗಿ ನಾಗತಿಹಳ್ಳಿ ಚಂದ್ರಶೇಖರ್‌ರವರ ಬಹುತೇಕ ಚಿತ್ರಗಳಲ್ಲಿ ಸಹಾಯಕರಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.


ಹೀಗಾಗಿ ಸಹಜವಾಗಿಯೇ ಗೋಪಿಯವರ ಮೇಲೆ ನಾಗತಿಹಳ್ಳಿಯವರ ಪ್ರಭಾವ ಬಿದ್ದಿದೆ. ಇವರ ಚಿತ್ರದ ನಿರ್ಮಾಪಕರು ಅಮೆರಿಕದವರು. ಚಿತ್ರದ ಸುಮಾರು 60 ಭಾಗವನ್ನು ಅಮೆರಿಕದಲ್ಲೇ ಚಿತ್ರೀಕರಿಸಿದ್ದಾರೆ. ನಾಗತಿಹಳ್ಳಿ ತರಹ ಇವರೂ ನಿರ್ಮಾಪಕರನ್ನೇ ನಾಯಕನಟನನ್ನಾಗಿ ಮಾಡಿದ್ದಾರೆ. ಚಿತ್ರದ ಕಥಾವಸ್ತುವನ್ನು ಅಮೆರಿಕದಲ್ಲಿ ನೆಲೆಸಿರುವ ಭಾರತೀಯನೊಬ್ಬನ ಮಾನಸಿಕ ತಳಮಳದ ಸುತ್ತ ಹೆಣೆದಿದ್ದಾರೆ. ಅಂದರೆ ಇದು ಕೂಡ 'ಅಮೆರಿಕಾ ಅಮೆರಿಕಾ' ಚಿತ್ರದ ಮಾದರಿಯಲ್ಲೇ ಇರಬಹುದು ಎಂಬ ಗುಮಾನಿ ಬರುತ್ತದೆ. ಆದರೂ ಉದ್ಯಮದಲ್ಲಿ ಗೋಪಿ ಪೀಣ್ಯಾ ಬಗ್ಗೆ ಅನೇಕರಿಗೆ ಉತ್ತಮ ಭರವಸೆಯಿದೆ. ಒಂದು ಮಾತಂತೂ ನಿಜ. ಈ ಚಿತ್ರದ ಬಹುತೇಕ ಭಾಗ ಅಮೆರಿಕದ ವಿವಿಧ ಪ್ರದೇಶಗಳಲ್ಲೇ ಚಿತ್ರೀಕರಣ ಗೊಂಡಿರುವುದರಿಂದ ಚಿತ್ರ ಶ್ರೀಮಂತವಾಗಿ ಮತ್ತು ಸುಂದರವಾಗಿ ಮೂಡಿಬರುವುದರಲ್ಲಿ ಸಂಶಯವಿಲ್ಲ. ಉಳಿದಂತೆ ಕಥೆ ಮತ್ತು ನಟನೆ ಬಗ್ಗೆ ಆಮೇಲೆ ನೋಡ ಬೇಕಷ್ಟೆ. ಮೊದಲ ಚಿತ್ರಕ್ಕೆ ಪೀಣ್ಯಾದಿಂದ ಅಮೆರಿಕಕ್ಕೆ ಹಾರಿದ ಗೋಪಿಗೆ ನಮ್ಮ ಶುಭಾಶಯಗಳು.



ಕನ್ನಡ ಚಿತ್ರರಂಗದಲ್ಲಿ ಒಂದು 'ಹವಾಡ' ...

ದ್ವಾರಕೀಶ್ ಮತ್ತು ಭಾರತಿ ವಿಷ್ಣುವರ್ಧನ್ ... ನಡುವೆ ನಡೆಯುತ್ತಿದ್ದ ಕೋಳಿ ಜಗಳ ಈಗ ... ಅಧ್ಯಾಯ. ದ್ವಾರಕೀಶ್ ನಿರ್ಮಿಸುತ್ತಿರುವ, ... ನಾಯಕನಾಗಿ ನಟಿಸುತ್ತಿರುವ ಚಿತ್ರಕ್ಕೆ 'ವಿಷ್ಣುವರ್ಧನ' ... ಹೆಸರಿಟ್ಟದ್ದನ್ನು ಭಾರತಿ ವಿಷ್ಣುವರ್ಧನ್ ತೀವ್ರವಾಗಿ ... ಮಾತ್ರವಲ್ಲ, "ಯಾವುದೇ ಕಾರಣಕ್ಕೂ ಅವರ ... ವಿಷ್ಣುವರ್ಧನ್ ಹೆಸರಿಡಲು ನಾನು ಬಿಡುವುದಿಲ್ಲ" ... ಘೋಷಿಸಿದ್ದರು. ಈ ಬಗ್ಗೆ ಟಿ.ವಿ. ಚಾನಲ್‌ಗಳಲ್ಲಿ ಅ... ಪರಸ್ಪರ ದೋಷಾರೋಪಣೆ ಮಾಡಿದ್ದೂ ಉಂಟು. ... ಮಂಡಳಿಯ ಅಂಗಳದಲ್ಲಿ ಈ ಸಮಸ್ಯೆಗೆ ಪರಿಹಾರ ... ಆಗ ಕುಪಿತಗೊಂಡ ದ್ವಾರಕೀಶ್ "ನಾನು ಕೆ... ಮೆಟ್ಟಿಲೇರುತ್ತೇನೆ. ಅಗತ್ಯವಿದ್ದರೆ ಕೇಂದ್ರ ವಾರ್ತಾ... ಅಂಬಿಕಾ ಸೋನಿಯರವರನ್ನೂ ಭೇಟಿಯಾಗುತ್ತೇನೆ... ಎಂದೆಲ್ಲ ಗುಡುಗಿದ್ದರು.

ಕುಳ್ಳನಿಗೆ ದಕ್ಕಿದ ವಿಷ್ಣು



ಅಷ್ಟೇ ಅಲ್ಲ "ವಿಷ್ಣುವರ್ಧನ್ ಅವರೊಬ್ಬರ ಆಸ್ತಿಯಲ್ಲ. ಇಷ್ಟಕ್ಕೂ ವಿಷ್ಣುವರ್ಧನ್ ಹೆಸರಲ್ಲಿ ಅವರ ಬಳಿ ಪಾಸ್‌ಬುಕ್ ಇದೆಯಾ? ರೇಷನ್ ಕಾರ್ಡ್ ಇದೆಯಾ?" ಎಂದೆಲ್ಲ ... ಪಾಯಿಂಟ್ ಮಾತನಾಡಿದ್ದರು. ಈಗ ಈ... ಯನ್ನು ನಿರ್ಮಾಪಕರ ಸಂಘದ ನೂತನ ... ಮುನಿರತ್ನಂ ನಾಯ್ಡು ಮತ್ತು ಪ್ರಧಾನ ಕಾಯ... ಸೂರಪ್ಪ ಬಾಬು ಅವರು ಬಗೆಹರಿಸಿದ್ದಾರೆ.




ಇದೇ ಸೆಪ್ಟೆಂಬರ್ 18 ರಂದು ವಿಷ್ಣು ಅಭಿಮ... ಎಂದಿನಂತೆ ವಿಷ್ಣು ಅವರ ಹುಟ್ಟಿದ ಹಬ್ಬವನ್ನು ವಿಜೃಂಭಣೆ... ಆಚರಿಸಲು ನಿರ್ಧರಿಸಿದ್ದಾರೆ.

ಆದರೆ ಅದಕ್ಕೂ ಮೊದಲು ರಾಜ್ಯ ಚಲನಚಿತ್ರ ಪ್ರಶಸ್ತಿಗಳು ... ಆಗಬಹುದು ಎಂದೂ ಆ ಅಭಿಮಾನಿಗಳು ಕಾಯುತ್ತಿದ್ದಾರೆ. ನಿರ್ಮಾಪಕ ದ... ಅಧ್ಯಕ್ಷತೆಯ ಆಯ್ಕೆ ಸಮಿತಿ ಕಳೆದ ಎರಡು ವಾರಗಳಿಂದ ರಾಜ್ಯ ಪ್ರಶಸ್ತಿಗೆ ಬ... ಚಿತ್ರಗಳನ್ನು ವೀಕ್ಷಿಸುತ್ತಿದ್ದಾರೆ. 'ಆಪ್ತರಕ್ಷಕ' ಚಿತ್ರದ ಪಾತ್ರಕ್ಕಾಗಿ ತಮ್ಮ ಪ್ರೀತಿಯ... ಅತ್ಯುತ್ತಮ ನಾಯಕ ನಟ ಪ್ರಶಸ್ತಿ ಬಂದೇ ಬರುತ್ತದೆ ಎಂಬ ಆತ್ಮವಿಶ್ವಾಸ ಅಭಿಮ... ಉಕ್ಕಿ ಹರಿಯುತ್ತಿದೆ. ಆದರೆ ಕೆಲವರು ದ್ವಾರಕೀಶ್ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ... ವಿಷ್ಣುಗೆ ಪ್ರಶಸ್ತಿ ಸಿಗಲು ಅಡ್ಡಿಯಾಗಬಹುದು ಎಂಬ ಆತಂಕದಲ್ಲೂ ಇದ್ದಾ...

ಅದೇನೇ ಇರಲಿ, ಒಂದು ವೇಳೆ ಈ ಸಮಿತಿ ಸೆಪ್ಟೆಂಬರ್ 18 ರ ... ಪ್ರಶಸ್ತಿಯನ್ನು ಘೋಷಿಸಿದರೆ ಮತ್ತು ಅತ್ಯುತ್ತಮ ನಟ ಪ್ರಶಸ್ತಿ ವಿಷ್ಣುವ... ಬಂದರೆ ಖಂಡಿತವಾಗಿಯೂ ಈ ಬಾರಿಯ ವಿಷ್ಣು ಹುಟ್ಟುಹಬ್ಬಕ್ಕೆ ಒಂದು ವಿ... ಮೆರುಗು ಇರುತ್ತದೆ.

ಅಂಬಿ ಈಗ ಚೌಡಯ್ಯನಂತೆ!



ಎಸ್.ನಾರಾಯಣ್ ಎಂಬ ನಿರ್ದೇಶಕ ಇನ್ನು ಅದೆಷ್ಟು ಸಿನಿಮಾಗಳನ್ನು ಸುತ್ತಿ ಬಿಸಾಡುತ್ತಾರೋ ಗೊತ್ತಿಲ್ಲ, ತಾವು ಮಾಡಿದ ಸಿನಿಮಾ ಗೆಲ್ಲಲಿ, ಬಿಡಲಿ ತಮ್ಮಷ್ಟಕ್ಕೆ ತಾವು ರೀಲು ಸುತ್ತುತ್ತಲೇ ಇರುತ್ತಾರೆ. 'ವೀರಪರಂಪರೆ' ಎಂಬ ಸಿನಿಮಾದ ನಿರ್ದೇಶನ, ನಿರ್ಮಾಣ ಒಟ್ಟೊಟ್ಟಿಗೇ ಮಾಡಿ ಭರ್ಜರಿ ಕಾಸು ಮಾಡಿದ ನಾಣಿಯ ದುಡ್ಡನ್ನೆಲ್ಲಾ 'ದುಷ್ಟ' ನುಂಗಿ ಹಾಕಿದ. ಆದರೆ ಅದಕ್ಕೆಲ್ಲಾ ತಲೆ ಕೆಡಿಸಿಕೊಂಡು ಕೂರದ ನಾಣಿ ಈಗ ಕೊಬ್ರಿ ಮಂಜಣ್ಣನಿಗಾಗಿ 'ಶೈಲೂ' ಚಿತ್ರ ಮಾಡಿ ಮುಗಿಸಿದ್ದಾರೆ. ಅದು ತಮಿಳಿನ 'ಮೈನಾ' ಚಿತ್ರದ ಜೆರಾಕ್ಸು! ಈಗ ಮತ್ತೆ ನಾಣಿ ಕಣ್ಣು ಅಂಬಿ ಮೇಲೆ ಬಿದ್ದಿದೆ. ಜೊತೆಗೆ ಅವರ ತಾತನ ಮೇಲೂ ಕೂಡಾ! ಅಂಬರೀಷ್ ಪಿಟೀಲು ಚೌಡಯ್ಯನವರ ಮೊಮ್ಮಗ ಅನ್ನೋ ವಿಚಾರ ನಿಮಗೆ ಗೊತ್ತಲ್ಲಾ? ಈಗ ಚೌಡಯ್ಯನವರ ಹೆಸರನ್ನು ನಾಣಿ ಎನ್‌ಕ್ಯಾಷ್ ಮಾಡಲು ಹೊರಟಿದ್ದಾರೆ. ಅಂಬರೀಶ್ ನಟಿಸಲಿರುವ ಚಿತ್ರಕ್ಕೆ ನಾರಾಯಣ್ 'ಚೌಡಯ್ಯ' ಎಂದು ಹೆಸರಿಟ್ಟಿದ್ದಾರೆ. ಸಿನಿಮಾ ಇನ್ನೇನು ಆರಂಭವಾಗಲಿದೆಯಂತೆ. ನಾರಾಯಣ್ ಪುತ್ರ ಪಂಕಜ್ ಕೂಡಾ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾನಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Ph...
Fax : 26604536, E-mail :lankesh70@rediffmail.com, Printed at Rajhans Enterprises, ...